ರಂಜನೆ ಬೋಧನೆ ಪ್ರಬೋಧನೆ

# ಲಂಕೇಶ್

ಜುಲೈ 10, 2013 ಪುಟ 20 ರೂ. 14/-

ಕೆನ್ನೆತ್ ಆಂಡರ್ಸನ್
ಹೊಸ ಶಿಕಾರಿ ಕತೆ



## ಸೆಕ್ಸ್ ಬಾಂಬ್ ಶಕೀಲಾಳ ದುರಂತ ಕಥೆ

ಭಜರಂಗಿ ಕೈವಾಡ

## ಮಣಿಪಾಲ್: ಪೈ ರಿಪಬ್ಲಿಕ್‌ನಲ್ಲಿ ಗ್ಯಾಂಗ್ ರೇಪ್





ಮಂಡ್ಯ:
ಬ್ಲಿಂಗ್ ನಡೆಯುತ್ತಿದೆ
ಹುಷಾರ್


## KAS ಹಗರಣ CID ಗಮನಕ್ಕೆ ಇನ್ನಷ್ಟು ಮಾಹಿತಿ



## ಸಿರಿಗೆರೆ ಸ್ವಾಮಿಯ ಪಾಳೇಗಾರಿಕೆ

# ಆನೆಗಳ ಹೋರಾಟ ಮತ್ತು ಕೇದಾರನಾಥ

ಅಂಚಿನಿಂದ



ಪ್ರಜ್ಞಾವಂತರು ಸಾಕಷ್ಟು ಮುಂಚೆಯೇ ಮುನ್ನೆಚ್ಚರಿಕೆಗಳನ್ನು ಕೊಟ್ಟಿದ್ದರು. ಹೈಕೋರ್ಟ್‌ನ ಸೂಚನೆಯ ಮೇರೆಗೆ ತಜ್ಞರು ಕರ್ನಾಟಕದಲ್ಲಿ ಆನೆಗಳ ದಾಳಿಯ ಕುರಿತು ವರದಿ ಸಲ್ಲಿಸಿ, ಕೆಲವು ಮುಖ್ಯವಾದ ಸಲಹೆಗಳನ್ನು ನೀಡಿ ಒಂಬತ್ತು ತಿಂಗಳಾಗಿವೆ. ಉತ್ತರಾಂಚಲದ ನಿಸರ್ಗ ನಾಶದ ವಿರುದ್ಧ ಸುಂದರಲಾಲ್ ಬಹುಗುಣರಂಥವರು ಸೇರಿಕೊಂಡು ಮಾಡಿದ ಹೋರಾಟಕ್ಕೆ ಹಲವು ದಶಕಗಳಾಗಿವೆ. ಸ್ವತಃ ದೇಶದ ಪ್ರಧಾನಮಂತ್ರಿಯನ್ನೇ ಕಂಡು ಹಿಮಾಲಯದ ಸೂಕ್ಷ್ಮ ಪರಿಸರದ ಕುರಿತು ಮನವರಿಕೆ ಮಾಡಿಕೊಡುವ ಪ್ರಯತ್ನಗಳಾಗಿವೆ. ಆದರೆ ಬಂಡವಾಳಶಾಹಿ ಉದ್ದಿಮೆಪತಿಗಳ ಏಜೆಂಟರಾದ ಅಧಿಕಾರಸ್ಥರಿಗೆ ಇವ್ಯಾವುವೂ ಮುಖ್ಯವಾಗಿಲ್ಲ.




ಒಂದು ವಾರದಿಂದ ಎದ್ದು ಕಾಣುವ ಸುದ್ದಿಗಳು ಎರಡು. ಉತ್ತರಾಂಚಲದಲ್ಲಿ ಜನವಸತಿ ಇರುವೆಡೆಗೆಲ್ಲಾ ನೀರು ನುಗ್ಗಿದೆ. ಬೆಂಗಳೂರಿನೆಡೆಗೆ 'ಹಿಂದುಹಿಂದಾಗಿ ಪುಂಡಾನೆಗಳ ದಂಡು' ನುಗ್ಗಿದೆ. ಮನುಷ್ಯನು ನೂರಾರು ವರ್ಷಗಳಿಂದಲೂ, ಆದರಲ್ಲೂ ಕಳೆದ 20-30 ವರ್ಷಗಳಿಂದ ನೀರಿನ ತಾವುಗಳಿಗೆ ಮತ್ತು ಆನೆಗಳ ವಾಕಿಂಗ್‌ಪಾತ್‌ಗೆ ನುಗ್ಗಬಾರದ ರೀತಿಯಲ್ಲೆಲ್ಲಾ ನುಗ್ಗಿದ್ದು ಇಷ್ಟು ದೊಡ್ಡ ಸುದ್ದಿಯೇನೂ ಆಗಿಲ್ಲ. ಆದರೆ ಈಗ ಆನೆಗಳದ್ದು ಕೇವಲ ಸುದ್ದಿ ಸದ್ದು ಮಾತ್ರವಲ್ಲದೇ, ಅಧಿಕಾರಸ್ಥ ಜನರೂ ಸಹ ಕೂಡಲೇ ಪ್ಯಾಕೇಜ್‌ಗಳನ್ನು, ಯೋಜನೆಗಳನ್ನು ಪ್ರಕಟಿಸಬೇಕಾದಷ್ಟು ಮಟ್ಟಕ್ಕೆ ತಲ್ಲಣವುಂಟಾಗಿದೆ.

ಇವೆಲ್ಲವೂ ಪ್ರಕೃತಿಯ ವಿಕೋಪವಲ್ಲ; ಮನುಷ್ಯ ನಿರ್ಮಿತ ಎಂಬ ಚರ್ಚೆಗಳು ಸಾಕಷ್ಟು ನಡೆಯುತ್ತಿದೆ. ಅಸಲೀ ಸಮಸ್ಯೆ ಏನು ಎಂಬುದನ್ನು ಸಂಪೂರ್ಣವಾಗಿ ಗುರುತಿಸಿಲ್ಲದೇ ಇರಬಹುದು ಅಥವಾ ಕುಂಡೆ ಸುಟ್ಟಾಗ ಮಾತ್ರ ಸಮಸ್ಯೆಯತ್ತ ಗಮನಹರಿಸಿ ನಂತರ ಯಥಾಸ್ಥಿತಿ ಮುಂದುವರೆಯುವಂತೆ ಈಗಲೂ ಆಗಬಹುದು. ಆದರೆ ಈ ಸಾರಿ ಇಷ್ಟಾದರೂ ಎಚ್ಚೆತ್ತುಕೊಳ್ಳುವಂತೆ ಮಾಡುವಲ್ಲಿ ನಡೆದಿರುವ ಹೋರಾಟ ಮಾತ್ರ ಎದ್ದು ಕಾಣುವಂತಿದೆ. ಹೌದು, ಹೋರಾಟ. ಮೂರ್ನಾಲ್ಕು ವರ್ಷಗಳ ವಿದ್ಯಮಾನಗಳನ್ನು ಗಮನಿಸಿದರೆ ಕರುನಾಡಿನ ಆನೆಗಳು ಅಂತಹದೊಂದು ಹೋರಾಟವನ್ನು ನಡೆಸಿರುವುದು ಸ್ಪಷ್ಟವಾಗುತ್ತದೆ.

ಉತ್ಸವಗಳಲ್ಲಿ ಆನೆಯೊಂದು ಬಂದರೆ ಅದು ಜನಕ್ಕೆ ಬೆರಗು, ರಂಜನೆ ಎಲ್ಲವನ್ನೂ ಒದಗಿಸುತ್ತದೆ. ಈಗ ಅದೇ ಆನೆ ತಲ್ಲಣವುಂಟುಮಾಡುತ್ತಿದೆ. ತನ್ನನ್ನು ನಿಯಂತ್ರಿಸುವ ಮಾವುತನನ್ನೇ ಗರಗರ ತಿರುಗಿಸಿ ಕೊಂದದ್ದನ್ನು ನೋಡಿದ್ದೇವೆ. ಒಂದೆಡೆ ಪಲ್ಲಕ್ಕಿಯನ್ನೇ ಕೆಡವಿ ಓಡಿದ ಉದಾಹರಣೆಯೂ ಇದೆ. ರಸ್ತೆ ತಡೆಯನ್ನು ಆನೆಗಳು ಪ್ರತಿಭಟನಾ ರೂಪವಾಗಿ ಹೇಗೆ ಕಲಿತುಕೊಂಡವೋ ಗೊತ್ತಿಲ್ಲ. ಬಂಡೀಪುರದಲ್ಲಿ ತನ್ನ ಮಗುವಿಗೆ ವಾಹನವೊಂದು ಡಿಕ್ಕಿ ಹೊಡೆದುಹೋದ ನಂತರ, ತಾಯಿ ಆನೆಯು ಆರು ಗಂಟೆಗಳ ಕಾಲ ರಸ್ತೆತಡೆ ಮಾಡಿತು. ನಾಲ್ಕು ಗಂಟೆಗಳಿಂದ ಎರಡು ದಿನಗಳವರೆಗೆ ಆನೆಗಳಿಂದ ರಸ್ತೆ ತಡೆ ನಡೆದ ಹಲವು ಉದಾಹರಣೆಗಳಿವೆ. ಅದೇ ರೀತಿ ಕೆಲವು ಅರಣ್ಯ ಪ್ರದೇಶಗಳಲ್ಲಿ ನೀರಿನ ಸೆಲೆಯ ಹತ್ತಿರ ಮೊಕ್ಕಾಂ ಹೂಡಿ, ಅಲ್ಲಿಗೆ ಮನುಷ್ಯರ ಪ್ರವೇಶವನ್ನು ನಿಷೇಧಿಸಿದ್ದೂ ವರದಿಯಾಗಿದೆ.

ತಮ್ಮ ಹೋರಾಟವನ್ನು ಮಿಲಿಟೆಂಟ್‌ಗೊಳಿಸುವುದರ ಭಾಗವಾಗಿ ಹಳ್ಳಿಗಳಿಗೆ ನುಗ್ಗುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿವೆ. ಇದು ಬಹಳ ಹಿಂದಿನಿಂದಲೂ ನಡೆಯುತ್ತಿದ್ದು ಹೊಸ ಬೆಳವಣಿಗೆಗಳೆಂದರೆ ಪಟ್ಟಣ, ನಗರಗಳಿಗೆ ಆನೆಗಳು ದಾಳಿಯಿಡುತ್ತಿರುವುದು. ಅಧಿಕಾರದ ಕೇಂದ್ರಗಳಾಗಿ ನಗರಗಳೇ ಇರುವುದರಿಂದ ತಮ್ಮ ದಾಳಿಯ ಟಾರ್ಗೆಟ್‌ಗಳನ್ನಾಗಿ ಆರಿಸಿಕೊಂಡಿವೆ. ಕಳೆದ ವರ್ಷ ಮೈಸೂರಿನ ದೇವರಾಜ ಅರಸು ರಸ್ತೆಗೆ ನುಗ್ಗಿ ಎಟಿಎಂನ ಸೆಕ್ಯುರಿಟಿ ಕಾರ್ಮಿಕನನ್ನು ಕೊಂದಿದ್ದವು. ಈ ವರ್ಷ ಬೆಂಗಳೂರಿನೆಡೆಗೆ ಬಂದಿವೆ. ಇದೇ ಟ್ರೆಂಡನ್ನು ಮುಂದುವರೆಸುವುದಾದರೆ, ಆನೆಗಳ ನಡಿಗೆ ವಿಧಾನಸೌಧದ ಕಡೆಗೆ ಆಗಬಹುದೇನೋ?



ಅಂದರೆ ಇವೆಲ್ಲವನ್ನೂ ಆನೆಗಳು ಪ್ರಜ್ಞಾಪೂರ್ವಕವಾದ ಹೋರಾಟದ ಭಾಗವಾಗಿ ನಡೆಸುತ್ತಿವೆ ಎಂದಲ್ಲ, ಆದರೆ ಆ ರೀತಿ ಭಾಸವಾಗುವಂತೆ ಆನೆಗಳ ದಾಳಿ ಇದೆ. ಇದು ಆನೆಗಳ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳು ಸಹಜವಾಗಿಯೇ ಅವನ್ನು ಈ ದಿಕ್ಕಿಗೆ ತಳ್ಳುತ್ತಿವೆ. ಆಹಾರದ ಕೊರತೆ, ನೀರಿನ ಒರತೆಗಳ ಕೊರತೆ, ಓಡಾಡುವ ದಾರಿಗೆ ಅಡ್ಡಿಗಳು ಎಲ್ಲವೂ ಸೇರಿಕೊಂಡು ಆ ತಳ್ಳುವಿಕೆ ಹಳ್ಳಿಗಳಿಂದ ನಗರಗಳೆಡೆಗೆ ಆಗುತ್ತಿದೆ. ತಮಿಳುನಾಡಿನ ವಾಲ್ಪರೆ ಪ್ರದೇಶದ



ಪಶ್ಚಿಮಘಟ್ಟದ ಬೆಟ್ಟಶ್ರೇಣಿಗಳ ಉದಾಹರಣೆ ಇದನ್ನು ನಮಗೆ ಮತ್ತಷ್ಟು ಸ್ಪಷ್ಟಪಡಿಸುತ್ತವೆ. ಲಕ್ಷಾಂತರ ಎಕರೆಗಳ ಆ ಇಡೀ ಬೆಟ್ಟ ಶ್ರೇಣಿಯು ಕೇವಲ ಒಂಭತ್ತು ದೊಡ್ಡ ಕಂಪೆನಿಗಳ ಟೀ ಎಸ್ಟೇಟಾಗಿ ಪರಿವರ್ತನೆ ಹೊಂದಿದೆ. ಕಾಡಿನಲ್ಲಿ ಸಹಜವಾಗಿ ಬೆಳೆದುಕೊಳ್ಳುವ ಗಿಡಗಂಟೆಗಳು, ಮರಗಳು ಮಾಯವಾಗಿ ಆ ಜಾಗದಲ್ಲಿ ಟೀ ಗಿಡಗಳು ಮತ್ತು ಪ್ಲಾಂಟೇಷನ್ ಮರಗಳನ್ನು ಬೆಳೆಸಲಾಗಿದೆ. ಅಲ್ಲಿನ ಆನೆಗಳ ಆಹಾರವನ್ನು ಪೂರ್ಣವಾಗಿ ಇಲ್ಲವಾಗಿಸಲಾಗಿದೆ. ಟೀ ಎಸ್ಟೇಟಿನ ಬೇಲಿಗಳು ಓಡಾಡುವ ಜಾಗವನ್ನೂ ಕಿರಿದಾಗೊಳಿಸಿದೆ. ಇವೆಲ್ಲದರ ಪರಿಣಾಮವಾಗಿ ಸುತ್ತಮುತ್ತಲಿನ ಹಳ್ಳಿಗಳಿಗೆ ದಾಂಗುಡಿಯಿಡುವ ಆನೆಗಳ ಹಿಂಡು, ಕಂಡುಕೊಂಡಿರುವ ಪರ್ಯಾಯವು ಕುತೂಹಲಕಾರಿಯಾಗಿದೆ. ಅಲ್ಲಿನ ಪಡಿತರ ವ್ಯವಸ್ಥೆಯ ಅಂಗಡಿಗಳ ಹತ್ತಿರ ಕಾಯ್ದು, ರಾತ್ರಿ ವೇಳೆ ಬಾಗಿಲು ಮುರಿದು ನುಗ್ಗಿ ಅಕ್ಕಿ ಮೂಟೆಗಳನ್ನು ಚೆಲ್ಲಾಡಿ ಮುಕ್ಕುತ್ತವೆ. ಬಡವರ ಮನೆಗಳನ್ನು ಧ್ವಂಸ ಮಾಡಿ ಪಾತ್ರೆಗಳೊಳಕ್ಕೆ ಸೊಂಡಿಲು ಹಾಕಿ ತಿನ್ನಲು ಪ್ರಯತ್ನಿಸಿರುವುದನ್ನು ನೋಡಿರುವವರು, ಆನೆಗಳು ಈ ರೀತಿ ಪರ್ಯಾಯ ಮಾರ್ಗ ಹುಡುಕಿಕೊಂಡಿರುವುದಕ್ಕೆ ಆಶ್ಚರ್ಯ ಪಟ್ಟಿದ್ದಾರೆ ಮತ್ತು ಆ ದುರಂತವು ಮರುಕವನ್ನು ಹುಟ್ಟಿಸಿದೆ. ಇನ್ನು ತೋಟಗಳಿಗೆ ನುಗ್ಗಿ ಹಾಳುಗೆಡವುದಂತೂ ಎಲ್ಲಾ ಕಡೆ ಸಾಮಾನ್ಯವಾಗಿದೆ.

ಕರ್ನಾಟಕದಲ್ಲೂ ಇದೇ ರೀತಿ ಒತ್ತುವರಿ ನಡೆದಿದೆ. ಅರಣ್ಯ ಇಲಾಖೆಯ ಪ್ರಕಾರ ಕಳೆದ 20 ವರ್ಷಗಳಲ್ಲಿ 67,000 ಹೆಕ್ಟೇರ್ ಅಕ್ರಮ ಒತ್ತುವರಿಯಾಗಿದೆ. ತಮಿಳುನಾಡಿನಿಂದ ಕರ್ನಾಟಕದ ಪಶ್ಚಿಮಘಟ್ಟದ ಪೂರ್ವಭಾಗದುದ್ದಕ್ಕೂ ಸಾಗುವ ಆನೆ ಜಾಡಿನ ಮೇಲೆ ಅಕ್ರಮ ದಾಳಿ ಹಾಗೂ ಒತ್ತುವರಿ ನಡೆದಿದೆ. ಈ ಎಲ್ಲಾ ಒತ್ತುವರಿಯನ್ನೂ ಅರಣ್ಯ ಇಲಾಖೆ ಮತ್ತು ಸರ್ಕಾರ ಅಕ್ರಮ ಎಂದು ಕರೆಯದೇ ಇರಬಹುದು. ಏಕೆಂದರೆ ಸ್ವತಃ ಸರ್ಕಾರವೇ ಅಂಥದ್ದನ್ನು ಮಾಡುತ್ತದೆ. ಬಿಎಂಐಸಿ ಯೋಜನೆ ಪೂರ್ಣವಾಗಿ ಜಾರಿಯಾದರೆ ಅದು ಎರಡು ಕಡೆ ಆನೆ ಕಾರಿಡಾರ್‌ಅನ್ನು ಕತ್ತರಿಸುತ್ತದೆ. ಬಹುಶಃ ಅಶೋಕ್ ಖೇಣಿ ಆನೆಗಳು ಸಾಗಲಿಕ್ಕೆ ದೊಡ್ಡದೊಂದು ಅಂಡರ್‌ಪಾಸ್ ನಿರ್ಮಾಣ ಮಾಡಬಹುದು. ಈಗ ಶಾಸಕನೂ ಆಗಿರುವ ಖೇಣಿಯ ಯೋಜನೆಗೆ ಹೊಸ ಕಾಂಗ್ರೆಸ್ ಸರ್ಕಾರ ಕತ್ತರಿ ಹಾಕುತ್ತದೆ ಎಂದುಕೊಳ್ಳಲು ಯಾವ ಕಾರಣವೂ ಇಲ್ಲ.

ಆಗ ಆನೆಗಳು ತಮ್ಮ ಪ್ರತಿಭಟನಾ ರೂಪಗಳನ್ನು ಇನ್ನೂ ಯಾವ್ಯಾವ ರೀತಿ 'ಉಗ್ರ'ಗೊಳಿಸುತ್ತವೆಯೋ, ಅದರ ಪರಿಣಾಮವಾಗಿ 'ಎನ್‌ಕೌಂಟರ್'ಗಳಿಗೆ ಗುರಿಯಾಗಬೇಕಾಗುತ್ತವೋ ಈಗಲೇ ಹೇಳಲಾಗದು. ಆದರೆ ಆನೆಗಳು ಬಂಡಾಯವೆದ್ದಿರುವುದಂತೂ ನಿಜ. ಇದು ಗುರಿ ಸ್ಪಷ್ಟವಾಗಿಲ್ಲದ, ತನ್ನನ್ನು ದಮನ ಮಾಡುತ್ತಿರುವವರ ವಿರುದ್ಧದ ಬಂಡಾಯಗಾರನ ದಂಗೆಯಾಗಿದೆ. ಈ ಬಂಡಾಯಕ್ಕೆ ಸಕಾರಣವಿದೆ. ಹೊರಗಡೆ ಕೃಷಿ ವಿಸ್ತರಣೆಯ ಮೂಲಕ ಆನೆಗಳ ಬದುಕನ್ನು ಕಿರಿದಾದ ಜಾಗಕ್ಕೆ ಸೀಮಿತಗೊಳಿಸಿದ್ದು, ನಂತರ ಪ್ಲಾಂಟೇಷನ್ ಇತ್ಯಾದಿಗಳಿಂದ ಓಡಾಟಕ್ಕೆ ನಿರ್ಬಂಧ ಮಾಡಿದ್ದು ಹೊಸದೇನಲ್ಲ. ಈಗ ಟೀ ತೋಟಗಳ ಮತ್ತಷ್ಟು ವಿಸ್ತರಣೆ, ಟೂರಿಸಂ, ಹೆಚ್ಚಾದ ನಗರೀಕರಣ, ಪಾರಂಪರಿಕ ನೀರಿನ ಸೆಲೆಗಳನ್ನು ಬತ್ತಿಸಿದ್ದು ಎಲ್ಲವೂ ಸೇರಿ ಮನುಷ್ಯ ಜಗತ್ತಿನಿಂದ ದಬ್ಬಾಳಿಕೆ, ದೌರ್ಜನ್ಯ ನಡೆದಿದೆ. ನೀರಿನ ಮಾಲಿನ್ಯವು ಆನೆಗಳ ಆರೋಗ್ಯವನ್ನು ಹದಗೆಡಿಸಿದೆ. ಮನುಷ್ಯರು ಆಹಾರ, ಆರೋಗ್ಯ, ಶಿಕ್ಷಣಕ್ಕಾಗಿ ಹೋರಾಟ ನಡೆಸಿದರೆ, ಆನೆಗಳು ಹಾದಿ, ಆಹಾರ, ನೆಮ್ಮದಿ, ಆರೋಗ್ಯಕ್ಕಾಗಿ ಹೋರಾಟ ನಡೆಸಿವೆ. ಇದು ಆಧುನಿಕ ಅಭಿವೃದ್ಧಿಯ ವಿರುದ್ಧದ ಬಂಡಾಯವಾಗಿದೆ. ರಾಜರ ಕಾಲದಲ್ಲಿ ಮನುಷ್ಯ ಮನುಷ್ಯನ ಯುದ್ಧದಲ್ಲಿ ಆನೆಗಳನ್ನು ಬಳಸಿಕೊಳ್ಳಲಾಗುತ್ತಿತ್ತು, ಆನೆ ದಳ ಇದ್ದರೆ ಆ ಸೈನ್ಯದ ಬಲ ದೊಡ್ಡದು ಎಂದು ಪರಿಗಣಿಸಲಾಗುತ್ತಿತ್ತು. ಈಗ ಮನುಷ್ಯನ ವಿರುದ್ಧವೇ ಆನೆಗಳು ಯುದ್ಧ ಸಾರಿದಂತೆ ಕಾಣುತ್ತದೆ.

ಈ ಬಂಡಾಯದಲ್ಲಿ ಆನೆಗಳು ಸತತ ಹೋರಾಟದಿಂದ ಪಾಕ್ಷಿಕ ಯಶಸ್ಸನ್ನು ಗಳಿಸಿವೆ. ಮೊದಲನೆಯದಾಗಿ ಸಮಾಜದ, ಮಾಧ್ಯಮಗಳ ಗಮನ ಸೆಳೆದಿವೆ. ಸರ್ಕಾರಗಳು ಅದರ ಹಕ್ಕನ್ನು ಮಾನ್ಯ ಮಾಡುವ ಸ್ಥಿತಿ ಬಂದಿದೆ. ಅರಣ್ಯ ಸಚಿವ ರಮಾನಾಥ ರೈ ಆನೆಗಳ ಕಾರಿಡಾರ್‌ಗಾಗಿ 100 ಕೋಟಿ ರೂ. ಘೋಷಿಸಿದ್ದಾರೆ. ಕೆಲವು ರಾಜ್ಯಗಳಲ್ಲಿ ಆನೆಗಳಿಗೆ ಟ್ಯಾಂಕರ್ ಮೂಲಕ ನೀರಿನ ಸರಬರಾಜು, ಆಹಾರ ಸರಬರಾಜು, ಪ್ಯಾಸೇಜ್ ನಿರ್ಮಾಣಕ್ಕೂ ಮುಂದಾಗಿದ್ದಾರೆ. ವಾಸ್ತವದಲ್ಲಿ ಇವೆಲ್ಲಾ ಕೇವಲ ಆನೆಗಳ ಸಮಸ್ಯೆಯಲ್ಲ, ಎಲ್ಲಾ ಪ್ರಾಣಿ ಸಂಕುಲದ ಸಮಸ್ಯೆಯಾಗಿದೆ. ಆನೆಗಳು ಬಲಶಾಲಿ ಪ್ರಾಣಿಗಳಾಗಿ, ಇಡೀ ಪ್ರಾಣಿಸಂಕುಲದ ಮುಂಚೂಣಿ (ವ್ಯಾನ್‌ಗಾರ್ಡ್) ಶಕ್ತಿಯಾಗಿ ಈ ಹೋರಾಟವನ್ನು ಕೈಗೆತ್ತಿಕೊಂಡಿವೆ ಎಂಬಂತೆ ತೋರುತ್ತಿದೆ.

ನೆದರ್‌ಲ್ಯಾಂಡ್‌ನಂತಹ ದೇಶಗಳು 'ಎಲ್ಲಾ ಜೀವಿಗಳ ಬದುಕುವ ಹಕ್ಕ'ನ ಕುರಿತು ಕಾನೂನು ತರುವ ಕುರಿತು ಆಲೋಚಿಸುವಂತಾಗಿದೆ. ನಮ್ಮ ದೇಶದಲ್ಲಿ ಮನುಷ್ಯರಿಗೇ ಘನತೆಯಿಂದ ಬದುಕುವ ಹಕ್ಕು ಜಾರಿಯಾಗಿಲ್ಲದಿರುವ ಸಂದರ್ಭವಿದೆ. ಇಂದು ಆನೆಗಳ ಕುರಿತು ಇಷ್ಟೆಲ್ಲಾ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲೂ ಮನುಷ್ಯರಿಗೆ - ದುಡಿಯುವ ಶ್ರಮಿಕರಿಗೆ - ಕನಿಷ್ಠ ಹಕ್ಕುಗಳು ಖಾತರಿಯಾಗದಿರುವ ಕುರಿತು ಚಿಂತನೆ ಮತ್ತು ಕ್ರಮಗಳು ಕನಿಷ್ಠ ಮಟ್ಟದಲ್ಲೂ ನಡೆಯುತ್ತಿಲ್ಲ ಎಂಬುದನ್ನೂ ಗಮನಿಸಬೇಕಿದೆ. ಆನೆಗಳ ಬದುಕಿನ ತಾಣಗಳನ್ನು ಕಿರಿದುಗೊಳಿಸಿರುವ ಆಧುನಿಕ ಅಭಿವೃದ್ಧಿಯ ಫಲಾನುಭವಿ ಲೂಟಿಕೋರರು ಅವುಗಳ ದಾಳಿಗೆ ತುತ್ತಾಗುತ್ತಿಲ್ಲ, ಬದಲಿಗೆ ಬಡಜನರ ಗುಡಿಸಲುಗಳು, ಸಣ್ಣ ಮನೆಗಳು, ರೈತರು, ರೈತರ ತೋಟಗಳೇ ಗುರಿಯಾಗುತ್ತವೆ. ಆನೆಗಳ ಜಾ[...] ಒತ್ತುವರಿಯ ಪ್ರಶ್ನೆ ಬಂದಾಗಲೂ ಸಣ್ಣ ಹಾಗೂ ಮಧ್ಯಮ ರೈತಾಪಿಯೇ ಸರ್ಕಾರದ ಕೆಂಗಣ್ಣಿಗೆ ಗುರಿಯಾಗುತ್ತದೆ. ಕಳೆದ ಏಳು ವರ್ಷಗಳಿಂದ ಸರಾಸರಿ 28 ಜನರು ಪ್ರತೀ ವರ್ಷ ಆನೆ ದಾಳಿಯಿಂದ ಸಾಯುತ್ತಿದ್ದಾರೆ. ಆನೆಗಳ ಹಕ್ಕಿನ ಬಗ್ಗೆ ಮಾತಾಡುತ್ತಾ, ಆನೆಗಳಿಂದ ದಾಳಿಗೊಳಗಾಗುತ್ತಿರುವ ಸಾಮಾನ್ಯ ಜನರ ಸಂಕಷ್ಟಗಳನ್ನು ಮರೆತರೆ ಅದು ಕುರುಡುತನವೇ ಸರಿ.

ಬಂಡವಾಳಶಾಹಿ ವ್ಯವಸ್ಥೆಯ ಕೊನೆಯಿಲ್ಲದ ಲಾಭಬಡುಕತನ ಇವೆಲ್ಲದರ ಕೇಂದ್ರದಲ್ಲಿದೆ ಎಂಬುದನ್ನು ಮರೆಯದೇ, 'ಮನುಷ್ಯ ಲೋಭಿ' ಎಂದು ಸಾರಾಸಗಟಾಗಿ ತೀರ್ಮಾನಿಸುವುದೂ ತಪ್ಪಾಗುತ್ತದೆ. ಜನಸಾಮಾನ್ಯರೂ, ಸಕಲ ಪ್ರಾಣಿಜಂತುಗಳೂ, 'ನಿರ್ಜೀವ' ನೀರು, ಬಂಡೆ, ಮರಳುಗಳೂ ಸಹ ಇದೇ ಕಾರ್ಪೋರೇಟ್ ಅಭಿವೃದ್ಧಿಯ ಬಲಿಪಶುಗಳಾಗಿವೆ. ಮನುಷ್ಯರನ್ನು ಹೊರತುಪಡಿಸಿ ಉಳಿದವು ಬಂಡಾಯವೆದ್ದಿವೆ.

ಅಂತಹ ಒಂದು ತಿರುಗೇಟು ಉತ್ತರಾಂಚಲದಲ್ಲೂ ಆಗಿದೆ. ಜಾಗತಿಕ ತಾಪಮಾನದ ಏರಿಕೆ ಇತ್ಯಾದಿ 'ಜಾಗತಿಕ' ಕಾರಣಗಳಾಚೆ ಆ ರಾಜ್ಯದ ಅಧಿಕಾರಸ್ಥ ಜನ[...] ಯೋಜನೆಗಳೂ ಆ ದುರಂತಕ್ಕೆ ಕಾರಣವಾಗಿದೆ. ಕೇದಾರವ[...] ಸೇರಿದಂತೆ ಇಡೀ ಉತ್ತರಾಂಚಲದಲ್ಲಿ ಕಳೆದ 20 ವರ್ಷಗಳ[...] ಕಟ್ಟಲಾಗಿರುವ ಅಣೆಕಟ್ಟುಗಳು, ಹೆದ್ದಾರಿ, (70 ದೊ[...] ಮತ್ತು 100 ಸಣ್ಣ) ಜಲವಿದ್ಯುತ್ ಸ್ಥಾವರಗಳ[...] ಉಂಟುಮಾಡಿರುವ ಪರಿಣಾಮಗಳು ಅಗಾಧವಾದುದು. ಅದೇ ರೀತಿ ನದೀ ತೀರದ ಟೂರಿಸಂ ಮತ್ತು ತೀರ್ಥಯಾತ್ರೆಯ ಪ್ರವಾಸೋದ್ಯಮಗಳು ನೀರಿನ ಹರಿವಿ[...] ಉಂಟುಮಾಡಿರುವ ತೊಂದರೆಯೂ ಅಷ್ಟಿಷ್ಟಲ್ಲ. ಹಾಗಾ[...] ಮುನಿದಿರುವ ಪ್ರಕೃತಿಯ ಹೊಡೆತವನ್ನು ಯಾ[...] ಕೇದಾರನಾಥನೂ ತಡೆಯಲಾಗಿಲ್ಲ.

ಇವೆಲ್ಲದರ ಬಗ್ಗೆ ಪ್ರಜ್ಞಾವಂತರು ಸಾಕಷ್ಟು ಮುಂಚೆಯೇ ಮುನ್ನೆಚ್ಚರಿಕೆಗಳನ್ನು ಕೊಟ್ಟಿದ್ದರು. ಹೈಕೋರ್ಟ್‌ನ ಸೂಚನೆಯ ಮೇರೆಗೆ ತಜ್ಞರು ಕರ್ನಾಟಕದಲ್ಲಿ ಆನೆಗಳ ದಾಳಿಯ ಕುರಿತು ವರದಿ ಸಲ್ಲಿಸಿ, ಕೆಲವು ಮುಖ್ಯವಾದ ಸಲಹೆಗಳನ್ನು ನೀಡಿ ಒಂಭತ್ತು ತಿಂಗಳಾಗಿವೆ. ಉತ್ತರಾಂಚಲದ ನಿಸರ್ಗ ನಾಶದ ವಿರುದ್ಧ ಸುಂದರಲಾಲ್ ಬಹುಗುಣರಂಥವರು ಸೇರಿಕೊಂಡು ಮಾಡಿದ ಹೋರಾಟಕ್ಕೆ ಹಲವು ದಶಕಗಳಾಗಿವೆ. ಸ್ವತಃ ದೇಶದ ಪ್ರಧಾನಮಂತ್ರಿಯನ್ನೇ ಕಂಡು ಹಿಮಾಲಯದ ಸೂಕ್ಷ್ಮ ಪರಿಸರದ ಕುರಿತು ಮನವರಿಕೆ ಮಾಡಿಕೊಡುವ ಪ್ರಯತ್ನಗಳಾಗಿವೆ. ಆದರೆ ಬಂಡವಾಳಶಾಹಿ ಉದ್ದಿಮೆಪತಿಗಳ ಏಜೆಂಟರಾದ ಅಧಿಕಾರಸ್ಥರಿಗೆ ಇವ್ಯಾವುವೂ ಮುಖ್ಯವಾಗಿಲ್ಲ. ಅಣೆಕಟ್ಟುಗಳು, ಹೆದ್ದಾರಿಗಳು, ರೆಸಾರ್ಟ್‌ಗಳು, ದೊ[...] ದೊಡ್ಡ ಕಟ್ಟಡಗಳು, ದೊಡ್ಡ ಆರ್ಥಿಕತೆ ಇವುಗಳೇ ಅಭಿವೃ[...] ಎಂದು ಬಿಂಬಿಸಿ ನಂಬಿಸಲು ಹೊರಟಿದ್ದಾರೆ.

ಅವರು ಬಡಪೆಟ್ಟಿಗೆ ಬದಲಾಗುವುದಿಲ್ಲ. ಎಂತ[...] ಪೆಟ್ಟು ನೀಡಬೇಕೆಂಬುದನ್ನು ಆನೆಗಳು ತೋರಿಸಿಕೊಟ್ಟಿ[...] ಅರ್ಥಮಾಡಿಕೊಂಡು ವಿವೇಚನೆಯಿಂದ ಮುಂದುವರೆಯ[...] ಬೇಕಾದ ಜವಾಬ್ದಾರಿ ಮನುಷ್ಯ ಸಮುದಾಯದ ಮೇಲಿ[...] ಅಷ್ಟೇ.

# ನಾಸ್ತಿಕ ತಂದೆಯಿಂದ ಮಗಳಿಗೊಂದು ವೈಜ್ಞಾನಿಕ ಪತ್ರ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ವತ್ತು ನಮ್ಮ ಸುತ್ತಲೂ ವಾಸ್ತು ಮರಾಲಜಿ, ರಾಹುಕಾಲ, ಹೋಮ, ಹವನ, ತ್ರ ಇತ್ಯಾದಿ ಅನಿಷ್ಟಗಳೇ ತಾಂಡವವಾಡುತ್ತಿವೆ. ಜ್ಞಾನ ಬೆಳೆಯುತ್ತಿದ್ದರೂ ಮನುಷ್ಯರು ಇಂತಹ ಢ್ಯಗಳಲ್ಲಿ ಹೆಚ್ಚೆಚ್ಚು ನಂಬಿಕೆಯನ್ನು ರ್ಶಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಇಂತಹ ದೇಶದಲ್ಲಿ ನಮ್ಮ ಮಕ್ಕಳಲ್ಲಿ ವೈಚಾರಿಕತೆ ಮತ್ತು ಜ್ಞಾನಿಕ ದೃಷ್ಟಿಕೋನವನ್ನು ಬೆಳೆಸುವುದು ಹೇಗೆ? ಢನಂಬಿಕೆಗಳನ್ನು ಅವರು ಮೈಗೂಡಿಸಿಕೊಳ್ಳದಂತೆ ರಿಕೆ ವಹಿಸುವುದು ಹೇಗೆ? ಯಾರೋ ಹೇಳಿದ್ದನ್ನು ಸದೆ ನಂಬದಂತೆ ನೋಡಿಕೊಳ್ಳುವುದು ಹೇಗೆ ಬ ಪ್ರಶ್ನೆ ಪ್ರಜ್ಞಾವಂತ ಪೋಷಕರನ್ನು ಕಾಡುತ್ತಲೇ ತ್ತದೆ. ಅಂತಹ ಪೋಷಕರಿಗೆ ಇಲ್ಲೊಂದು ರ್ಗದರ್ಶಿ ಪತ್ರವನ್ನು ಕೊಡುತ್ತಿದ್ದೇನೆ.

ಇದನ್ನು ಬರೆದವರು ಇಂಗ್ಲೆಂಡಿನ ಖ್ಯಾತ ಜ್ಞಾನಿಯೂ, ಅಪ್ಪಟ ನಾಸ್ತಿಕರೂ ಆದ ರಿಚರ್ಡ್ ಕಿನ್ಸ್. ತಮ್ಮ ಮಗಳಿಗೆ ಹತ್ತು ವರ್ಷ ಯಸ್ಸಾದಾಗ ಮೂಢನಂಬಿಕೆಗಳ ವಿರುದ್ಧ ಮತ್ತು ಜ್ಞಾನಿಕ ಚಿಂತನೆಯನ್ನು ಕುರಿತು ಬರೆದ ಡಾವ್‌ಕಿನ್ಸ್ ಅದ್ಭುತವಾಗಿದೆ.

ನನ್ನ ಪ್ರೀತಿಯ ಮಗಳಿಗೆ,

ನಿನಗೀಗ ಹತ್ತು ವರ್ಷದ ಪ್ರಾಯವಾದ್ದರಿಂದ ತುಂಬಾ ಮುಖ್ಯವಾದ ವಿಷಯವನ್ನು ಕುರಿತು ಈ ಪತ್ರವನ್ನು ಬರೆಯುತ್ತಿದ್ದೇನೆ. ನೀನು ಾದರೂ ನಮಗೆ ಗೊತ್ತಿರುವ ವಿಷಯಗಳು ಹೇಗೆ ತ್ತು ಎಂದು ಯೋಚಿಸಿದ್ದೀಯಾ? ಉದಾಹರಣೆಗೆ, ಶದಲ್ಲಿ ಚಿಕ್ಕಚಿಕ್ಕದಾಗಿ ಹೊಳೆಯುವ ನಕ್ಷತ್ರಗಳು ವದಲ್ಲಿ ದೂರದಲ್ಲಿರುವ ದೊಡ್ಡ ಗಾತ್ರದ ಬೆಂಕಿಯ ಡುಗಳು ಎಂಬುದು ನಮಗೆ ಹೇಗೆ ಗೊತ್ತು? ಗಳಿಗಿಂತ ಚಿಕ್ಕದಾಗಿರುವ ನಮ್ಮ ಭೂಮಿಯು ತಹದ್ದೇ ಒಂದು ಬೆಂಕಿಯ ಚೆಂಡಾಗಿರುವ ರ್ಯನ ಸುತ್ತ ಗಿರಕಿ ಹೊಡೆಯುತ್ತಿರುವುದು ಗೆ ಹೇಗೆ ಗೊತ್ತು?

ಈ ಪ್ರಶ್ನೆಗಳಿಗೆ ಉತ್ತರ 'ಸಾಕ್ಷ್ಯ'.

ಸಾಮಾನ್ಯವಾಗಿ ನಾವು ಕಣ್ಣಾರೆ ಕಂಡಿದ್ದು, ಕೇಳಿದ್ದು, ಟ್ಟಿದ್ದು ಅಥವಾ ಮೂಸಿ ನೋಡಿದ್ದರೆ ಮಾತ್ರ ' ಎಂದು ಭಾವಿಸುತ್ತೇವೆ. ಆದರೆ ದಯಾತ್ರಿಗಳು ಭೂಮಿಯಿಂದ ಸಾಕಷ್ಟು ದೂರ ೀಗಿ ಅಲ್ಲಿಂದ ತಮ್ಮ ಕಣ್ಣಾರೆ ನೋಡಿ ಮಿಯು ಗುಂಡಗಿದೆ ಎಂದು ಹೇಳಿದ್ದಾರೆ. ಹೀಗೆ ಡಲು ಹಲವೊಮ್ಮೆ ನಮ್ಮ ಕಣ್ಣುಗಳಿಗೆ ನೆರವು ಾಗುತ್ತದೆ. ಸಂಜೆ ಸೂರ್ಯ ಮುಳುಗಿದ ನಂತರ ಮುದಲ್ಲಿ ಕಾಣುವ ಸುಂದರವಾದ ಸಂಜೆ ಯನ್ನು ನಾವು ಒಂದು ನಕ್ಷತ್ರ ಎಂದು ುತ್ತೇವೆ. ಆದರೆ ಅದನ್ನೇ ದೂರದರ್ಶಕದಲ್ಲಿ ಡಿದಾಗ ಅದು ಶುಕ್ರ ಗ್ರಹ ಎಂದು ನಮಗೆ ತ್ತಾಗುತ್ತದೆ. ಹೀಗೆ ನೇರವಾಗಿ ನೋಡಿ ಸುವುದನ್ನು 'ವೀಕ್ಷಣೆ' ಎಂದು ಕರೆಯುತ್ತೇವೆ.

ಸಾಮಾನ್ಯವಾಗಿ ಹೀಗೆ ನೋಡಿದ್ದು ಮಾತ್ರ ವಾಗುವುದಿಲ್ಲ. ಉದಾಹರಣೆಗೆ ಕೊಲೆಯೊಂದಕ್ಕೆ ಗಳಿದ್ದರೆ ಅದು ಕೊಲೆ ಮಾಡಿದವನು ಮತ್ತು ಲಿಯಾದವನು. ಆದರೂ ತನಿಖಾಧಾರಿಗಳು ಕ್ಷಣೆಯ ಮೂಲಕವೇ ಹತ್ತಾರು ಮಾಹಿತಿಗಳನ್ನು ಸಿ ಕೊಲೆ ಮಾಡಿದವನು ಯಾರು ಎಂಬುದನ್ನು ಹಚ್ಚುತ್ತಾರೆ. ವಿಜ್ಞಾನಿಗಳು ಕೂಡ ಖಾಧಾರಿಗಳಂತೆಯೇ ಈ ಪ್ರಪಂಚ ಮತ್ತು ಹ್ಮಾಂಡದ ಬಗ್ಗೆ ಹಲವಾರು ಊಹೆಗಳನ್ನು ಮಾಡಿ, ಊಹೆ ಸರಿಯೋ ತಪ್ಪೋ ಎಂಬುದನ್ನು ೀಕ್ಷಿಸಿ ನೋಡುತ್ತಾರೆ. ತಮ್ಮ ಊಹೆ ತಪ್ಪಾಗಿದ್ದರೆ ರೀತಿಯ ತರ್ಕಗಳನ್ನು ಮಾಡಿ ತಮ್ಮ ಶೋಧನೆಯನ್ನು ಮುಂದುವರೆಸುತ್ತಾರೆ. ಹೇಗೆಂದರೆ ವ್ಯರು ನಿನ್ನನ್ನು ನೋಡಿದ ಕೂಡಲೇ ನಿನಗೆ ದಢಾರ ುಬಿ ಬಂದಿದೆ ಎಂದು ಹೇಳುವುದಿಲ್ಲ, ಬದಲಾಗಿ ದಢಾರ ಬಂದಿರಬಹುದೆಂದು ಮೊದಲು ಿಸಿ, ಆನಂತರ ನಿನ್ನ ಮೈಮೇಲೆ ಗಳಿದ್ದಿವೆಯೇ ಎಂದು ಕಣ್ಣಾರೆ ನೋಡಿ, ನಿನ್ನ ಬಿಸ್ಸಿಗಿದೆಯೇ ಎಂದು ಕೈಯಾರೆ ಮುಟ್ಟಿ ೀಡಿ, ನಿನ್ನ ಶ್ವಾಸಕೋಶದಲ್ಲಿ ಉಬ್ಬಸ ಇದೆಯೇ ಮ ಕಿವಿಯಾರೆ ಕೇಳಿದ ನಂತರವೇ ನಿನಗೆ ಾಗಿದೆ ಎಂದು ಹೇಳುತ್ತಾರೆ. ಅಷ್ಟು ಸಾಲದಿದ್ದರೆ ಪರೀಕ್ಷೆ, ಎಕ್ಸ್-ರೇ ಇತ್ಯಾದಿಗಳ ನೆರವು ಪಡೆದು ಏನಾಗಿದೆ ಎಂಬುದನ್ನು ದೃಢಪಡಿಸಿಕೊಳ್ಳುತ್ತಾರೆ. ವಿಜ್ಞಾನಿಗಳು ಹೇಗೆ ಸಾಕ್ಷ್ಯಗಳನ್ನು ಪಡೆದ ನಂತರವೇ ಯಾವುದು ಸತ್ಯ ಎಂದು ನಂಬುತ್ತಾರೋ ಹಾಗೆಯೇ ನೀನು ಕೂಡ ಸಾಕ್ಷ್ಯಗಳನ್ನು ಆಧರಿಸಿಯೇ ಏನನ್ನಾದರನ್ನು ನಂಬಬೇಕು. ಮಾತ್ರವಲ್ಲ, ಯಾವುದನ್ನೇ ಆಗಲಿ 'ಪರಂಪರೆ', 'ಹುಕುಂ' ಮತ್ತು 'ದಿವ್ಯಜ್ಞಾನ'ದ ಹೆಸರಲ್ಲಿ ನಂಬಬಾರದು ಎಂಬ ಎಚ್ಚರಿಕೆಯನ್ನು ನೀನು ಸದಾ ಹೊಂದಿರಬೇಕು.

ಮೊದಲು ಈ 'ಪರಂಪರೆ' ಬಗ್ಗೆ ಮಾತನಾಡೋಣ. ಒಮ್ಮೆ ಸುಮಾರು 50 ಶಾಲಾಮಕ್ಕಳಿದ್ದ ಒಂದು ಟಿವಿ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೆ. ಆ ಮಕ್ಕಳಲ್ಲಿ ಕ್ರಿಶ್ಚಿಯನ್, ಯಹೂದಿ, ಮುಸ್ಲಿಂ, ಹಿಂದೂ, ಸಿಖ್ ಧರ್ಮಕ್ಕೆ ಸೇರಿದವರಿದ್ದರು. ಅವರೆಲ್ಲ 'ನಮ್ಮ ಹಿಂದೂ ಧರ್ಮದಲ್ಲಿ ನಾವು ಇಂತಹದ್ದನ್ನು ನಂಬಿದ್ದೇವೆ', 'ಮುಸಲ್ಮಾನರಾದ ನಮ್ಮ ನಂಬಿಕೆಗಳು ಇಂತಹವು' ಎಂದೆಲ್ಲ ಹೇಳಿದರು. ಆದರೆ ಅವರು ನಂಬಿದ್ದಕ್ಕೆ ಯಾವುದೇ ಸಾಕ್ಷ್ಯಗಳಿರಲಿಲ್ಲ, ಬದಲಾಗಿ ಅವರೆಲ್ಲರೂ ತಮ್ಮ ತಂದೆ-ತಾಯಂದಿರು ಏನನ್ನು ಹೇಳಿದ್ದರೋ ಅದನ್ನೇ ಸತ್ಯ ಎಂದು ನಂಬಿದ್ದರು. ಅವರೆಲ್ಲರೂ ಬೇರೆಬೇರೆ ವಿಚಾರಗಳನ್ನು ನಂಬಿದ್ದರಿಂದ ಎಲ್ಲರ ನಂಬಿಕೆಗಳೂ ಸರಿಯಾಗಿದ್ದವು ಎಂದು ಹೇಳಲಾಗುವುದಿಲ್ಲ. ಇಂತಹ ನಂಬಿಕೆಗಳನ್ನೇ 'ಪರಂಪರೆ' ಅಥವಾ 'ಪರಂಪರಾಗಿತ ನಂಬಿಕೆಗಳು' ಎಂದು ಕರೆಯುವುದು.

ಇಂತಹ ಪರಂಪರಾಗಿತ ನಂಬಿಕೆಗಳು ಒಂದು ತಲೆಮಾರುಗಳಿಂದ ಸಾಗಿ ಬರುತ್ತದೆ. ಹಲವೊಮ್ಮೆ ಪುಸ್ತಕಗಳ ಮೂಲಕವೂ ಶತಮಾನಗಳ ಕಾಲದಿಂದ ಹರಿದು ಬಂದಿರುತ್ತದೆ. ಇಂತಹ ನಂಬಿಕೆಗಳು ಶೂನ್ಯದಿಂದಲೋ, ಮತ್ತಿನ್ಯಾರದೋ ಕಲ್ಪನೆಯಲ್ಲೋ ಹುಟ್ಟಿರುತ್ತವೆ. ಗ್ರೀಕರ ಪಾರಂಪರಿಕೆ ಕತೆಗಳಂತೆ. ಅಂತಹ ಕತೆಗಳು ಹಳೇ ಕಾಲದಿಂದ ಬಂದಿರುವುದರಿಂದ ಅವು ವಿಶೇಷವೂ ಆಗುವುದಿಲ್ಲ, ಸತ್ಯವೂ ಆಗುವುದಿಲ್ಲ. ಆದರೂ ತಲೆತಲಾಂತರಗಳಿಂದ ಜನ ಅವುಗಳನ್ನು ನಂಬುವುದಕ್ಕೆ ಕಾರಣ 'ಪರಂಪರೆ'.

ಇಂಗ್ಲೆಂಡಿನ ಬಹಳಷ್ಟು ಜನ ಚರ್ಚ್ ಆಫ್ ಇಂಗ್ಲೆಂಡಿಗೆ ನಡೆದುಕೊಳ್ಳುತ್ತಾರೆ. ಆದರೆ ಈ ಚರ್ಚ್ ಆಫ್ ಇಂಗ್ಲೆಂಡ್ ಎಂಬುದು ಕ್ರಿಶ್ಚಿಯನ್ ಧರ್ಮದ ಒಂದು ಕವಲು ಮಾತ್ರ. ಕ್ರಿಶ್ಚಿಯನ್ ಧರ್ಮದಲ್ಲಿ ರಷ್ಯಾನ್ ಆರ್ಥಡಾಕ್ಸ್, ರೋಮನ್ ಕ್ಯಾಥೊಲಿಕ್, ಮೆಥಾಡಿಸ್ಟ್ ಚರ್ಚ್ ಎಂಬ ವಿವಿಧ ಕವಲುಗಳೂ ಇವೆ. ಆ ಎಲ್ಲ ಕವಲುಗಳು ಬೇರೆಬೇರೆ ನಂಬಿಕೆಗಳನ್ನು ಹೊಂದಿವೆ. ಯಹೂದಿಯರಲ್ಲೂ, ಮುಸಲ್ಮಾನರಲ್ಲೂ ಬೇರೆಬೇರೆ ಪಂಗಡಗಳಿವೆ. ಹೀಗೆ ವಿಭಿನ್ನ ನಂಬಿಕೆಗಳನ್ನು ಹೊಂದಿರುವ ಜನ ಹಲವೊಮ್ಮೆ ಅವುಗಳನ್ನು ಆಧರಿಸಿಯೇ ಪರಸ್ಪರ ಯುದ್ಧಗಳನ್ನು ಮಾಡಿದ್ದಾರೆ. ಅವರೆಲ್ಲರೂ ನಂಬಿರುವುದೆಲ್ಲ ಸಾಕ್ಷ್ಯಗಳನ್ನು ಆಧರಿಸಿಲ್ಲ, ಬದಲಾಗಿ ಭಿನ್ನ ನಂಬಿಕೆಗಳು ಭಿನ್ನ ಪರಂಪರೆಗಳಿಂದ ಹುಟ್ಟಿವೆಯಷ್ಟೇ.

ಒಂದು ನಿರ್ದಿಷ್ಟ ನಂಬಿಕೆಯ ಬಗ್ಗೆ ಚರ್ಚಿಸೋಣ. ಉದಾಹರಣೆಗೆ ರೋಮನ್ ಕ್ಯಾಥಲಿಕರು ಏಸು ಕ್ರಿಸ್ತನ ತಾಯಿ ಮೇರಿ ಸಹಜ ಸಾವನ್ನು ಕಾಣಲಿಲ್ಲ, ಬದಲಾಗಿ ಆಕೆ ನೇರವಾಗಿ ಸ್ವರ್ಗಕ್ಕೆ ಹಾರಿಹೋದಳು ಎಂದು ನಂಬಿದ್ದಾರೆ. ಆದರೆ ಬೇರೆ ಪಂಗಡಗಳ ಕ್ರಿಶ್ಚಿಯನ್ನರು ಇದನ್ನು ಒಪ್ಪದೆ ಮೇರಿ ಎಲ್ಲ ಮಾನವರಂತೆ ಸತ್ತಳು ಎಂದು ವಾದಿಸುತ್ತಾರೆ. ಬೈಬಲ್‌ನಲ್ಲಿ ಮೇರಿ ಯಾವಾಗ ಮತ್ತು ಎಲ್ಲಿ ಸತ್ತಳು ಎಂದು ಹೇಳಿಲ್ಲ, ಪಾಪ ಆ ಮಹಿಳೆಯ ಬಗ್ಗೆ ಬೈಬಲ್‌ನಲ್ಲಿ ಹೆಚ್ಚು ಪ್ರಸ್ತಾಪವೇ ಇಲ್ಲ. ಆದರೂ ಮೇರಿ ನೇರವಾಗಿ ಸ್ವರ್ಗಕ್ಕೆ ಹೋದಳು ಎಂಬ ಕತೆಯನ್ನು ಆರನೆ ಶತಮಾನದಲ್ಲಿ ಹುಟ್ಟುಹಾಕಲಾಯಿತು. ಮಕ್ಕಳ ಸ್ನೋ ವೈಟ್ ಕತೆಯನ್ನು ಸೃಷ್ಟಿಸಿದಂತೆಯೇ ಈ ಕತೆಯನ್ನು ಅದ್ಯಾರೋ ಸೃಷ್ಟಿಸಿದರು. ಅದು ತಲೆಮಾರಿನಿಂದ ತಲೆಮಾರಿಗೆ ದಾಟಿಕೊಂಡು ಬಂದಿದ್ದರಿಂದ ಅದು ನಿಜವಿರಬಹುದು ಎಂದೇ ಜನ ನಂಬಿದರು. ಅದನ್ನು ಅಧಿಕೃತವಾಗಿ ಕ್ಯಾಥೊಲಿಕರ ನಂಬಿಕೆ ಎಂದು ಸಾರಿದ್ದು ಇತ್ತೀಚೆಗೆ, ಅಂದರೆ 1950ರಲ್ಲಿ, ಆದರೆ ವಾಸ್ತವವಾಗಿ ಅದು 1950ರಲ್ಲೂ ನಿಜವಾಗಿರಲಿಲ್ಲ, ಆರೆನೇ ಶತಮಾನದಲ್ಲೂ ಸತ್ಯವಾಗಿರಲಿಲ್ಲ.

ಈ ಪತ್ರದಲ್ಲಿ ಆಮೇಲೆ ಮತ್ತೊಮ್ಮೆ 'ಪರಂಪರೆ'ಯ ಬಗ್ಗೆ ಇನ್ನೊಂದು ರೀತಿಯಲ್ಲಿ ಹೇಳುತ್ತೇನೆ. ಅದಕ್ಕೂ ಮುನ್ನ 'ಹುಕುಂ' ಮತ್ತು 'ದಿವ್ಯಜ್ಞಾನ'ದ ಬಗ್ಗೆ ಹೇಳಬೇಕಿದೆ.

'ಅಧಿಕೃತ' ಸ್ಥಾನದಲ್ಲಿರುವವರು ಹೇಳಿದರು ಎಂಬ ಕಾರಣಕ್ಕೇ ಅವರು ಹೇಳಿದ್ದನ್ನೆಲ್ಲ ನಂಬಕೂಡದು. ಉದಾಹರಣೆಗೆ ಕ್ಯಾಥೊಲಿಕರಲ್ಲಿ ತುಂಬಾ ಮುಖ್ಯವಾದ ವ್ಯಕ್ತಿ ಪೋಪ್. ಹಾಗೆಯೇ ಒಂದು ನಂಬಿಕೆಯ ಮುಸಲ್ಮಾನರಿಗೆ ಉದ್ದನೆ ದಾಡಿ ಬಿಟ್ಟಿರುವ ಅಯತೊಲ್ಲಾಗಳು ಮುಖ್ಯಸ್ಥರು. ದೂರದ ದೇಶದಲ್ಲಿರುವ ಯಾವುದೋ ಅಯತೊಲ್ಲಾ 'ಹುಕುಂ' ಕೊಟ್ಟ ಎಂಬ ಕಾರಣಕ್ಕೆ ತಮ್ಮ ಪ್ರಾಣವನ್ನು ತೆತ್ತಾದರೂ ಕೊಲೆ ಮಾಡಲು ದೊಡ್ಡ ಸಂಖ್ಯೆಯಲ್ಲಿ ಯುವ ಮುಸಲ್ಮಾನರೂ ಇರುವುದು ದುರಂತ. ಈಗಿನ ಪೋಪ್ ಗರ್ಭ ನಿಯಂತ್ರಣವನ್ನು ವಿರೋಧಿಸಬೇಕೆಂದು 'ಹುಕುಂ' ಚಲಾಯಿಸಿದ್ದಾರೆ. ಅವರ ಹುಕುಂ ಅನ್ನು ಜನ ಗುಲಾಮರಂತೆ ಪಾಲಿಸಿದರೆ ಈ ಜಗತ್ತಿನ ಜನಸಂಖ್ಯೆ ಹೆಚ್ಚಾಗಿ ಇಲ್ಲಿ ಭೀಕರ ಕ್ಷಾಮ, ರೋಗ, ಯುದ್ಧದಂತಹ ಸಮಸ್ಯೆಗಳು ಉದ್ಭವಿಸುತ್ತವೆಯಷ್ಟೇ.

ನಿಜ, ವಿಜ್ಞಾನದಲ್ಲೂ ಪ್ರತಿಯೊಂದಕ್ಕೂ ಸಾಕ್ಷ್ಯ ಕೇಳಲಾಗುವುದಿಲ್ಲ. ಬದಲಾಗಿ ಬೇರೆಯವರು ಹೇಳಿರುವುದನ್ನೇ ನಂಬಬೇಕಿದೆ. ಉದಾಹರಣೆಗೆ ನಾನು ಕಣ್ಣಾರೆ ನೋಡಿರದಿದ್ದರೂ ಒಂದು ಸೆಕೆಂಡ್‌ನಲ್ಲಿ ಬೆಳಕು 1,86,000 ಮೈಲಿ ಚಲಿಸುತ್ತದೆ ಎಂದು ನಂಬಿದ್ದೇನೆ. ಇದು ಕೂಡ ಯಾರೋ ಕೊಟ್ಟ 'ಹುಕುಂ' ಅಲ್ಲವೋ ಎಂದು ಕೇಳಬಹುದು. ಆದರೆ ಇದು 'ಹುಕುಂ'ಗಿಂತ ಮಿಗಿಲಾದದ್ದು ಯಾಕೆಂದರೆ ಇದರ ಹಿಂದೆ ವೈಜ್ಞಾನಿಕ ಸಾಕ್ಷ್ಯಗಳಿವೆ. ಅದನ್ನು ಯಾರು ಯಾವಾಗ ಬೇಕಾದರೂ ಪರೀಕ್ಷಿಸಬಹುದು. ಆದರೆ ಯಾವ ಪಾದ್ರಿಯ ಬಳಿಯೂ ಮೇರಿ ಸ್ವರ್ಗಕ್ಕೆ ಹಾರಿ ಹೋದದ್ದರ ಬಗ್ಗೆ ಸಾಕ್ಷ್ಯಗಳಿಲ್ಲ.

ಇನ್ನು 'ದಿವ್ಯಜ್ಞಾನ'ವನ್ನೂ ಯಾಕೆ ನಂಬಬಾರದು ಎಂದು ಹೇಳುತ್ತೇನೆ. 1959ರಲ್ಲಿ ಯಾರಾದರೂ ಪೋಪ್ ಅವರನ್ನು 'ಅದು ಹೇಗೆ ನೀವು ಮೇರಿ ಸ್ವರ್ಗಕ್ಕೆ ಹಾರಿಹೋದಳು ಎಂದು ಹೇಳುತ್ತೀರಿ?' ಎಂದು ಕೇಳಿದ್ದರೆ ಪ್ರಾಯಶಃ ಆತ 'ದಿವ್ಯಜ್ಞಾನ ನನಗೆ ಹಾಗೆ ಹೇಳಿತು' ಎಂದು ಉತ್ತರಿಸುತ್ತಿದ್ದರೋ ಏನೋ. ಧಾರ್ಮಿಕ ನಾಯಕರು ತಮ್ಮೊಳಗೆ ಅನ್ನಿಸಿದ್ದನ್ನೆಲ್ಲ ಹೀಗೆ 'ದಿವ್ಯಜ್ಞಾನ' ಎಂದು ಕರೆಯುತ್ತಾರೆ. ಅಂದಮಾತ್ರಕ್ಕೆ ಅದು ಸತ್ಯ ಎಂದು ನಂಬಕೂಡದು.


ನಾನು 'ನಿನ್ನ ನಾಯಿ ಸತ್ತು ಹೋಯಿತು' ಎಂದು ಹೇಳುತ್ತೇನೆ ಎಂದು ಇಟ್ಟುಕೊ. ಆ ಸುದ್ದಿ ಕೇಳಿ ನಿನಗೆ ತುಂಬಾ ಬೇಜಾರಾಗುತ್ತೆ, 'ನೀನು ಹೇಳುತ್ತಿರುವುದು ನಿಜಾನಾ? ನಿನಗೆ ಹೇಗೆ ಗೊತ್ತು? ನಾಯಿ ಹೇಗೆ ಸತ್ತಿತು?' ಎಂದು ನೀನು ಕೇಳುತ್ತೀಯ. ಆಗ ನಾನು 'ನಾಯಿ ಸತ್ತಿದೆಯೋ ಇಲ್ಲವೋ ಅಂತ ನನಗೆ ಗೊತ್ತಿಲ್ಲ ಆದರೆ ಅದು ಸತ್ತುಹೋಯಿತು ಎಂದು ನನ್ನ ಮನಸ್ಸಿನೊಳಗೆ ಅನ್ನಿಸಿತು. ಅದಕ್ಕೇ ಹಾಗೆ ನಿನಗೆ ಹೇಳಿದೆ' ಎಂದು ಉತ್ತರಿಸಿದರೆ ನಿನಗೆ ನನ್ನ ಬಗ್ಗೆ ಕೋಪ ಬರುತ್ತಲ್ಲವೇ? ಆದ್ದರಿಂದ ಯಾರದ್ದೋ ಮನಸ್ಸಿನಲ್ಲಿ ಹೊಳೆದದ್ದನ್ನು ನೀನು ನಿಜ ಎಂದು ನಂಬಬಾರದು. ಬದಲಾಗಿ ಅವರು ಹೇಳುತ್ತಿರುವುದು ಸತ್ಯವೋ ಅಲ್ಲವೋ ಎಂಬುದನ್ನು ನೀನು ಸಾಕ್ಷ್ಯಗಳ ಸಮೇತ ದೃಢಪಡಿಸಿಕೊಳ್ಳಬೇಕು.


ಆಗಲೇ 'ಪರಂಪರೆ'ಯ ಬಗ್ಗೆ ಇನ್ನೊಂದು ರೀತಿಯಲ್ಲಿ ಹೇಳುತ್ತೇನೆ ಎಂದು ಹೇಳಿದ್ದೆ. ಈ ಪರಂಪರೆ ನಮಗೆ ಹೇಗೆ ಮುಖ್ಯ ಎಂದು ಹೇಳುತ್ತೇನೆ. ಎಲ್ಲ ಪ್ರಾಣಿಗಳು ವಿಕಸನಗೊಂಡಾಗ ಅವು ತಾವಿದ್ದ ಸ್ಥಳಕ್ಕೆ ಸೂಕ್ತವಾಗಿ ರೂಪಗೊಂಡವು. ಉದಾಹರಣೆಗೆ ಆಫ್ರಿಕಾದ ಬಯಲುಸೀಮೆ ಹುಲಿಗಳಿಗೆ ಜೀವಿಸಲು ಸೂಕ್ತವಾಗಿದ್ದರೆ, ಕೆರೆಗಳು ಸಿಹಿನೀರಿನ ಚಿಪ್ಪುಜೀವಿಗಳಿಗೆ ಸೂಕ್ತವಾಗಿದ್ದರೆ, ಸಮುದ್ರದ ನೀರು ಕಡಲೇಡಿಗಳಿಗೆ ಹೊಂದುತ್ತದೆ. ಮನುಷ್ಯ ಕೂಡ 'ಜನಸಾಗರದಲ್ಲಿ' 'ಈಜುತ್ತಿರುತ್ತಾನೆ'. ಈ ಸಮುದ್ರದಲ್ಲಿ ಕಲಿಯಬೇಕಾದ್ದು ಹಲವು ಇರುತ್ತವೆ. ಅದರಲ್ಲೊಂದು ಭಾಷೆ.


ನೀನು ಇಂಗ್ಲಿಷ್ ಮಾತನಾಡುತ್ತೀಯ. ನಿನ್ನ ಗೆಳತಿ ಜರ್ಮನ್ ಮಾತನಾಡುತ್ತಾಳೆ. ನೀವಿಬ್ಬರೂ ನಿಮ್ಮ ನಿಮ್ಮ 'ಜನಸಾಗರದಲ್ಲಿ' 'ಈಜಲು' ನಿಮ್ಮ ನಿಮ್ಮ ಭಾಷೆಯನ್ನು ಉಪಯೋಗಿಸುತ್ತೀರಾ. ಇಂಗ್ಲಿಷ್‌ನಲ್ಲಿ ನಾಯಿಗೆ 'ಡಾಗ್' ಎಂದರೆ ಜರ್ಮನ್ ಭಾಷೆಯಲ್ಲಿ 'ಐನ್ ಹುಡ್' ಎನ್ನುತ್ತಾರೆ. ಇದರಲ್ಲಿ ಯಾವ ಪದ ಸರಿ, ಯಾವುದು ನಿಜ ಎಂದು ತರ್ಕಿಸಲಾಗುವುದಿಲ್ಲ. ಯಾಕೆಂದರೆ ಭಾಷೆ ಕೂಡ 'ಪರಂಪರೆ'ಯ ಭಾಗವಾಗಿ ತಲತಲಾಂತರದಿಂದ ಬಂದಿರುವಂತಹದ್ದು. ತಮ್ಮತಮ್ಮ ಜನಸಾಗರದಲ್ಲಿ ಈಜಲು ಮಕ್ಕಳು ತಮ್ಮ ಭಾಷೆಯನ್ನು ಕಲಿಯುವುದು ಅಗತ್ಯ. ಭಾಷೆಯಲ್ಲದೆ ಪರಂಪರಾಗಿತವಾಗಿ ಬರುವ ವಿಚಾರಗಳನ್ನೂ ಮಕ್ಕಳು ಅರ್ಥಮಾಡಿಕೊಳ್ಳಬೇಕು. ಆದರೆ ಆ ವಿಚಾರಗಳಲ್ಲಿ ಯಾವುದು ಸತ್ಯ ಯಾವುದು ಸುಳ್ಳು ಎಂಬುದರ ಬಗ್ಗೆ ಅರಿವು ಇರಬೇಕು. ಉದಾಹರಣೆಗೆ ಪಿಶಾಚಿ, ದೆವ್ವಗಳನ್ನು ಕುರಿತ ಕತೆಗಳನ್ನು ನಂಬಕೂಡದು.


ನಿನಗಿನ್ನೂ ಹತ್ತು ವರ್ಷ ವಯಸ್ಸು. ಆದ್ದರಿಂದ ನಾನು ಇಲ್ಲಿ ಹೇಳಿರುವುದೆಲ್ಲಾ ನಿನಗೆ ಅರ್ಥವಾಗಿರಲಿಕ್ಕಿಲ್ಲ, ಆದರೆ ಒಂದನ್ನು ನೆನಪಿಟ್ಟುಕೋ. ಯಾರಾದರೂ ತುಂಬಾ ಮುಖ್ಯವಾದ ವಿಚಾರ ಎಂದು ನಿನಗೆ ಏನನ್ನಾದರು ಹೇಳಿದರೆ ನೀನು "ಇದಕ್ಕೆ ಸಾಕ್ಷ್ಯಗಳಿವೆ ಎಂದು ಜನ ನಂಬುತ್ತಾರೆಯೋ ಅಥವಾ ಪರಂಪರೆಯ ಕಾರಣಕ್ಕೆ ಸಾಕ್ಷ್ಯಗಳಿಲ್ಲದಿದ್ದರೂ ಇದನ್ನು ನಂಬುತ್ತಾರೋ?" ಎಂದು ನಿನ್ನನ್ನೇ ಕೇಳಿಕೋ. ಅಷ್ಟೇ ಅಲ್ಲ, 'ಇದು ಸತ್ಯ' ಎಂದು ಯಾರಾದರು ಹೇಳಿದರೆ 'ಅದಕ್ಕೆ ಸಾಕ್ಷಿ ಇದೆಯೇ?' ಎಂದು ಕೇಳು. ಅವರಲ್ಲಿ ಸಾಕ್ಷಿ ಇಲ್ಲದಿದ್ದರೆ ನೀನು ಅವರ ಹೇಳುವ ಒಂದೇ ಒಂದು ಪದವನ್ನೂ ನಂಬಕೂಡದು.


ನಿನ್ನ ಪ್ರೀತಿಯ,
ಅಪ್ಪ







# KAS ಹಗರಣ CID ಗಮನಕ್ಕೆ...

ನಿರೀಕ್ಷಿಸಿದ್ದಂತೆ ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಗೋನಾಳ್ ಭೀಮಪ್ಪ ಮತ್ತವನ ಮೋಸಗಾರರ ಟೀಂ ವಿರುದ್ಧ ಸಿಐಡಿ ತನಿಖೆಗೆ ಚಾಲನೆ ಸಿಕ್ಕಿದೆ.

ಕರ್ನಾಟಕದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಖುದ್ದು ಸರ್ಕಾರವೇ ಕೆಪಿಎಸ್‌ಸಿ ವಿರುದ್ಧ ಪೊಲೀಸರಿಗೆ ದೂರು ನೀಡಿ ಗೋನಾಳ್ ಗ್ಯಾಂಗ್ ಅನ್ನು ಹಿಡಿದು ಜೈಲಿಗೆ ತರುಬಲು ತಯಾರಿ ಮಾಡಿಕೊಳ್ಳುತ್ತಿದೆ.

ಕಳೆದ ವಾರದ 'ಲಂಕೇಶ್'ನಲ್ಲಿ ಇಂಟರ್‌ವ್ಯೂನಲ್ಲಿ ಯಾವ್ಯಾವ ರೀತಿಯ ವಂಚನೆಗಳಾದವೆಂಬ ವಿವರಗಳನ್ನು ಪ್ರಕಟಿಸಲಾಗಿತ್ತು, ಅದಕ್ಕೆ ಪೂರಕವಾಗಿ ಈಗ ಇನ್ನೊಂದಿಷ್ಟು ಡೀಲ್‌ಗಳ ವಿವರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಸಿಐಡಿ ಪತ್ತೇದಾರರು ತಮ್ಮ ತನಿಖೆಗಾಗಿ ಈ ಮಾಹಿತಿಗಳನ್ನು ಬಳಸಬಹುದಾಗಿದೆ. ಕೆಪಿಎಸ್‌ಸಿಯ ಯಾವ್ಯಾವ ಸದಸ್ಯರು ಯಾವ್ಯಾವ ಏಜೆಂಟರ ಮೂಲಕ ಲಂಚದ ಡೀಲ್ ಕುದುರಿಸುತ್ತಿದ್ದರೆಂಬ ಮಾಹಿತಿ ಇದು.

## ಗೋನಾಳ್ ಗ್ಯಾಂಗ್

ಗೋನಾಳ್ ಭೀಮಪ್ಪ ಕೆಎಎಸ್ ಆಕಾಂಕ್ಷಿ ಅಭ್ಯರ್ಥಿಗಳ ಪೈಕಿ ಜನರಲ್ ಕ್ಯಾಟಗರಿ ಹಾಗೂ ಎಸ್‌ಸಿ ಎಡಗೈ ಸಮುದಾಯದವರ ಡೀಲ್‌ಗಳನ್ನು ನಡೆಸಿದ್ದಾನೆ. ಇಂಟರ್‌ವ್ಯೂಗೆ ಸಂಬಂಧಿಸಿದಂತೆ ಗೋನಾಳ್ ಖುದ್ದಾಗಿ ಏಪ್ರಿಲ್ 1, 2 ಹಾಗೂ ಮೇ 7 ರಿಂದ 10 ರವರೆಗೆ ನಡೆಸಿದ ಸಂದರ್ಶನಕ್ಕೆ ಹಾಜರಾದವರ ಪೈಕಿ ಯಾರ್‍ಯಾರಿಗೆಲ್ಲಾ 150 ಅಂಕ ನೀಡಲಾಗಿದೆಯೋ ಅಂತಹ ಅಭ್ಯರ್ಥಿಗಳ ಬಗ್ಗೆ ಸಿಐಡಿ ತನಿಖೆ ಮಾಡುವುದು ಒಳಿತು. ಜೊತೆಗೆ ಗೋನಾಳ್‌ನ ಏಜೆಂಟರಾಗಿದ್ದ ಸುಧೀರ್, (ಬೆಂಗಳೂರು ಜಲಮಂಡಳಿಯಲ್ಲಿ ಎಇಇ) ಸೋಮೇಶ್ವರ ಚಿಕ್ಕಮಠ್ (ಬಿಡಿಎ ಅಧಿಕಾರಿ) ವಿಧಾನಸೌಧದ ರಾಜಶೇಖರ್, ಮಂಡ್ಯದ ಕೌಡ್ಲೆ ರವೀಂದ್ರನಾಥ್ ಹಾಗೂ ಜೆಡಿಎಸ್ ಲೀಡರ್ ಅಮರನಾಥ್ (ಮೊಬೈಲ್ ನಂ. 9845088816) ರ ಓಡಾಟ, ಫೋನ್‌ಕಾಲ್‌ಗಳನ್ನೆಲ್ಲಾ ತನಿಖೆಗೊಳಪಡಿಸಬೇಕಿದೆ.

## ದಯಾಶಂಕರ್

ಪ್ರಧಾನವಾಗಿ 3 ಬಿ ಕ್ಯಾಟಗರಿಯ ಅಭ್ಯರ್ಥಿಗಳನ್ನು ಡೀಲ್ ಮಾಡಿದ್ದಾನೆ. ಬೆಂಗಳೂರು ಜಲಮಂಡಳಿಯ ಸುಧೀರ್‌ನೇ ದಯಾಶಂಕರನಿಗೂ ಬ್ರೋಕರ್ ಆಗಿದ್ದ, ಸುಧೀರನ ಮೊಬೈಲ್ ಸಂಖ್ಯೆ 9740522993 ಹಾಗೂ 9481421192 ನ ವಿವರಗಳನ್ನು ಚೆಕ್ ಮಾಡಿದರೆ ಯಾರ್‍ಯಾರು ದಯಾಶಂಕರನಿಗೆ ದುಡ್ಡು ಕೊಟ್ಟರೆಂಬುದು ಗೊತ್ತಾಗುತ್ತದೆ.

ದಾವಣಗೆರೆ ಹೊನ್ನಾಳಿ ತಾಲ್ಲೂಕಿನ ಎ.ಎಚ್. ಮಹೇಂದ್ರ S/o ಹೊಲೆಯಪ್ಪ ಎಂಬುವನು ಡಿವೈಎಸ್‌ಪಿ ಹುದ್ದೆ ಗಿಟ್ಟಿಸಲು ದಯಾಶಂಕರನಿಗೆ 60 ಲಕ್ಷ ರೂಪಾಯಿ ಲಂಚ ಕೊಟ್ಟಿದ್ದಾನೆ ಎನ್ನಲಾಗಿದೆ. ಮಹೇಂದ್ರನ ರಿಜಿಸ್ಟರ್ ನಂಬರ್ 13956 ಆಗಿದ್ದು ಇವನಿಗೆ ಲಿಖಿತ ಪರೀಕ್ಷೆಯಲ್ಲಿ 1007.5 ಅಂಕ ಬಂದಿತ್ತು, ಹಣ ನೀಡದಿದ್ದ ಹತ್ತಿರದ ಸ್ಪರ್ಧಿಗಳನ್ನು ತುಳಿದು ಮಹೇಂದ್ರನನ್ನು ಮೇಲೆತ್ತಲು ಇಂಟರ್‌ವ್ಯೂನಲ್ಲಿ 150 ಅಂಕ ನೀಡಲಾಗಿದೆ.

## ಪಾರ್ಶ್ವನಾಥ್ ಅಭಾವ ವೈರಾಗ್ಯ

ಜೈನ ಎಂಬ ಅಲ್ಪಸಂಖ್ಯಾತ ಕೋಟಾದಡಿ, ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್‌ರ ಶಿಫಾರಸ್ಸಿನ ಮೇರೆಗೆ ಕೆಪಿಎಸ್‌ಸಿ ಮೆಂಬರ್ ಆದ ಪಾರ್ಶ್ವನಾಥ್ ಇಬ್ಬಂದಿ ಮನಸ್ಥಿತಿಯ ವ್ಯಕ್ತಿ. ಅತ್ತ ತೀರಾ ಲಂಚಕೋರನೂ ಅಲ್ಲ, ಇತ್ತ ಪ್ರಾಮಾಣಿಕನೂ ಅಲ್ಲ ಎಂಬಂತವರು.

ಮೊನ್ನಿನ ಕೆಎಎಸ್ ನೇಮಕಾತಿಯಲ್ಲಿ ಮುಸ್ಲಿಂ, ಜೈನ ಹಾಗೂ ಇತರ ಅಲ್ಪಸಂಖ್ಯಾತ ಅಭ್ಯರ್ಥಿಗಳ ಏಳುಬೀಳುಗಳು ಪಾರ್ಶ್ವನಾಥ್ ಕೈಲಿತ್ತು, ಈತ ಅಭ್ಯರ್ಥಿಗಳಿಂದ ನೇರವಾಗಿ ಹಣ ಪಡೆಯದೆ, ಜೈನ ಮಠವೊಂದಕ್ಕೆ ಹಣ ಕಳುಹಿಸುವಂತೆ ವ್ಯವಸ್ಥೆ ಮಾಡಿಕೊಂಡಿದ್ದರು. ಅಲ್ಲಿಂದ ಮುಂದಕ್ಕೆ ಆ ಕೋಟಿಗಟ್ಟಲೆ ಹಣ ಎಲ್ಲಿಗೆ ಹೋಗುತ್ತಿತ್ತೆಂಬುದು ಪತ್ತೆಯಾಗಬೇಕಿದೆ. ಈ ಪಾರ್ಶ್ವನಾಥರ ಅಕ್ಕನ ಮಗ ನೇಮಿರಾಜ ಎಂಬಾತ ಕೆಪಿಎಸ್‌ಸಿಯಲ್ಲಿ ಕಿರಿಯ ಸಹಾಯಕನಾಗಿದ್ದಾನೆ. ಪಾರ್ಶ್ವನಾಥ್ ಈತನನ್ನೇ ತಮ್ಮ ಆಪ್ತ ಸಹಾಯಕರಾಗಿ ನೇಮಿಸಿಕೊಂಡು ವ್ಯವಹಾರ ಕುದುರಿಸಿದ್ದಾರೆ. ಯಾವಾಗ ಕೆಎಎಸ್ ಹಗರಣ ಹೊರಬಂತೋ ಆಗ ಹೆದರಿ ಹೋದ ಪಾರ್ಶ್ವನಾಥ್ ತರಾತುರಿಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು.

ಸಿಐಡಿ ಪೊಲೀಸರು ನೇಮಿರಾಜನ ಬಗ್ಗೆಯೂ ನಿಗಾ ಇಟ್ಟರೆ ಇನ್ನಷ್ಟು ಮಾಹಿತಿ ಸಿಗಲಿದೆ.

ಇನ್ನು ಡಾ. ಮಹಾದೇವ್ ಹಾಗೂ ಕನಿರಾಂ ಎಂಬ ಮೆಂಬರ್‌ಗಳು ಕ್ರಮವಾಗಿ ಪರಿಶಿಷ್ಟ ಜಾತಿ-ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ, 3ಎ ಅಭ್ಯರ್ಥಿಗಳ ಜೊತೆ ಡೀಲ್ ಕುದುರಿಸಿ ಜೇಬು ತುಂಬಿಸಿಕೊಂಡಿದ್ದಾರೆ. ಈ ಮೆಂಬರ್‌ಗಳ ಆಪ್ತ ಸಹಾಯಕರಾಗಿದ್ದ ಹರೀಶ್ ಯಾನೆ ಹುಚ್ಚಯ್ಯ ಹಾಗೂ ಸುಭಾಷ್ ಲಮಾಣಿ ಇವರಿಬ್ಬರು ಬ್ರೋಕರ್‌ಗಳಾಗಿ ಕೆಲಸ ಮಾಡಿ ಡೀಲ್ ಕುದುರಿಸುತ್ತಿದ್ದರು.

## ಕಲ್ಲಡ್ಕನ ಭಂಟ ರಂಗಮೂರ್ತಿ

ಕರಾವಳಿ ಮೂಲದ ಆರ್‌ಎಸ್‌ಎಸ್ ಹಿನ್ನೆಲೆಯ ರಂಗಮೂರ್ತಿಗೆ ಕೆಪಿಎಸ್‌ಸಿ ಸದಸ್ಯತ್ವ ಸಿಕ್ಕಿದ್ದೇ ಚೆಡ್ಡಿ ಘಟಿಂಗ ಕಲ್ಲಡ್ಕ ಪ್ರಭಾಕರ ಭಟ್ಟನ ಕೃಪೆಯಿಂದ.

ರಂಗಮೂರ್ತಿಯ ಆಪ್ತ ಸಹಾಯಕ ವೆಂಕಟಯ್ಯನೇ ಬಹುತೇಕ ಡೀಲ್‌ಗಳನ್ನು ಕುದುರಿಸಿದ್ದಾನೆ. ಜನರಲ್ ಕ್ಯಾಟಗರಿಯ ಅಭ್ಯರ್ಥಿಗಳಿಂದ ಹಣ ಕೀಳುತ್ತಿದ್ದ ರಂಗಮೂರ್ತಿ ತನ್ನ ಇನ್ನೊಬ್ಬ RSS ಗೆಣೀಕಾರನ ಕುಟುಂಬದ ಮೂವರು ಬ್ರಾಹ್ಮಣ ಅಭ್ಯರ್ಥಿಗಳಿಗೆ ಇಂಟರ್‌ವ್ಯೂನಲ್ಲಿ ಅತಿಹೆಚ್ಚು ಅಂಕ ನೀಡಿ ದೊಡ್ಡ ಹುದ್ದೆ ಕೊಡಿಸಿದ್ದಾನೆ.

ಭಾವನಾ ಭಟ್‌ಗೆ ತಹಶೀಲ್ದಾರ್ ಮತ್ತು ವಂದನಾ ಭಟ್ ಹಾಗೂ ಸೂರಜ್‌ಗೆ ಅಸಿಸ್ಟೆಂಟ್ ಕಮಿಷನರ್ ಹುದ್ದೆ ಸಿಕ್ಕಿದೆ. ಈ ಭಟ್ ಸೋದರಿಯರು ತಮ್ಮ ವಿವರ ನೀಡುವಾಗ ಅಪ್ಪಿತಪ್ಪಿಯೂ ತಂದೆಯ ಹೆಸರನ್ನು ನಮೂದಿಸಿಲ್ಲ, ಆತ RSS ಲೀಡರ್ ಎಂಬ ಕಾರಣಕ್ಕೆ. ಆದರೆ ವಂದನಾ ಭಟ್ ಮಾತ್ರ ಚಾಮರಾಜಪೇಟೆಯ ಅಜಿತಶ್ರೀ ಹಿಂದೂ ಸೇವಾ ಪ್ರತಿಷ್ಠಾನದ ವಿಳಾಸ ನೀಡಿದ್ದಾಳೆ. ಸಿಐಡಿ ಪೊಲೀಸರು ಈ RSS ಹಿನ್ನೆಲೆಯವರ ಉತ್ತರ ಪತ್ರಿಕೆಗಳನ್ನೂ ಕೂಡ ತನಿಖೆಗೆ ಒಳಪಡಿಸುವ ಅಗತ್ಯವಿದೆ.

## ಕೃಷ್ಣ ಪ್ರಸಾದ್ ಪರವಾಗಿಲ್ಲ

ಇರುವ ಕೆಪಿಎಸ್‌ಸಿ ಮೆಂಬರ್‌ಗಳ ಪೈಕಿ ಕೊಂಚ ಪರವಾಗಿಲ್ಲ ಎನ್ನಬಹುದಾದ ಕೃಷ್ಣಪ್ರಸಾದ್ ಕಣ್ಣೆದುರೇ ಈ ಹಗರಣ ನಡೆಯುತ್ತಿದ್ದಾಗಲೂ ಅಸಹಾಯಕನಂತೆ ಕೈಕೈ ಹಿಸುಕಿಕೊಂಡು ಕಾಲ ಕಳೆದಿದ್ದಾರೆ.

ನಡೆದಿರುವ ಹಗರಣಕ್ಕೆ ನಾನು ಹೊಣೆಯಲ್ಲ ಎಂಬುದೇ ಇವರ ರೆಡಿಮೇಡ್ ಉತ್ತರವಾಗಿದೆ.

## ನಿರಾಣಿ ಗೋಲ್‌ಮಾಲ್

ಗೋನಾಳ್ ಭೀಮಪ್ಪ ಆಗಿನ ಬಿಜೆಪಿ ಸಚಿವ ಮುರುಗೇಶ್ ನಿರಾಣಿ ಜೊತೆ ಒಂದು ಡೀಲ್ ಕುದುರಿಸಿಕೊಂಡು ಬಿಜಾಪುರದ ಭೀಮಪ್ಪ ಆಜೂರ ಎಂಬ ಅಭ್ಯರ್ಥಿಗೆ ತಹಶೀಲ್ದಾರ್ ಹುದ್ದೆ ಸಿಗುವಂತೆ ನೋಡಿಕೊಂಡಿದ್ದಾನೆ. ಲಿಖಿತ ಪರೀಕ್ಷೆಯಲ್ಲಿ 927.5 ಅಂಕ ಪಡೆದಿದ್ದ (ರಿ.ನಂ. 11517) ಭೀಮಪ್ಪನಿಗೆ ಇಂಟರ್‌ವ್ಯೂನಲ್ಲಿ 150 ಅಂಕ ನೀಡಿ ಮೇಲೆತ್ತಲಾಗಿದೆ. ಏಪ್ರಿಲ್ 2 ರಂದು ಭೀಮಪ್ಪನ ಇಂಟರ್‌ವ್ಯೂ ನಡೆದ ದಿನದಂದು ಖುದ್ದು ನಿರಾಣಿಯೇ ಕೆಪಿಎಸ್‌ಸಿ ಕಚೇರಿಗೆ ಬಂದು ಗೋನಾಳ್‌ನ ಚೇಂಬರಿನಲ್ಲಿ ಕೂತು ತನ್ನ ಅಭ್ಯರ್ಥಿ ಪರವಾಗಿ ಪ್ರಭಾವ ಬೀರಿದ್ದಾನೆ.


ಸಿಐಡಿ ಪೊಲೀಸರು ತಹಶೀಲ್ದಾರ್ ಕುರ್ಚಿಯ ಕನಸು ಕಾಣುತ್ತಿರುವ ಈ ಭೀಮಪ್ಪ ಆಜೂರ್‌ನನ್ನು ವಿಚಾರಣೆಗೆ ಒಳಪಡಿಸಬೇಕಿದೆ.




ಅನುರಾಧ ವಸ್ತ್ರದ್ | ಕೌಸರ್ ರೇಷ್ಮಾ | ವಂದನಾ ಭಟ್ | ಭಾವನ ಭಟ್



ಅಜಯ್




ನಿತಿನ್ ಚಕ್ಕಿ



ಭೀಮಪ್ಪ ಅಜೂರ್



ಎ.ಆರ್.ಸೂರಜ್



ಎ.ಎಚ್.ಮಹೇಂದ್ರ

## ವಸ್ತ್ರದ್ ಕುಟುಂಬದ ಡೀಲ್

ರಿಜಿಸ್ಟರ್ ನಂ. 16926 ರ ಅನುರಾಧ ವಸ್ತ್ರದ್ ಎಂಬಾಕೆಗೆ ಗೋನಾಳ್ ಗ್ಯಾಂಗ್ ಅಸಿಸ್ಟೆಂಟ್ ಕಮಿಷನರ್ ಹುದ್ದೆ ದಯಪಾಲಿಸಿದೆ.

ಅನಾಮತ್ತು ಎರಡು ಕೋಟಿ ರೂಪಾಯಿಗಳ ಡೀಲ್ ಇದು.

ಮೈಸೂರು ಜಿಲ್ಲಾಧಿಕಾರಿಯಾಗಿರುವ ವಸ್ತ್ರದ್‌ರ ರಕ್ತ ಸಂಬಂಧಿಯಾಗಿರುವ ಅನುರಾಧ ವಸ್ತ್ರದ್‌ರ ಪತಿ ಎಸ್.ಎಸ್. ಹಿರೇಮಠ್ ಕೂಡಾ ಕೆಎಎಸ್ ಅಧಿಕಾರಿ. ಲಿಖಿತ ಪರೀಕ್ಷೆಯಲ್ಲಿ 1055 ಅಂಕ ಪಡೆದಿದ್ದ ಅನುರಾಧ ಇಂಟರ್‌ವ್ಯೂನಲ್ಲಿ 150 ಅಂಕ ಗಿಟ್ಟಿಸಿ ಎಸಿ ಹುದ್ದೆಗೆ ಆಯ್ಕೆಯಾಗಿದ್ದಾಳೆ. ಅನುರಾಧಳ ಈ ವಂಚನೆಯಿಂದಾಗಿ ದಾವಣಗೆರೆಯ ಬಡ ಮುಸ್ಲಿಂ ಪ್ರತಿಭಾವಂತೆ ಕೌಸರ್ ರೇಷ್ಮಾ ಎಂಬಾಕೆಗೆ ಅನ್ಯಾಯವಾಗಿದೆ. ರೇಷ್ಮಾಗೆ ಲಿಖಿತ ಪರೀಕ್ಷೆಯಲ್ಲಿ ಅನುರಾಧಗಿಂತ ಜಾಸ್ತಿ ಅಂದರೆ 1064 ಅಂಕ ಬಂದಿತ್ತು, ಆದರೆ ಅನುರಾಧಳಿಂದ ಲಂಚದ ಎಂಜಲು ತಿಂದ ಮೆಂಬರ್‌ಗಳು ರೇಷ್ಮಾಗೆ ಎಸಿ ಹುದ್ದೆ ತಪ್ಪಿಸಲು ಇಂಟರ್‌ವ್ಯೂನಲ್ಲಿ 200 ಕ್ಕೆ ಕೇವಲ 50 ಅಂಕ ನೀಡಿ ತುಳಿದು ಮೂಲೆಗುಂಪು ಮಾಡಿದ್ದಾರೆ.

ಸಿಐಡಿ ಪೊಲೀಸರು ಅನುರಾಧ ವಸ್ತ್ರದಳನ್ನು ವಿಚಾರಣೆಗೊಳಪಡಿಸಬೇಕಿದೆ.

## ನಿತಿನ್ ಚಕ್ಕಿಯ ಸುಳ್ಳುಗಳು

3ಬಿ ಕ್ಯಾಟಗರಿಗೆ ಸೇರಿರುವ ನಿತಿನ್ ಚಕ್ಕಿ ಎಂಬುವನು ಕೆಪಿಎಸ್‌ಸಿ ಮೆಂಬರ್ ದಯಾಶಂಕರನ ದಯೆಯಿಂದ ಅಸಿಸ್ಟೆಂಟ್ ಕಮೀಷನರ್ ಹುದ್ದೆ ಗಿಟ್ಟಿಸಿದ್ದ. (ಲಿಖಿತ ಪರೀಕ್ಷೆಯಲ್ಲಿ 1067 ಅಂಕ ಪಡೆದಿದ್ದ, ರಿ. ನಂ. 11278) ನಿತಿನ್‌ಗೆ ಇಂಟರ್‌ವ್ಯೂನಲ್ಲಿ 150 ಅಂಕ ಕೊಡಲಾಗಿದೆ. ಇಲ್ಲಿ ನಿತಿನ್‌ನ ವಂಚನೆ ಏನೆಂದರೆ ಈತನ ತಂದೆ-ತಾಯಿ ಇಬ್ಬರೂ ಬೆಂಗಳೂರಿನಲ್ಲಿ ಡಾಕ್ಟರ್‌ಗಳಾಗಿದ್ದು ತನ್ನ ವಾರ್ಷಿಕ ವರಮಾನವು 3.5 ಲಕ್ಷ ರೂಪಾಯಿ ಎಂದು ನಮೂದಿಸಿದ್ದಾನೆ. ಇಷ್ಟು ಆದಾಯ ಇರುವವರು 3ಬಿ ಕ್ಯಾಟಗರಿಗೆ ಬರುವುದಿಲ್ಲ ಎಂಬುದು ಲಂಚ ತಿಂದಿರುವ ದಯಾಶಂಕರನಿಗೆ ಗೊತ್ತಾಗಿಲ್ಲ.

ಈಗ ಪೊಲೀಸರಾದರೂ ಗಮನಿಸಲಿ.

## 100 ಕೋಟಿ ರೂ. ಹಗರಣ

2011 ರ ಕೆಎಎಸ್ ನೇಮಕಾತಿಯ ಒಟ್ಟು 362 ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ 100 ಕೋಟಿ ರೂಪಾಯಿ ಲಂಚದ ಹಣ ಕೈ ಬದಲಾಯಿಸಿರುವ ಅಂದಾಜಿದೆ.


ಅಭ್ಯರ್ಥಿಗಳಿಂದ ಇಷ್ಟು ಹಣ ದೋಚಿಕೊಂಡ ಗೋನಾಳ್ ಗ್ಯಾಂಗ್ ಯಾವಾಗ ಸಿಐಡಿ ತನಿಖೆಗೆ ಚಾಲನೆ ದೊರೆಯಿತೊ ಈಗ ಗಾಬರಿಯಾಗಿದೆ. ಮತ್ತೊಂದೆಡೆ ಲಂಚ ನೀಡಿ ಹುದ್ದೆ ಗಿಟ್ಟಿಸಿದ್ದ ಅಯೋಗ್ಯ ಅಭ್ಯರ್ಥಿಗಳೂ ಕಂಗಾಲಾಗಿದ್ದಾರೆ. 50-60 ಲಕ್ಷದ ತನಕ ಲಂಚ ನೀಡಿ ಎಸಿ, ಡಿವೈಎಸ್‌ಪಿ ಹುದ್ದೆ ಕದ್ದವರಿಗೆ ಮುಂದೆ ಹುದ್ದೆಯೂ ಇಲ್ಲ, ಈಗ ದುಡ್ಡೂ ವಾಪಸ್ ಸಿಗಲ್ಲ ಎಂಬ ತ್ರಿಶಂಕು ಸ್ಥಿತಿ ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಪಿಎಸ್‌ಸಿಯೊಳಗಿನ ಭ್ರಷ್ಟಾಚಾರವನ್ನು ಬೇರು ಸಮೇತ ಕಿತ್ತು ಹಾಕಲು ನಿರ್ಧರಿಸಿರುವುದು ಈ ಖದೀಮರಿಗೆ ನಡುಕ ಹುಟ್ಟಿಸಿದೆ.

ಈ ನೇಮಕಾತಿ ಹಗರಣದ ತನಿಖೆ ಶುರುವಾದರೆ ಮುಗಿಯುವುದೆಂದೋ ಎಂದು ಯೋಚಿಸಿ ಲಂಚ ಕೊಟ್ಟಿರುವವರು ಹಣ ವಾಪಸ್ ಕೊಡಿ ಎನ್ನುತ್ತಾ ಮೆಂಬರ್‌ಗಳ ಮನೆಗೆ ನುಗ್ಗುತ್ತಿದ್ದಾರೆ.

ಸಿಐಡಿ ಪೊಲೀಸರು ಒಂದಷ್ಟು ಗೂಢಚಾರರನ್ನು ಈ ಮೆಂಬರ್‌ಗಳ ಮನೆ ಹತ್ತಿರ ಕಾವಲಿಗಿಟ್ಟರೆ, ಅವರ ಚಲನವಲನಗಳ ಮೇಲೆ ನಿಗಾ ಇಟ್ಟರೆ ಭ್ರಷ್ಟಾಚಾರದ ತನಿಖೆಗೆ ಇನ್ನಷ್ಟು ಮಾಹಿತಿ ಸಿಗುವುದು ಖಚಿತ.

● ಪಾರ್ವತೀಶ್

# ಸಾವಿನ ಮನೆಯಲ್ಲಿ ಮೋದಿಯ ಪವಾಡ



ಉತ್ತರಾಖಂಡ ರಾಜ್ಯ ಅಕ್ಷರಶಃ ಸಾವಿನ ಮನೆ ...ತಾಗಿದೆ. ಎಲ್ಲೆಡೆ ಸಾವುನೋವುಗಳು, ನಾಪತ್ತೆಯಾಗಿರುವ ...ವರದೇ ಸುದ್ದಿ. ಸಾವಿರಾರು ಮನೆಗಳು ಕೊಚ್ಚಿಹೋಗಿ ...ಂತರ ಜನರು ಬೀದಿಗೆ ಬಿದ್ದಿರುವ ಸುದ್ದಿಗಳು, ...ರ್ಗಮ ಪ್ರದೇಶಗಳಲ್ಲಿ ಸಿಕ್ಕಿಬಿದ್ದಿರುವ ಜನರ ...ಗಳು, ಕಳ್ಳಕಾಕರ ಹಾವಳಿ, ಸಾಂಕ್ರಾಮಿಕ ...ಗದ ಭೀತಿ ಇತ್ಯಾದಿ ಸುದ್ದಿಗಳು ಯಥೇಚ್ಛವಾಗಿ ...ಮಬರುತ್ತಿವೆ.

ಇಂಥಾ ಭಯಾನಕ ಸನ್ನಿವೇಶದಲ್ಲಿ ಒಬ್ಬ ಪವಾಡ ...ರುಷ ತನ್ನ ವಿಶೇಷ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ...ಷ್ಟದಲ್ಲಿರುವ ಸಾವಿರಾರು ಜನರನ್ನು ರಕ್ಷಿಸಿರುವ ...ಷ ವರದಿ ಎಲ್ಲರ ಗಮನ ಸೆಳೆದಿದೆ. ಆ ...ಡ ಪುರುಷನೇ ಗುಜರಾತ್ ...ಖ್ಯಮಂತ್ರಿ ನರೇಂದ್ರ ಮೋದಿ.

ಈ ಪವಾಡ ಪುರುಷ 80 ...ನೋವಾ ಕಾರುಗಳು, 25 ಬಸ್ಸುಗಳ ಸಮೇತ ಕಳೆದ ...ವಾರ ಉತ್ತರಾಖಂಡದತ್ತ ಧಾವಿಸಿದರಂತೆ. ಜೊತೆಗೆ ...ಕಾರಿಗಳೂ ಇದ್ದರಂತೆ. ಭಾನುವಾರದ ಒಳಗಾಗಿ, ಅದೂ ...ರು ಎರಡೇ ದಿನಗಳಲ್ಲಿ 15,000 ಜನರನ್ನು, ಕ್ಷಮಿಸಿ ... ಜನರನ್ನಲ್ಲ; ಗುಜರಾತಿ ಜನರನ್ನು ರಕ್ಷಿಸಿ ವಾಪಸ್ ...ಬಂದರಂತೆ.

...ಇರಲಿ. ಈ ಅಂಕಿಸಂಖ್ಯೆಗಳ ಬಗ್ಗೆ ಸ್ವಲ್ಪ ...ಯೋಚಿಲಿಸೋಣ. ಒಂದು ಇನ್ನೋವಾ ದಲ್ಲಿ ಎಂಟು ...ಕೂರಬಹುದು. ಹತ್ತು ಜನ ಕೂತಿದ್ದರು ಅಂತಾನೇ, ...ಸೋಣ. ಡೆಹ್ರಾಡೂನ್‌ನಿಂದ ಪ್ರವಾಹಪೀಡಿತ ಸ್ಥಳಗಳಿಗೆ



...ಪಲು ಕನಿಷ್ಠ ಐದು ತಾಸು ಬೇಕು; ಅಲ್ಲಿಂದ ...ರನ್ನು ಡೆಹ್ರಾಡೂನ್‌ಗೆ ಕರೆ ತರಲು ಮತ್ತೆ ಕನಿಷ್ಠ ...ತಾಸು ಬೇಕು. ಇರಲಿ, ಸೂಪರ್‌ಸ್ಪೀಡ್ ಡ್ರೈವರ್‌ಗಳು ... ತಾಸುಗಳಲ್ಲಿ ತಲುಪಿದರು ಎಂದೇ ಭಾವಿಸೋಣ. ... ಒಟ್ಟು ಎಂಟು ತಾಸಿನಲ್ಲಿ 800 ಮಂದಿಯ ... ಸಾಧ್ಯ. ಹೀಗೆ ಯಾವ ರೀತಿ ಲೆಕ್ಕ ಹಾಕಿದರೂ ...00 ಸಂಖ್ಯೆ ಮುಟ್ಟಲು ಎಷ್ಟು ದಿನಗಳು ...ಬೇಕಾಗಬಹುದು?

... ಅಂಕಿಸಂಖ್ಯೆಯ ತರ್ಕಕ್ಕೆ ಹೋಗುವುದಕ್ಕೂ ಮುಂಚೆ ...ಗಮನಿಸಿಕೊಳ್ಳಬೇಕಾದ ಮತ್ತೊಂದು ಜಟಿಲ ಸಮಸ್ಯೆಯಿದೆ. ...ದಿಯ ಇನ್ನೋವಾ ಕಾರು ಮತ್ತು ಹೈಟೆಕ್ ಬಸ್‌ಗಳ ...ಜನ ಪಡೆಯಬೇಕಾದರೆ ಸಂತ್ರಸ್ತರು ಒಂದು ಷರತ್ತನ್ನು ತಪ್ಪದೇ ಪಾಲಿಸಿರಲೇಬೇಕು. ಸಂತ್ರಸ್ತರು ದುರ್ಗಮ ಗುಡ್ಡಗಾಡುಗಳಿಂದ ಮೋದಿಯ ಇನ್ನೋವಾ ಕಾರು ಚಲಿಸಬಹುದಾದ ಉತ್ತಮ ರಸ್ತೆಗಳನ್ನು ತಲುಪಲು, ಸಂತ್ರಸ್ತರು ರೆಕ್ಕೆಕಟ್ಟಿಕೊಂಡು ಹಾರಿಬಂದರೆ ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಿದ್ದೇ ಆದಲ್ಲಿ ಅಂಥವರು ಐಎಸ್‌ಐ ಏಜೆಂಟರಿರಬಹುದು ಎಂಬ ಗುಮಾನಿ ಮುಲಾಜಿಲ್ಲದೆ ಮೋದಿ ಅಭಿಮಾನಿಗಳಲ್ಲಿ ಒಡಮೂಡುತ್ತದೆ!

ಮತ್ತೊಂದು ತಮಾಷೆ ಎಂದರೆ ಮೋದಿ ಹೋಗುವಾಗ ನಾಲ್ಕು ಬೋಯಿಂಗ್ ವಿಮಾನಗಳನ್ನೂ ತೆಗೆದುಕೊಂಡು ಹೋಗಿದ್ದರಂತೆ. ಅವುಗಳನ್ನು ಸೂಕ್ತವಾಗಿ ಬಳಸಿಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲವಂತೆ. ಸೇನೆಯ ಹೆಲಿಕಾಪ್ಟರ್‌ಗಳಿಗೆ ಇಳಿಯಲಿಕ್ಕೆ ಒಂದು ಮನೆಯಂಗಳದಷ್ಟು ಸಮತಟ್ಟಾದ ಜಾಗವಿಲ್ಲದ ಸ್ಥಿತಿಯಲ್ಲಿ ಮೋದಿಯ ನಾಲ್ಕು ಬೋಯಿಂಗ್ ವಿಮಾನಗಳನ್ನು ಎಲ್ಲಿ ಪ್ರದರ್ಶನಕ್ಕಿಟ್ಟಿದ್ದರು?

ಇಂಥಾ ಚೀಪ್‌ರೇಟ್ ಪ್ರಚಾರಗಳನ್ನು ಪಕ್ಕಕ್ಕಿಟ್ಟು ಇನ್ನೂ ಕೆಲವು ವಾಸ್ತವಾಂಶಗಳ ಕಡೆ ಗಮನ ಹರಿಸೋಣ.

ಉತ್ತರಾಖಂಡ ರಾಜ್ಯದ ಸಂಕಷ್ಟಕ್ಕೆ ಹಲವಾರು ರಾಜ್ಯ ಸರ್ಕಾರಗಳು ನೆರವು ನೀಡಲು ಮುಂದಾಗಿವೆ. ಉತ್ತರಪ್ರದೇಶ ಸರ್ಕಾರ 25 ಕೋಟಿ ನೀಡಿದೆ. ಹರ್ಯಾಣ, ಮಹಾರಾಷ್ಟ್ರ, ದೆಹಲಿ ರಾಜ್ಯಗಳು ತಲಾ 10 ಕೋಟಿ, ಬಿಹಾರದಂಥ ಬರಪೀಡಿತ ರಾಜ್ಯ, ಕರ್ನಾಟಕ ರಾಜ್ಯಗಳು ಕೂಡ ತಲಾ 5 ಕೋಟಿ ನೆರವನ್ನು ಒದಗಿಸಿವೆ. ಜೊತೆಗೆ ವೈದ್ಯರ ತಂಡ, ಔಷಧ ಸಾಮಗ್ರಿ ಮುಂತಾದ ನೆರವನ್ನು ಒದಗಿಸಿವೆ.

ಆದರೆ ಈ ಮೇಲಿನ ಯಾವುದೇ ರಾಜ್ಯದ ಮುಖ್ಯಮಂತ್ರಿಯಾಗಲಿ ಅಥವ ಇತರೆ ರಾಜಕಾರಣಿಗಳಾಗಲಿ ಈ ಮಾನವೀಯ ನೆರವನ್ನು ರಾಜಕೀಯ ಪ್ರಚಾರಕ್ಕೆ ಬಳಸಿಕೊಳ್ಳಲಿಲ್ಲ. ಆದರೆ ಗುಜರಾತ್‌ನ ನರೇಂದ್ರ ಮೋದಿ ಈ ಎಲ್ಲರಿಗಿಂತ ಬಹಳ ಭಿನ್ನ. ಸಾವಿನ ಮನೆಯಲ್ಲೂ ಅತ್ಯಂತ ಕೊಳಕು ಮಟ್ಟದ ಪ್ರಚಾರ ಪಡೆಯುವ ತಂತ್ರಗಾರಿಕೆ ನರೇಂದ್ರ ಮೋದಿಯಂಥಾ ನರಹಂತಕರಿಂದ ಮಾತ್ರ ಸಾಧ್ಯ. ಇಷ್ಟೆಲ್ಲ ಗಿಮಿಕ್ಸ್ ಮಾಡುವ ನರೇಂದ್ರ ಮೋದಿ ಉತ್ತರಾಖಂಡ ರಾಜ್ಯಕ್ಕೆ ಘೋಷಿಸಿದ ನೆರವು ಎಷ್ಟು ಗೊತ್ತೆ? ಕೇವಲ ಎರಡು ಕೋಟಿ ರೂಪಾಯಿ!

ರಕ್ಷಣಾ ಕಾರ್ಯದಲ್ಲಿ ಪವಾಡ ಪ್ರದರ್ಶಿಸಿದ ಮೋದಿ ನಂತರ ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದತ್ತ ಗಮನ ಹರಿಸಿದ್ದಾರೆ. ಅಂದರೆ ದೇವಾಲಯಗಳ ನಿರ್ಮಾಣ ಕಾರ್ಯವನ್ನು ತನಗೆ ವಹಿಸಿದರೆ ಎಂಥದೇ ವಿಕೋಪಕ್ಕೂ ಜಗ್ಗದ ಮಂದಿರಗಳನ್ನು ನಿರ್ಮಾಣ ಮಾಡುವುದಾಗಿ ಈ ಪವಾಡಪುರುಷ ಘೋಷಿಸಿದ್ದಾನೆ. ಹೀಗೆ ಮೋದಿಯ ಕಾರ್ಯದಕ್ಷತೆಯನ್ನು ಅತಿಮಾನುಷ ಶಕ್ತಿಯೆಂಬಂತೆ ರಂಗುರಂಗಾಗಿ ಬಿಂಬಿಸುವ ವರದಿಗಳು ಸಾಲುಸಾಲಾಗಿ ಪ್ರಕಟವಾಗುತ್ತಲೇ ಇವೆ.

ಇಂಥಾ ಹಸಿಹಸಿ ಸುಳ್ಳುಗಳನ್ನು ಪ್ರಚುರಪಡಿಸಲಿಕ್ಕಾಗಿ ಮೋದಿ ವಿಶೇಷ ಕಾರ್ಯಪಡೆಯನ್ನೇ ಹೊಂದಿದ್ದಾನೆ. ಮಾಧ್ಯಮಗಳಲ್ಲಿ ಮೋದಿಯನ್ನು ಹೀರೋ ಆಗಿ ಬಿಂಬಿಸುವ ಹೊಣೆಗಾರಿಕೆಯನ್ನು 'ಆಪ್ಕೋ ವರ್ಲ್ಡ್‌ವೈಡ್' ಎಂಬ ಅಮೆರಿಕನ್ ಕಂಪನಿ ವಹಿಸಿಕೊಂಡಿದೆ ಎಂಬುದು ಈಗ ಹಳೆಯ ಸುದ್ದಿ.

2007ರಲ್ಲಿ ಮೋದಿ ನಡೆಸಿದ ಬಂಡವಾಳ ಹೂಡಿಕಾ ಸಮಾವೇಶಗಳ ಸಂದರ್ಭದಲ್ಲಿ ಇದೇ ಕಂಪನಿಯನ್ನು ಮೋದಿಯ ಸಾರ್ವಜನಿಕ ಸಂಪರ್ಕ ಏಜೆನ್ಸಿಯಾಗಿ ನೇಮಿಸಲಾಗಿತ್ತು. ಅದಕ್ಕಾಗಿ ಆ ಕಂಪನಿಗೆ ಪ್ರತಿ ತಿಂಗಳು ಪಾವತಿಸಲಾದ ಹಣ 25,000 ಡಾಲರ್‌ಗಳು.

ಇದೇ ಆಪ್ಕೋ ಕಂಪನಿ ಮಲೇಷಿಯಾ, ಇಸ್ರೇಲ್ ಸರ್ಕಾರಗಳ ಪರ ಪ್ರಚಾರ ಕೆಲಸ ಮಾಡಿ ಸೈ ಎನಿಸಿಕೊಂಡಿದೆ. ಕಜಕ್‌ಸ್ತಾನದ ಸರ್ವಾಧಿಕಾರಿಯ ಇಮೇಜು ಹೆಚ್ಚಿಸುವ ಕಾರ್ಯವನ್ನೂ ವಹಿಸಿಕೊಂಡಿದೆ. ಈ ಎಲ್ಲಕ್ಕಿಂತ ಮುಖ್ಯವಾಗಿ, "ತಂಬಾಕು ಕ್ಯಾನ್ಸರ್‌ಗೆ ಕಾರಣವಾಗುವುದಿಲ್ಲ" ಎಂದು ಪ್ರಚಾರ ಮಾಡುತ್ತಿರುವ ಕೆಲವು ತಂಬಾಕು ಕಂಪನಿಗಳ ಲಾಬಿಯಲ್ಲೂ ಈ ಕಂಪನಿ ಕೈ ಜೋಡಿಸಿದೆ.

ಈಗ ಹೇಳಿ. ಗೋಬೆಲ್ಸ್‌ನ ಪ್ರಚಾರ ತಂತ್ರ ಹೆಚ್ಚೋ? ಮೋದಿಯ ಪ್ರಚಾರ ತಂತ್ರ ಹೆಚ್ಚೋ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

## ಲೂಟಿಗಿಳಿದ ಕಾವಿಧಾರಿಗಳು

ಉತ್ತರಾಖಂಡ ರಾಜ್ಯ ಹಿಂದೂ ಧಾರ್ಮಿಕ ಪ್ರವಾಸಕ್ಕೆ ಹೆಸರುವಾಸಿ. ಪವಿತ್ರ ಯಾತ್ರಾಸ್ಥಳಗಳೆನಿಸಿಕೊಂಡಿರುವ ಕೇದಾರನಾಥ, ಬದರಿನಾಥ, ಹರಿದ್ವಾರ, ಹೃಷಿಕೇಶ ಮುಂತಾದ ಕ್ಷೇತ್ರಗಳು ಇದೇ ರಾಜ್ಯದಲ್ಲಿವೆ. ಇಂಥಾ ಉತ್ತರಾಖಂಡದಲ್ಲಿ ಎಂದೂ ಕಂಡರಿಯದ ಪ್ರಾಕೃತಿಕ ವಿಕೋಪ ಸಂಭವಿಸಿ ಅಪಾರ ಸಂಖ್ಯೆಯ ಸಾವುನೋವುಗಳು ಸಂಭವಿಸಿವೆ. ಹತ್ತಾರು ಊರುಗಳು ಇಡಿಯಾಗಿ ಕೊಚ್ಚಿಕೊಂಡು ಹೋಗಿವೆ. ಯಾತ್ರಾರ್ಥಿಗಳ ಕಷ್ಟಕೋಟಲೆಗಳನ್ನು ಕಂಡು ಇಡೀ ದೇಶಕ್ಕೆ ದೇಶವೇ ಮರುಗುತ್ತಿದೆ. ಸಂತ್ರಸ್ತರಿಗೆ ನೆರವಾಗಲು ಲಕ್ಷಾಂತರ ಜನರು ಸಹಾಯಹಸ್ತ ಚಾಚಿದ್ದಾರೆ.

ಆದರೆ ಈ ಸಂದರ್ಭದಲ್ಲಿ ಪವಿತ್ರ ಕ್ಷೇತ್ರ ಕೇದಾರನಾಥದಲ್ಲಿ ಠಿಕಾಣಿ ಹೂಡಿರುವ ಕೆಲವು ಸ್ಥಳೀಯ ಬೂದಿ ಬಾಬಾಗಳು, ಸಾಧುಸಂತರು ಏನು ಮಾಡುತ್ತಿದ್ದಾರೆ ಗೊತ್ತೆ? ಅಕ್ಷರಶಃ ಸಂತ್ರಸ್ತರ ಲೂಟಿಗಿಳಿದಿದ್ದಾರೆ. ಅಸಹಾಯಕ ಸ್ಥಿತಿಯಲ್ಲಿರುವ ಪರ ಊರಿನ ಯಾತ್ರಿಕರನ್ನು ಬೆದರಿಸಿ, ಹಿಂಸಿಸಿ ಅವರ ಬಳಿಯಿರುವ ಹಣ ಒಡವೆಗಳನ್ನು ದೋಚುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಈ ಹೀನಕೃತ್ಯ ಬೆಳಕಿಗೆ ಬಂದ ರೀತಿಯೂ ಕೂಡ ಕುತೂಹಲಕಾರಿಯಾಗಿದೆ.


ಕೆಲವು ಸ್ಥಳೀಯ ಸಾಧುಸಂತರು ಹೊಸ ಹೊಸ ಗರಿಗರಿ ನೋಟುಗಳನ್ನು ಚಲಾಯಿಸಿ ಮಜಾ ಉಡಾಯಿಸುತ್ತಿರುವುದು ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಯೊಬ್ಬರ ಗಮನಕ್ಕೆ ಬಂತು. ಈ ಗರಿಗರಿ ನೋಟುಗಳ ಮೂಲವೇನು ಎಂದು ಪತ್ತೆ ಮಾಡಲು ಹೊರಟ ಆ ಅಧಿಕಾರಿಗೆ ಶಾಕ್ ಕಾದಿತ್ತು. ಇಹದ ಸೆಳೆತಗಳನ್ನು ತ್ಯಜಿಸಿ, ರಾತ್ರಿ ಹಗಲು ಪರಲೋಕದ ಬಗ್ಗೆ, ಆಧ್ಯಾತ್ಮದ ಬಗ್ಗೆ ಧ್ಯಾನಪರವಶರಾಗಿರುವ ಸಾಧುಗಳು ರಾಶಿರಾಶಿ ಒಡವೆಗಳನ್ನು, ಕಂತೆಕಂತೆ ನೋಟುಗಳನ್ನು ಗಂಟು ಕಟ್ಟಿಕೊಂಡಿದ್ದರು. ಒಬ್ಬ ಲಕ್ಷಗಟ್ಟಲೆ ದುಡ್ಡನ್ನು ತನ್ನ ಡೋಲಾಕ್ ವಾದ್ಯದಲ್ಲಿ ಬಚ್ಚಿಟ್ಟಿದ್ದ. ಮತ್ತೊಬ್ಬ ದೇವರ ಕುಂಕುಮ ಪ್ರಸಾದಗಳ ಗಂಟಿನಲ್ಲಿ ಒಡವೆಗಳನ್ನು ಅಡಗಿಸಿದ್ದ. ಮತ್ತೊಬ್ಬ ಆಸಾಮಿ ಮೈಕೈ ತುಂಬಾ ನಾನಾ ಒಡವೆಗಳನ್ನು ಧರಿಸಿಕೊಂಡೇ ಅಡ್ಡಾಡುತ್ತಿದ್ದ. ಮಗದೊಬ್ಬ ಮಹಿಳೆಯರ ಬಳೆ ಮುಂತಾದ ಆಭರಣಗಳನ್ನು ಹಾಕಿಕೊಂಡಿದ್ದ.

ಈ ಹಿಟ್ಟುಗೇಡಿ ಬೂದಿ ಬಾಬಾಗಳಿಗೆ ಪೊಲೀಸ್ ಟ್ರೀಟ್‌ಮೆಂಟ್ ಕೊಟ್ಟ ನಂತರ ಒಬ್ಬೊಬ್ಬರಾಗಿ ಬಾಯಿ ಬಿಟ್ಟರು. ಈ ಎಲ್ಲಾ ಒಡವೆಗಳನ್ನು ಅಸಹಾಯಕ ಸ್ಥಿತಿಯಲ್ಲಿದ್ದ ಯಾತ್ರಿಕರಿಂದ ಈ ಸಾಧುಗಳು ದೋಚಿದ್ದರು. ಅದು ಎಷ್ಟು ಕ್ರೂರವಾಗಿ ಎಂದರೆ ಯಾತ್ರಿಕರೊಬ್ಬರ ಬೆರಳಿನಲ್ಲಿದ್ದ ಬೆಲೆಬಾಳುವ ರಿಂಗನ್ನು ಬಿಚ್ಚಲು ಸಾಧ್ಯವಾಗದೇ ಈ ರಾಕ್ಷಸರೂಪಿ ಬಾಬಾಗಳು ಅವರ ಬೆರಳನ್ನೇ ಕತ್ತರಿಸಿದ್ದರು. ಸತ್ತ ವ್ಯಕ್ತಿಯ ಅಂಗವನ್ನು ಕತ್ತರಿಸಿದ ಬಗ್ಗೆ ಸಾಕಷ್ಟು ವರದಿಗಳು ಬಂದಿವೆ. ಆದರೆ ಈ ಕಾವಿಧಾರಿಗಳು ಉಂಗುರಕ್ಕಾಗಿ ಜೀವಂತ ವ್ಯಕ್ತಿಯ ಬೆರಳನ್ನೇ ಕತ್ತರಿಸಿದ್ದರು.

ಇನ್ನು ಹೊಚ್ಚಹೊಸ ಗರಿಗರಿ ನೋಟುಗಳು ಬಂದಿದ್ದಾದರೂ ಎಲ್ಲಿಂದ? ಕೇದಾರನಾಥ ಪಟ್ಟಣದಲ್ಲಿ ಇದ್ದದ್ದು ಒಂದೇಒಂದು ಬ್ಯಾಂಕ್. ಅದು ಪ್ರವಾಹಕ್ಕೆ ತುತ್ತಾಗಿ ಕೊಚ್ಚಿಹೋಗಿತ್ತು. ಬ್ಯಾಂಕ್‌ಗೆ ನೀರು ನುಗ್ಗಿ ಅನಾಹುತ ಸಂಭವಿಸಿದ ಸುದ್ದಿಯಿಂದ ಪುಳಕಿತರಾದ ಬಾಬಾಗಳ ಗುಂಪೊಂದು ತಕ್ಷಣವೇ ಬ್ಯಾಂಕ್‌ಗೆ ನುಗ್ಗಿ ಸಿಕ್ಕಿದ್ದೆಲ್ಲವನ್ನೂ ದೋಚಿತ್ತು. ಹೀಗಾಗಿ ಒಂದೇ ಅನುಕ್ರಮ ಸಂಖ್ಯೆ ಹೊಂದಿರುವ ಗರಿಗರಿ ನೋಟುಗಳು ಬಾಬಾಗಳ ಕೈಲಿ ಓಡಾಡಿದ್ದವು.

ರಕ್ಷಣಾಪಡೆಯ ಯೋಧರು ಬರೋಬ್ಬರಿ ಒಂದು ಕೋಟಿ ಇಪ್ಪತ್ತೈದು ಲಕ್ಷ ಹಣವನ್ನು ಹಾಗೂ ಒಡವೆಗಳನ್ನು ಈ ಧರ್ಮೋದ್ಧಾರಕರಿಂದ ವಶಪಡಿಸಿಕೊಂಡು ಜಿಲ್ಲಾ ಮ್ಯಾಜಿಸ್ಟ್ರೇಟರ ವಶಕ್ಕೆ ಒಪ್ಪಿಸಿದ್ದಾರೆ. ಆ ಧಾರ್ಮಿಕ ಪುರುಷರು ಸದ್ಯ ಪೊಲೀಸರ ವಶದಲ್ಲಿದ್ದಾರೆ. 'ಹಿಂದೂ ಸಂತರ ಮೇಲೆ ಪೊಲೀಸ್ ದೌರ್ಜನ್ಯ' ಎಂದು ಸಂಘ ಪರಿವಾರಿಗಳು ಬೊಬ್ಬೆ ಹಾಕಿದ ಬಗ್ಗೆ ಇನ್ನೂ ವರದಿಯಾಗಿಲ್ಲ!


...ಗೈಡ್ ಪ್ರಕಾಶನದಿಂದ....
ಜರ್ನಲಿಸ್ಟ್ಸ ಡೈರಿ
...ರ್ನಾಟಕದ ಸಮೂಹ ಮಾಧ್ಯಮಗಳ ಹಾಗೂ ...ತ್ರಕರ್ತರ ಸಮಗ್ರ ಮಾಹಿತಿ ಕೋಶ
...ನ್ನಡದಲ್ಲಿ ಈ ಬಗೆಯ ಪ್ರಯತ್ನ ಇದೇ ...ದಲನೆಯದಾಗಿದೆ. ಮಾಧ್ಯಮ ಮಿತ್ರರು ತಮ್ಮ ...ಗೂ ಪತ್ರಿಕೆ/ಟಿವಿ ಚಾನಲ್‌ಗಳ ವಿವರಗಳನ್ನು ...ಳುಹಿಸಬಹುದು.
...ಮೇಲ್: guidekannada@gmail.com
...AX: 080-26604536
ಸಂಗ್ರಹಯೋಗ್ಯ ಕೈಪಿಡಿ




ಶೀಘ್ರದಲ್ಲೇ ಬಿಡುಗಡೆ
ಹೆಚ್ಚಿನ ಮಾಹಿತಿ ಹಾಗೂ ಪ್ರತಿಗಳಿಗಾಗಿ ಸಂಪರ್ಕಿಸಿ
ವ್ಯವಸ್ಥಾಪಕರು
ಗೈಡ್ ಪ್ರಕಾಶನ
ನಂ. 9, ಇ.ಎ.ಟಿ. ರಸ್ತೆ
ಬಸವನಗುಡಿ, ಬೆಂಗಳೂರು 4



## ಪುಸ್ತಕ ವಿಮರ್ಶೆ ಬಗ್ಗೆ...

'ಲಂಕೇಶ್'ನಲ್ಲಿ ಪುಸ್ತಕ ವಿಮರ್ಶೆ ವಿಭಾಗಕ್ಕೆ ಲೇಖಕರು/ಪ್ರಕಾಶಕರು ತಮ್ಮ ಪುಸ್ತಕಗಳನ್ನು ಕಳುಹಿಸುವಾಗ ದಯಮಾಡಿ ಪುಸ್ತಕದ ಎರಡು ಪ್ರತಿಗಳನ್ನು ಕಳುಹಿಸಲು ಕೋರಿದೆ.



ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬೇಕಾದ ವಿಳಾಸ
'ಲಂಕೇಶ್', ಪುಸ್ತಕ ವಿಮರ್ಶೆ ವಿಭಾಗ, ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-4



# ಸಿರಿಗೆರೆ ಮಠದ ಪಾಳೇಗಾರಿಕೆ

**ಜೂನ್ 19, 2013.** ದಾವಣಗೆರೆ ವಿಶ್ವವಿದ್ಯಾಲಯದ ನೂತನ ಕಟ್ಟಡಗಳ ಉದ್ಘಾಟನೆಯ ಸರ್ಕಾರಿ ಕಾರ್ಯಕ್ರಮ. ಉದ್ಘಾಟಿಸಲು ಉನ್ನತ ಶಿಕ್ಷಣ ಸಚಿವ ಆರ್.ವಿ ದೇಶಪಾಂಡೆ ವೇದಿಕೆ ಮೇಲೆ ಉಪಸ್ಥಿತರಿದ್ದರು. ಪ್ರೋಟೋಕಾಲ್‌ನಂತೆ ದಾವಣಗೆರೆ ಜಿಲ್ಲೆಯ ಎಲ್ಲಾ ಸಚಿವರು, ಶಾಸಕರೂ ವೇದಿಕೆ ಮೇಲಿದ್ದರು. ಜೊತೆಗೆ ಸಿರಿಗೆರೆಯ ಸಾಧುಸದ್ಧರ್ಮ ಪೀಠದ ಜಗದ್ಗುರುಗಳಾದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳೂ ಅಲ್ಲಿದ್ದರು. ಆದರೆ ಮಾಯಕೊಂಡದ ಎಂಎಲ್‌ಎ ಶಿವಮೂರ್ತಿ ನಾಯ್ಕ ಮಾತ್ರ ಇನ್ನೂ ಬಂದಿರಲಿಲ್ಲ. ಯಥಾಪ್ರಕಾರ ವೇದಿಕೆ ಏರುತ್ತಿದ್ದ ಪ್ರತಿಯೊಬ್ಬರೂ ಸ್ವಾಮಿಗಳ ಆಶೀರ್ವಾದಕ್ಕಾಗಿ ಅವರ ಪಾದಕ್ಕೆರಗುತ್ತಿದ್ದರೆ ಸಿರಿಗೆರೆ ಮಠಾಧಿಪತಿಗಳೂ ನಗುಮೊಗದಲ್ಲೇ ಅವರಿಗೆಲ್ಲ ಆಶೀರ್ವದಿಸುತ್ತಿದ್ದರು. ಕೊಂಚ ತಡವಾಗಿ ಬಂದ ಮಾಯಕೊಂಡದ ಶಾಸಕ ಶಿವಮೂರ್ತಿ ನಾಯ್ಕ ವೇದಿಕೆ ಏರುತ್ತಿದ್ದಂತೆಯೇ ಸಿರಿಗೆರೆ ಸ್ವಾಮಿಗಳ ಮುಖಾರವಿಂದದಲ್ಲಿ ಸಿಟ್ಟು-ಸೇಡಿನ ಚಡಪಡಿಕೆಯ ಗೆರೆಗಳು ಮೂಡಲು ಆರಂಭಿಸಿದವು. ಎಲ್ಲರಂತೆ ಶಿವಮೂರ್ತಿ ನಾಯ್ಕನೂ ಸ್ವಾಮಿಗಳ ಕಾಲಿಗೆ ಎರಗಿದಾಗ ಆಶೀರ್ವದಿಸುವ ಬದಲು ಮೌನವಾಗಿ ಕುಳಿತರು.


ಅಲ್ಲದೆ 'ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟು ಹ್ಯಾಗೆ ತಂದೆ ನೀನು?' ಎಂದು ಸ್ವಾಮಿಗಳು ನಾಯ್ಕರನ್ನು ಖಾರವಾಗಿ ಪ್ರಶ್ನಿಸಿದರು. ಸ್ವಾಮಿಗಳ ಹಠಾತ್ ಪ್ರಶ್ನೆಗೆ ಕೊಂಚ ಬಾಯಿ ಕೊಡಲು ಮುಂದಾದ ಶಾಸಕ ನಾಯ್ಕ 'ನನಗೆ ಹೈಕಮಾಂಡ್ ಟಿಕೆಟು ಕೊಟ್ಟಿತು' ಎನ್ನುತ್ತಿದ್ದಂತೆಯೇ ಮತ್ತಷ್ಟು ಕುದ್ದುಹೋದ ಸಿರಿಗೆರೆ ಸ್ವಾಮಿಗಳು 'ಇಲ್ಲಿ ನಾನೇ ಹೈಕಮಾಂಡು' ಅಂತ ವೇದಿಕೆಯಲ್ಲೇ ಗುಡುಗಿಬಿಟ್ಟರು. ವೇದಿಕೆಯ ಮೇಲಿದ್ದವರೆಲ್ಲ ಈ ಸಂಭಾಷಣೆ ಕೇಳಿ ಸ್ತಂಭೀಭೂತರಂತಾಗಿದ್ದರೆ, ಜಗದ್ಗುರುಗಳ ಮೇಲ್ವರ್ಗದ ಮನಸ್ಸು ಮತ್ತು ಪಾಳೇಗಾರಿಕೆಯ ವರ್ತನೆಯೆದುರು ಶಿವಮೂರ್ತಿ ನಾಯ್ಕ ಅಸ್ಪೃಶ್ಯನ ಅವಮಾನ ನೆನಪಾದವನಂತೆ ಕುಬ್ಜರಾಗಿ ನಿಂತಿದ್ದರು.

ಈ ಘಟನೆ ಸಿರಿಗೆರೆಯ ತರಳುಬಾಳು ಮಠ ಮತ್ತು ಮಠಾಧೀಶರು ಇತ್ತೀಚಿನ ದಿನಗಳಲ್ಲಿ ಜನಪರ ಕಾಳಜಿಯಿಂದ ವಿಮುಖರಾಗಿ ಪಾಳೆಗಾರಿಕೆಯ ಗತ್ತಿನಲ್ಲಿ ಕಳೆದುಹೋಗುತ್ತಿರುವುದನ್ನು ಬಿಚ್ಚಿಡುತ್ತವೆ. ಭಾರತದ ಡೆಮಾಕ್ರಸಿಯನ್ನೆ ಮರೆತವರಂತೆಯೋ ಅಥವಾ ಸ್ವಯಂಪ್ರೇರಣೆಯಿಂದ ತಿರಸ್ಕರಿಸಿದಂತೆಯೋ ಸಿರಿಗೆರೆ ಮಠಾಧೀಶರು ಈ ಪರಿ ವರ್ತಿಸುತ್ತಿರುವುದು ಇದೇ ಮೊದಲೇನಲ್ಲ. ಅಪಾರ ಭಕ್ತರ ಪರಂಪರೆಯನ್ನು ಹೊಂದಿರುವುದರಿಂದ ಮತ್ತು ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚಿರುವುದರಿಂದ ಚುನಾವಣಾ ರಾಜಕಾರಣದಲ್ಲಿ ತಾವು ಬೆಂಬಲಿಸಿದ ಅಭ್ಯರ್ಥಿಗಳು ಜಯಸಾಧಿಸುತ್ತಾರೆ ಎಂಬ ಭ್ರಮೆಗೆ ಬಿದ್ದಿರುವ ಇವರಲ್ಲಿ ಗೆದ್ದವರು ತಮ್ಮ ಆಣತಿಯಂತೇ ನಡೆಯಬೇಕು ಎನ್ನುವ ಜಾಯಮಾನವೂ ಶುರುವಾಗಿದೆ. ಹಾಗೊಂದು ವೇಳೆ ತಾವು ಸೋಲಿಸಿಯೇ ತೀರಬೇಕೆಂದು ತೀರ್ಮಾನಿಸಿದವನೇನಾದರೂ ತಮ್ಮ ಹುಕುಮಿನ ಹೊರತಾಗಿಯೂ ಗೆದ್ದು ಬಂದರಂತೂ ಖುದ್ದು ಸಿರಿಗೆರೆಯ ಜಗದ್ಗುರುಗಳೇ ಸೋಲನುಭವಿಸಿದಷ್ಟು ಸ್ವಯಂ ಪರಿತಾಪದಿಂದ ಸೇಡಿಗಾಗಿ ತವಕಿಸುವಷ್ಟು 'ಸಾಮಾನ್ಯ'ರಂತಾಗುವುದು ಇಲ್ಲಿ ಸಾಮಾನ್ಯವಾಗುತ್ತಿದೆ. ಇದಕ್ಕೆ ಮೇಲಿನ ಮೊದಲನೇ ಪ್ರಕರಣವೇ ಸಾಕ್ಷಿ.

ಸಿರಿಗೆರೆಯ 'ಜಗದ್ಗುರು' ಡಾ.ಶಿವಮೂರ್ತಿ ಶಿವಾಚಾರ್ಯರಿಗೆ ಮಾಯಕೊಂಡದ ಹಾಲಿ ಶಾಸಕ ಶಿವಮೂರ್ತಿ ನಾಯ್ಕರ ಮೇಲಿರುವ ಅಂತಹ ಸಿಟ್ಟೇ ಅವತ್ತು ಆ ರೀತಿ ವರ್ತಿಸುವಂತೆ ಮಾಡಿತ್ತು. ಅಸಲಿಗೆ ಈ ಸಿಟ್ಟು ನಿನ್ನೆಮೊನ್ನೆಯದೇನಲ್ಲ, ದಿವಂಗತ ಬಂಗಾರಪ್ಪ 1990ರಲ್ಲಿ ಮುಖ್ಯಮಂತ್ರಿಯಾಗಿದ್ದಾಗಿನದು. ಆಗ ಭರಮಸಾಗರದಿಂದ ಶಾಸಕರಾಗಿದ್ದ ಈ ಶಿವಮೂರ್ತಿ ನಾಯ್ಕ ಹೆಂಡದ ಮಂತ್ರಿಯಾಗಿದ್ದರು. ಅದ್ಯಾವುದೋ ಕಾರಣಕ್ಕೆ 'ಬಂ' ಇವರನ್ನು ತನ್ನ ಮಂತ್ರಿಮಂಡಳದಿಂದ ಹೊರದೂಡಿದ್ದರು. ಹಾಗಾಗಿ ಶಿವಮೂರ್ತಿ ನಾಯ್ಕರಿಗೆ 'ಬಂ' ಮೇಲೆ ಅಸಮಾಧಾನವಿತ್ತು. ಅದೇ ಸಮಯಕ್ಕೆ ಸರಿಯಾಗಿ ಮುಖ್ಯಮಂತ್ರಿ ಬಂಗಾರಪ್ಪ ಸಿರಿಗೆರೆಯ ಕಾರ್ಯಕ್ರಮದಲ್ಲಿ ಭಾಗವಹಿಸುವುದಿತ್ತು. ಆಗ ಒಂದಷ್ಟು ಮಂದಿ ಸಮಾರಂಭದಲ್ಲಿ ಗಲಭೆ ಎಬ್ಬಿಸಿ, ಬಂಗಾರಪ್ಪನವರ ಗೂಟದ ಕಾರಿಗೆ ಬೆಂಕಿ ಹಚ್ಚಿದ್ದರು. ಅವರೆಲ್ಲ ಮಾಜಿಮಂತ್ರಿ ನಾಯ್ಕರ ಚೇಲಾಗಳು ಮತ್ತು ಅದಕ್ಕೆಲ್ಲ ಆತನೇ ಕಾರಣವೆನ್ನುವ ವರ್ತಮಾನ ಸಿರಿಗೆರೆ ಶಿವಮೂರ್ತಿಗಳ ಕಿವಿ ತಲುಪಿತ್ತು. ತಮ್ಮ ಮಠದ ಕಾರ್ಯಕ್ರಮವನ್ನು ಕುಲಗೆಡಿಸಿದನೆನ್ನುವ ಕಾರಣಕ್ಕೆ ಸಿರಿಗೆರೆ ಸ್ವಾಮಿಗಳು ಶಿವಮೂರ್ತಿನಾಯ್ಕರ ಮೇಲೆ ಹಗೆ ಸಾಧಿಸಲು ಶುರುಮಾಡಿದ್ದರು. ಅದರ ಪರಿಣಾಮವಾಗಿಯೇ ಭರಮಸಾಗರ ಕ್ಷೇತ್ರದಿಂದ ಶಿವಮೂರ್ತಿನಾಯ್ಕರಿಗೆ 1994ರಲ್ಲಿ ಕಾಂಗ್ರೆಸ್ ಟಿಕೆಟು ಕೈತಪ್ಪಿಹೋಗಿತ್ತು. ಪಕ್ಷೇತರನಾಗಿ ನಿಂತರೂ ಸಿರಿಗೆರೆ ಮಠದ ಫರ್ಮಾನಿನಂತೆ ಆತ ಸೋತು ರಾಜಕಾರಣದಿಂದಲೇ ಕಣ್ಮರೆಯಾಗುವ ಹಂತಕ್ಕೆ ತಲುಪಿದ್ದರು. ಆದರೆ 2013ರಲ್ಲಿ ದೆಹಲಿ ಮಟ್ಟದತನಕ ರಾಜಕೀಯ ಲಾಬಿ ನಡೆಸಿದ ಶಿವಮೂರ್ತಿನಾಯ್ಕ ಕೊನೆಗೂ ಮಾಯಕೊಂಡದಿಂದ 'ಕೈ' ಟಿಕೆಟ್ ಗಿಟ್ಟಿಸಿಕೊಂಡರು.


ಅದ್ಯಾವಾಗ ಶಿವಮೂರ್ತಿನಾಯ್ಕ ಮಾಯಕೊಂಡ ವಿಧಾನಸಭಾಕ್ಷೇತ್ರದಲ್ಲಿ ಪ್ರತ್ಯಕ್ಷರಾದನೊ ಸಿರಿಗೆರೆ ಮಠದ ಜಗದ್ಗುರುವಿನ ಸೇಡು ಮತ್ತೆ ಜಾಗೃತವಾಗಿತ್ತು. ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರವಹಿಸುವ ಸಾಧು ವೀರಶೈವ ಮತದಾರರಿಗೆ ಶಿವಮೂರ್ತಿನಾಯ್ಕ ಗೆಲ್ಲಬಾರದೆಂಬ ಫರ್ಮಾನು ಸಿರಿಗೆರೆ ಮಠದಿಂದ ತಲುಪಿತ್ತು. ಇದೇ ಕಾರಣಕ್ಕೆ ಕಾಂಗ್ರೆಸ್‌ನಿಂದ ಟಿಕೆಟು ವಂಚಿತವಾಗಿ ಪಕ್ಷೇತರನಾಗಿ ಸ್ಪರ್ಧಿಸಿದ್ದ ಡಾ.ರಾಮಪ್ಪನವರೇ ಮಠದ ಅಭ್ಯರ್ಥಿ ಎನ್ನುವಷ್ಟರಮಟ್ಟಿಗೆ ಪ್ರಚಾರವನ್ನೂ ನೀಡಲಾಗಿತ್ತು. ಆದರೂ ಶಿವಮೂರ್ತಿನಾಯ್ಕರೇ ಗೆದ್ದುಬಂದರು. ಮಠದ ಫರ್ಮಾನಿಗೆ ಮಾಯಕೊಂಡದಲ್ಲಿ ತುಕ್ಕುಹಿಡಿದಿತ್ತು. ಇದು ಶಿವಮೂರ್ತಿಸ್ವಾಮಿಯವರಲ್ಲಿ ಶಿವಮೂರ್ತಿನಾಯ್ಕನೆಡೆಗಿದ್ದ ಸಿಟ್ಟು ಮತ್ತಷ್ಟೂ ಹೆಚ್ಚಾಗುವಂತೆ ಮಾಡಿತು. ಅದನ್ನು ಕಾರಿಕೊಳ್ಳಲು ಸಮಯಕ್ಕಾಗಿ ಕಾದಿದ್ದರು. ಮೊನ್ನೆಯ ವೇದಿಕೆ ಅದಕ್ಕೆ ಅವಕಾಶ ಮಾಡಿಕೊಟ್ಟಿತು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾರಿಗೆ ಯಾರೂ ಪಾಳೇಗಾರರಾಗಲು ಸಾಧ್ಯವಾಗಿಲ್ಲ. ಮಠ-ಪೀಠಗಳೂ ಜನಪರವಾಗಿರಬೇಕೇ ಹೊರತು ಪಾಳೆಗಾರಿಕೆಯ ಪರಾಕ್ರಮತೋರುವುದು ಸಂವಿಧಾನಬಾಹಿರವಾಗುತ್ತದೆ. ಇಂತಿಷ್ಟು ತಿಳುವಳಿಕೆಯನ್ನೂ ಸಿರಿಗೆರೆ ಸ್ವಾಮಿಗಳು ಮರೆತುಹೋದದ್ದು ನಿಜಕ್ಕೂ ವಿಪರ್ಯಾಸ! ದೊಡ್ಡ ಜಾತಿ ಬೆಂಬಲವಿದೆ, ಮಠಕ್ಕೆ ವರ್ಚಸ್ಸಿದೆ-ಹೆಸರಿದೆ-ಪರಂಪರೆಯಿದೆ ಎಂಬ ಒಂದೇ ಕಾರಣಕ್ಕೆ ಇಂಥವರನ್ನೇ ಆಯ್ಕೆ ಮಾಡಬೇಕೆಂದು ಮತದಾರನಿಗೆ ಫರ್ಮಾನು ಹೊರಡಿಸುವ ಯಜಮಾನಿಕೆಯ ಸಂಸ್ಕೃತಿಯೇ ಡೆಮಾಕ್ರಸಿಯನ್ನು ಅಣಕಿಸುವಂತದ್ದು.

ಹಾಗೆ ನೋಡಿದರೆ ಸಿರಿಗೆರೆ ಸಾಧುಸದ್ಧರ್ಮ ತರಳಬಾಳು ಮಠದ ಪರಂಪರೆಯೇ ಇತ್ತೀಚೆಗೆ ಮಾಯವಾಗುತ್ತಿದೆ. ಡಾ.ಶಿವಮೂರ್ತಿ ಶಿವಾಚಾರ್ಯರು ಸಿರಿಗೆರೆ ಮಠದ ಪೀಠಾಲಂಕರಿಸಿದ ನಂತರವೇ ಇಂತಹ ಬೆಳವಣಿಗೆಗಳು ನಡೆಯುತ್ತಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಹಿಂದೆಯಿದ್ದ ಲಿಂಗೈಕ್ಯ ಶಿವಕುಮಾರಸ್ವಾಮಿಗಳ ಸಮಾಜಮುಖಿ ಸಂವೇದನೆಗಳಿಗೆ ಅರ್ಥವಿತ್ತು. ಅವುಗಳಿಗೆ ಜಾತ್ಯತೀತ ನಿಲುವಿತ್ತು. ಹಾಗಾಗಿಯೇ ದುಗ್ಗಪ್ಪನೆಂಬ ಹರಿಜನ ಮೇಷ್ಟ್ರನ್ನು ಕರೆತಂದು ಭರಮಸಾಗರ ಕ್ಷೇತ್ರದಿಂದ ಶಾಸಕರನ್ನಾಗಿ ಮಾಡಿದ್ದರು. ಮಠವನ್ನು ಜಾತಿಯ ಬಂಧನದಿಂದ ಮುಕ್ತಗೊಳಿಸಿ ದಲಿತರು, ಹಿಂದುಳಿದವರು, ಲಿಂಗಾಯತರು ಎಂಬ ಯಾವ ಭೇದವೂ ಇಲ್ಲದ ಸಾಮೂಹಿಕ



ಭೋಜನಶಾಲೆಯನ್ನು ಶುರುಮಾಡಿದ್ದರು. ಆದರೆ ದುರದೃಷ್ಟವಶಾತ್ ಇಂತಹ ಆಶ್ರಮದ ಆದರ್ಶ ಪರಂಪರೆಯ ನೆಲೆ ಈಗ ಅಲುಗಾಡಲು ಆರಂಭಿಸಿದೆ. ಇಷ್ಟು ದಿನ ಮಠ-ಸ್ವಾಮಿಗಳಿಗೆ ರಾಜಕೀಯ ಬೇಕೆ, ಬೇಡವೇ ಎನ್ನುವ ಜಿಜ್ಞಾಸೆ ಮಾತ್ರ ಇತ್ತು. ಆದರೀಗ ಸನ್ಯಾಸಿ ಎನಿಸಿದವನಿಗೆ ಪಾಳೆಗಾರಿಕೆಯ ಗತ್ತು ಬೇಕೆ ಎಂಬ ಹೊಸದೊಂದು ತರ್ಕ-ತಕರಾರುಗಳಿಗೆ 'ಐತಿಹ್ಯ' ಸಿರಿಗೆರೆ ತರಳಬಾಳು ಮಠವೇ ಆರಂಭಿಕ ಆಹಾರವಾಗುತ್ತಿದೆ!

● ವರದಿಗಾರ



## ಸುವರ್ಣ ಟಿವಿ ಹಿಟ್‌ಲಿಸ್ಟ್‌ನಲ್ಲಿ 30 ಮಂದಿ!

ಅನಂತ್ ಚಿನಿವಾರ್ ಜನಶ್ರೀ ತ್ಯಜಿಸಿ ಸುವರ್ಣ ಚಾನಲ್ ಸೇರಲಿದ್ದಾರೆಂದು 'ಲಂಕೇಶ್' ಮೂರು ವಾರಗಳ ಹಿಂದೆ ಹೇಳಿತ್ತು. ಅಂತೆಯೇ ಚಿನಿವಾರ್ ಈಗ ಸುವರ್ಣ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಈಗ ಕೆಲವು ಮೇಜರ್ ಸರ್ಜರಿ ನಡೆಸಲು ರೆಡಿಯಾಗುತ್ತಿರುವ ಸುದ್ದಿ ಕೇಳಿಬರುತ್ತಿದೆ.

ಸುವರ್ಣ ನ್ಯೂಸ್ 24X7
ನೇರ. ದಿಟ್ಟ. ನಿರಂತರ.

ಕನಿಷ್ಠ ಮೂವತ್ತು ಮಂದಿಯನ್ನು ಚಾನಲ್‌ನಿಂದ ಹೊರಕಳಿಸುವ ನಿರ್ಧಾರವೂ ಅಂತಹದರಲ್ಲೊಂದಾಗಿದೆ.

ಈ ಮೂವತ್ತರ ಪಟ್ಟಿಯಲ್ಲಿ ಯಾರ್‍ಯಾರಿರುತ್ತಾರೆಂಬುದು ಹಾಗೂ ಯಾವ ಮಾನದಂಡ, ಅನರ್ಹತೆಯ ಕಾರಣಕ್ಕೆ ಹಿಟ್‌ಲಿಸ್ಟ್ ಸೇರಲಿದ್ದಾರೆಂಬುದು ಆ ಚಾನಲ್‌ನ ಮ್ಯಾನೇಜ್‌ಮೆಂಟಿಗೇ ಸೇರಬೇಕಾದ ವಿಚಾರ. ಈಗಾಗಲೇ ಸುವರ್ಣದಿಂದ ಇಬ್ಬರಿಗೆ ಗೇಟ್‌ಪಾಸ್ ಸಿಕ್ಕಿದೆ. ಒಂದು ಮೂಲದ ಪ್ರಕಾರ ಸುವರ್ಣದ ಸಿಬ್ಬಂದಿಯ ಪೈಕಿ ಯಾರು ಅತಿಯಾದ ಕೋಮುವಾದಿ ಧೋರಣೆ ತೋರುತ್ತಾ ಚಾನಲ್‌ನ ವ್ಯಕ್ತಿತ್ವ ಹಾಳು ಮಾಡಿದ್ದರೋ ಅಂತವರು ಈಗ ಪಾನಕ ಕುಡಿಯಬೇಕಾಗಿ ಬಂದಿದೆ ಎನ್ನುತ್ತಿದ್ದಾರೆ.


ಮೀಡಿಯಾ ಮಸಾಲ

## ಜನಶ್ರೀ ಹಸ್ತಾಂತರ!

ಜನಶ್ರೀ ಚಾನಲ್‌ನ ಉಸ್ತುವಾರಿಯು ಎರಡು ರೀತಿಯಲ್ಲಿ ಬದಲಾಗುತ್ತಿದೆ.

ಮೊದಲನೆಯದು ಆರಾಧ್ಯ ಎಂಬುವರು ಜನಶ್ರೀಯನ್ನು 5 ವರ್ಷ ಕಾಲ ಲೀಸ್‌ಗೆ ಪಡೆದಿರುವುದು.

ಇನ್ನೊಂದು ಶಶಿಧರ್ ಭಟ್ ಜನಶ್ರೀಯ ಚೀಫ್ ಆಗಿ ಬರುತ್ತಿರುವುದು.



ಕೊಂಚ ನಷ್ಟದಲ್ಲೇ ನಡೆಯುತ್ತಿತ್ತು ಎನ್ನಲಾಗಿರುವ ಜನಶ್ರೀ ಚಾನಲ್‌ಗೆ ತನ್ನ ಮಾಲೀಕರ ಕಷ್ಟಗಳೇ ಬೃಹತ್ ಸಮಸ್ಯೆಗಳಾಗಿ ಕಾಡುತ್ತಿತ್ತು. ರೆಡ್ಡಿ-ರಾಮುಲು ಬಿಕ್ಕಟ್ಟುಗಳು ಜನಶ್ರೀ ಮೇಲೆ ನಾನಾರೀತಿಯ ಪ್ರಭಾವ ಬೀರಿದ್ದವು. ಹಣಕಾಸಿನ ಬಿಕ್ಕಟ್ಟು ಅದರಲ್ಲೊಂದು. ಹಾಗಾಗಿ ಜನಶ್ರೀ ಹಸ್ತಾಂತರಗೊಳ್ಳುತ್ತಿದೆ.

ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಹಾಗೂ ಹೂವಿನ ರಫ್ತು ವ್ಯವಹಾರ ನಡೆಸುತ್ತಿರುವ ಆರಾಧ್ಯ ಎಂಬುವರು ಜನಶ್ರೀಯನ್ನು 5 ವರ್ಷ ಕಾಲದ ಲೀಸ್‌ಗೆ ಪಡೆಯುತ್ತಿದ್ದಾರೆ. ಜನಶ್ರೀಯ ಹಿಂದಿನ 17 ಕೋಟಿಯ ಹಳೆಯ ಸಾಲ ತೀರಿಸಬೇಕು ಹಾಗೂ ಮುಂದಿನ 5 ವರ್ಷಗಳ ಲಾಭ-ನಷ್ಟ ಆರಾಧ್ಯರೆ ಹೊಣೆ ಎಂಬ ಕಂಡೀಷನ್ ಆಧಾರದಲ್ಲಿ ಈ ಹಸ್ತಾಂತರ ನಡೆಯುತ್ತಿದೆ.

ಆರಾಧ್ಯರಿಗೆ ಮೀಡಿಯಾ ಸಂಸ್ಥೆಯ ನಿರ್ವಹಣೆಯ ಅನುಭವ ಹೊಸದು ಎನ್ನಲಾಗಿದೆ.


ಜನಶ್ರೀ NEWS

ಆದರೆ ಅನುಭವಿ ಶಶಿಧರ್ ಭಟ್ ಈಗ ಜನಶ್ರೀಯ ಮುಖ್ಯಸ್ಥರಾ[illegible] ಬರುತ್ತಿದ್ದಾರೆ.

ಈ ಹಿಂದೆ ಕಾವೇರಿ, ಸುವರ್ಣ ಚಾನಲ್‌ಗಳನ್ನು ನಿರ್ವಹಿಸಿ ಗೊತ್ತಿರು[illegible] ಶಶಿಧರ್ ಭಟ್ ಜನಶ್ರೀಗೆ ಯಾವ ರೀತಿಯ Face lift ನೀಡುತ್ತಾರೋ ಕಾದು ನೋಡಬೇಕು.

ಜನಶ್ರೀಯ ಲಾಭನಷ್ಟದ ವಿಚಾರ ಬೇರೆಯ ಮಾತು. ಆದರೆ ಚಾನಲ್ ಪ್ರೋಗ್ರಾಂಗಳು ಚೆನ್ನಾಗಿಯೇ ಇದ್ದವು. ಇನ್ನು ಮುಂದೆಯೂ ಚೆನ್ನಾಗಿರುತ್[illegible] ಎಂದು ಆಶಿಸೋಣ.

# ಯಡ್ಡಿಗೆ ಗತಿಯಿಲ್ಲ; ಬಿಜೆಪಿಗೆ ದಿಕ್ಕಿಲ್ಲ




ಅಟ್ಟ ಮೇಲೆ ಒಲೆ ಉರಿಯಿತಂತೆ ಕೆಟ್ಟ ಮೇಲೆ ಬುದ್ಧಿ ಬಂತಂತೆ!

ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ ಸಮೇತ ಬೊಮ್ಮಾಯಿ, ಕತ್ತಿ, ಶೆಟ್ಟರ್ ಮುಂತಾದವರನ್ನೆಲ್ಲ ಡಾಲರ್ಸ್ ಕಾಲನಿಯ ಯಡ್ಡಿಯ ಮನೆಗೊಯ್ದು ದಮ್ಮಯ್ಯಗುಡ್ಡೆ ಹಾಕುತ್ತಿರುವ ಚಂದ್ರೇಗೌಡರದ್ದು ಯಥಾವತ್ತು ಮತ್ತೆ ಮುತ್ತೈದೆಯ ವರಸೆ.

ಹಿಂದೆ ಇಂದಿರಾಗಾಂಧಿಗೆ ತಮ್ಮ ಸಂಸದ ಪದವಿಯನ್ನೇ ತ್ಯಾಗ ಮಾಡಿದ ಚಂದ್ರೇಗೌಡರಿಗೆ ಈಗ ನರೇಂದ್ರ ಮೋದಿಗಾಗಿ ಯಡ್ಡಿ ಮನೆ ಬಾಗಿಲು ಕಾದು ಅಳಿದುಳಿದ ಮಾನವನ್ನೂ ತ್ಯಾಗ ಮಾಡಿದ ಮಹಾತ್ಯಾಗಿಯಾಗುವ ಅವಕಾಶವೂ ಒದಗಿಬಂದಿದೆ.

ಏಕೆಂದರೆ ಮೇಲಿರುವವರನ್ನು 'ಪ್ಲೀಸ್' ಮಾಡಿದರೆ ತಾನು ಬೆಳೆಯಬಹುದೆಂಬ ಲೆಕ್ಕಾಚಾರ ಚಂದ್ರೇಗೌಡರಿಗೆ ಅಭ್ಯಾಸ ಬಲದಿಂದಲೇ ರಕ್ತಗತವಾಗಿದೆ. ಅಕಸ್ಮಾತ್ ಎನ್‌ಡಿಎ ಏನಾದರೂ ಕೇಂದ್ರಾಧಿಕಾರ ಹಿಡಿಯಿತೆಂದರೆ, ತನ್ನ ಜೀವಿತದ ಕಟ್ಟಕಡೆಯಲ್ಲಾದರೂ ಕೇಂದ್ರ ಮಂತ್ರಿಯಾಗಬೇಕಾದರೆ ತಾನು ಮತ್ತೊಮ್ಮೆ ಗೆಲ್ಲಲೇಬೇಕು. ಯಡ್ಡಿ ಕೊಟ್ಟ ವಿಚ್ಛೇದನದಿಂದಾಗಿ ಈಗಾಗಲೇ ನೆಲಕಚ್ಚಿರುವ ಬಿಜೆಪಿಗೆ ಮತ್ತೆ ಯಡ್ಡಿ ಕೈ ಹಿಡಿದರಷ್ಟೇ ಬೋಣಿಯಾಗಲು ಸಾಧ್ಯ ತಾನೂ ಗೆಲ್ಲಲು ಸಾಧ್ಯ!



ಇದು ಹಳೇ ಮುತ್ತೈದೆ ಚಂದ್ರೇಗೌಡರ ಲೆಕ್ಕಾಚಾರವಾದರೆ ಯಡ್ಡಿಯ ಋಣ ತಿಂದೇ ದುಂಡಗಾದ ಬೊಮ್ಮಾಯಿ, ಕತ್ತಿಯಂಥವರಿಗೂ ಅಧಿಕಾರವೆಂಬುದು ಯಡ್ಡಿ ಮೂಲಕವೇ ಪ್ರವಹಿಸುತ್ತದೆಯೆಂಬ ನಂಬಿಕೆ. ಈ ಪೈಕಿ ಸದಾನಂದ ಗೌಡರದ್ದು ನಿಜಕ್ಕೂ ಫಜೀತಿ. ತನ್ನನ್ನು ರಾಜ್ಯಾಧ್ಯಕ್ಷನನ್ನಾಗಿಸಿದ್ದೂ ಅಲ್ಲದೆ ಮುಖ್ಯಮಂತ್ರಿ ಗಾದಿಗೂ ತಂದ ಯಡ್ಡಿಗೂ ನಿಯತ್ತಾಗಿರಲಿಲ್ಲ, ಬಾಲ್ಯ ಕಾಲದಿಂದಲೂ ಬೆಳೆಸಿ, ಪೋಷಿಸಿದ ಪರಿವಾರದ ನಂಬಿಕೆಯನ್ನೂ ಉಳಿಸಿಕೊಳ್ಳಲಿಲ್ಲ, ಹೀಗಾಗಿ ಬಿಜೆಪಿಯಲ್ಲಿ ತನ್ನನ್ನು ಯಾರೂ ನಂಬುವುದಿಲ್ಲ, ಅದರಲ್ಲೂ ಅನಂತ್‌ಕುಮಾರ್ ಇರುವ ತನಕ ತನಗೆ ಏಳಿಗೆಯಿಲ್ಲ, ಹಳೇ ಗಂಡನ ಪಾದವೇ ಗತಿಯೆಂದರೆ ಯಡ್ಡಿಗೂ ಮುಖ ತೋರಿಸುವ ಧೈರ್ಯವಿಲ್ಲ.

ಒಟ್ಟಿನಲ್ಲಿ ಶೆಟ್ಟರ್, ಗೌಡ, ಜೋಷಿ, ಚಂದ್ರೇಗೌಡ ಎಲ್ಲರಿಗೂ ಈಗ ಯಡ್ಡಿಯೆಂಬ ಟ್ರೋಜನ್ ಕುದುರೆ ಅನಿವಾರ್ಯವಾಗಿಬಿಟ್ಟಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲೇನಾದರೂ ಇದೇ ಸ್ಥಿತಿ ಮುಂದುವರಿಯಿತೆಂದರೆ ಇಡೀ ಕರ್ನಾಟಕದುದ್ದಗಲಕ್ಕೂ ಬಿಜೆಪಿಗೆ ಬೋಣಿಯಾಗುವುದು ಕಷ್ಟ ಎಂಬ ಆತಂಕ ಶುರುವಾಗಿರುವಂತಿದೆ. ಇದೆಲ್ಲದರ ಪ್ರತಿಫಲವೇ ಜೂನ್ 27 ರ ಗುರುವಾರದ ಯಡ್ಡಿ-ಬಿಜೆಪಿ ನಾಯಕರ ಮುಖಾಮುಖಿ.

ಇಲ್ಲಿ ಯಡ್ಡಿಗೂ ತನ್ನ ಹಳೇ ಹಿತಶತ್ರುಗಳ ಜೊತೆ ಕೈಜೋಡಿಸದೆ ಅನ್ಯ ಮಾರ್ಗವಿದ್ದಂತಿಲ್ಲ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಜೆಡಿಎಸ್ ಜೊತೆ ಕೈ ಜೋಡಿಸುವಂತಿಲ್ಲ, ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ತನ್ನನ್ನು ಮೂಸುವುದೂ ಕಷ್ಟ. ಬಿಜೆಪಿಗೆ ವಾಪಸ್ಸಾಗಲು ಮನಸ್ಸಿಲ್ಲವಾದರೂ ಬೇರೆ ಗತಿಯಿಲ್ಲ. ಇದು ಯಡ್ಡಿಯ ಅಸಹಾಯಕ ಅಳಲು. ಇದೆಲ್ಲ ಲೆಕ್ಕ ಹಾಕಿಯೇ ರಾಷ್ಟ್ರ ಬಿಜೆಪಿಯ ನೂತನ ಸಾರಥಿ ಮೋದಿ ಚಂದ್ರೇಗೌಡರ ರಾಜಿ ಸಂಧಾನಕ್ಕೆ ತಲೆದೂಗಿದ್ದಾರೆ.

ಹಾಗಂತ ಅಷ್ಟು ಸುಲಭಕ್ಕೆ ಯಡ್ಡಿ ಬಿಜೆಪಿ ಸೇರುವುದುಂಟಾ? ಸದ್ಯದ ಪರಿಸ್ಥಿತಿಯಲ್ಲಿ ತನ್ನ ಕೆಜೆಪಿಯನ್ನು ಇನ್ನಷ್ಟು ಭದ್ರ ಮಾಡಿಕೊಂಡು ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲೇ ಯಡ್ಡಿ ಆಸಕ್ತಿಯಿರುವಂತಿದೆ. ನಾಳೆ ಎನ್‌ಡಿಎ ಅಧಿಕಾರ ಹಿಡಿಯಿತೆಂದರೆ ಮುಲಾಜಿಲ್ಲದೆ ಪಾಲು ಕೇಳಬಹುದು. ಮಗನನ್ನು ಕೇಂದ್ರ ಮಂತ್ರಿಯಾಗೋ ಕರಂದ್ಲಾಜೆಯನ್ನು ಮಮತಾ ಬ್ಯಾನರ್ಜಿ ಗೆಟಪ್ಪಿನಲ್ಲೋ ನೋಡಬೇಕೆಂದರೆ ಕೆಜೆಪಿಯ ಅಸ್ತಿತ್ವ ಉಳಿಸಿಕೊಂಡೇ ಪಾಲು ಕೇಳಬಹುದು.


ಸದ್ಯ ಯಡ್ಡಿಗೆ ಇದಕ್ಕಿಂತ ಬೇರೆ ಸಾಧ್ಯತೆ ತೋಚುತ್ತಿಲ್ಲ. ಕೆಜೆಪಿಯನ್ನು ಬಿಜೆಪಿಯೊಳಗೆ ವಿಲೀನಗೊಳಿಸಬೇಕೆಂಬ ಬಿಜೆಪಿ ನಾಯಕರ ಒತ್ತಾಯಕ್ಕೆ ಮಣೆ ಹಾಕುವಷ್ಟು ಮೂರ್ಖ ಯಡ್ಡಿಯಲ್ಲ. ಏಕೆಂದರೆ ಒಮ್ಮೆ ಪಕ್ಷ ತೊರೆದು ಮತ್ತೆ ವಾಪಸ್ಸಾದ ಯಾರನ್ನೂ ಬಿಜೆಪಿ ಗೌರವದಿಂದ ನಡೆಸಿಕೊಂಡ ಉದಾಹರಣೆಯಿಲ್ಲ, ಕಲ್ಯಾಣ್‌ಸಿಂಗ್ ಇರಬಹುದು ಉಮಾ ಭಾರತಿಯೇ ಆಗಿರಬಹುದು.

ಒಮ್ಮೆ ಬಿಜೆಪಿ ತೊರೆದು ಮತ್ತೆ ವಾಪಸ್ಸಾದ ಯಾರಿಗೂ ಹಿಂದಿನ ಗೌರವ, ಸ್ಥಾನಮಾನ ಕೊಡಲಾರದ ಬಿಜೆಪಿ ಒಬ್ಬ ಯಡ್ಡಿಯ ವಿಷಯದಲ್ಲಿ ತನ್ನ ಚಾಳಿಯನ್ನು ಬದಲಾಯಿಸುತ್ತಾ?

ಇದು ಗೊತ್ತಿದ್ದೂ ಯಡ್ಡಿ ಬಿಜೆಪಿ ನಾಯಕರನ್ನು ಮನೆಯೊಳಕ್ಕೆ ಬಿಟ್ಟುಕೊಳ್ಳುತ್ತಾರೆಂದರೆ, ಯಡ್ಡಿಯ ಜಾಯಮಾನ ಗೊತ್ತಿದ್ದೂ ಲಜ್ಜೆಗೆಟ್ಟು ಬಿಜೆಪಿ ನಾಯಕರು ಡಾಲರ್ಸ್ ಕಾಲನಿಯ ಮನೆಯ ಬಾಗಿಲು ಕಾಯುತ್ತಾರೆಂದರೆ; ಒಂದೇ ಅರ್ಥ.

ಅನ್ನ ಹಳಸಿತ್ತು ನಾಯಿ ಹಸಿದಿತ್ತು! ●

## ಅನಂತ್ ಎಂಬ ನಾಯಕನೂ ಸಂಸದ ಸಿದ್ದೇಶನ ಅಧಿಕಪ್ರಸಂಗಿತನವೂ...



ಜೂನ್ 29ರ ರಾಜ್ಯ ಬಿಜೆಪಿ ಕೋರ್ ಕಮಿಟಿಯಲ್ಲಿ ಯಡ್ಡಿ ಜೊತೆ ಪುನರ್ ಕೂಡುವಿಕೆಯ ನಿರ್ಣಯ ಹಾಗುವುದನ್ನೇ ಕಾದಿದ್ದು ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ ಅಧಿಕ ಪ್ರಸಂಗಿತನವೊಂದಕ್ಕೆ ಕೈಯಿಟ್ಟಿದ್ದಾರೆ.

"ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಕೈ ಮೇಲಾಗಬೇಕೆಂದರೆ ಬಿಜೆಪಿ ರಾಷ್ಟ್ರನಾಯಕ ಅನಂತ್‌ಕುಮಾರ್ ಮತ್ತು ಯಡಿಯೂರಪ್ಪ ಒಂದಾಗಲೇಬೇಕು. ಯಡಿಯೂರಪ್ಪ ಮತ್ತು ಅನಂತ್ ಒಂದಾದರೇನೇ ಕಾಂಗ್ರೆಸ್ಸನ್ನು ಸೋಲಿಸಲು ಸಾಧ್ಯ...!"

ಹೀಗೆಂದು ಸಿದ್ದೇಶ್ ನಾಲಿಗೆ ಹರಿಬಿಟ್ಟಿದ್ದನ್ನು ಕಂಡೇ ಯಡ್ಡಿ ಉರಿದು ಹೋದರಂತೆ. ಅದು ನಿಜ ಕೂಡ. ಏಕೆಂದರೆ ಬಿಜೆಪಿ ಉಳಿಯಬೇಕೆಂದರೆ ಯಡ್ಡಿ ಅನಿವಾರ್ಯವೇ ಹೊರತು ಅನಂತ್ ಕುಮಾರ್ ಅಲ್ಲ, ಅನಂತ್‌ಕುಮಾರ್ ಯಡ್ಡಿಯಂತೆ ಮಾಸ್ ಲೀಡರೂ ಅಲ್ಲ, ಪ್ರಭಾವಿ ಸಮುದಾಯದ ಲಿಂಗಾಯತರ ನಾಯಕನೂ ಅಲ್ಲ.

ವಾಸ್ತವ ಗೊತ್ತಿದ್ದೂ ಸಂಸದ ಸಿದ್ದೇಶ್ ಅನಂತ್‌ರನ್ನು ಯಡ್ಡಿಗೆ ಪರ್ಯಾಯ ನಾಯಕನೆಂಬಂತೆ ಏಕೆ ಬಿಂಬಿಸುತ್ತಿದ್ದಾರೆ? ಬಹುಶಃ ಅನಂತ್‌ರೇ ಸಿದ್ದೇಶ್‌ರನ್ನು ಛೂಬಿಟ್ಟು ಇಂಥದೊಂದು ಅಧಿಕ ಪ್ರಸಂಗಿತನಕ್ಕಿಳಿದಿರಬಹುದೇ?

# -ಈಗ ಮಣಿಪಾಲದಲ್ಲಿ ಒಬ್ಬಳು ನಿರ್ಭಯ

ಇದೇ ತಾರೀಖು 20, ಗುರುವಾರ ರಾತ್ರಿ 11 ಗಂಟೆಯ ಸುಮಾರಿಗೆ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಲೈಬ್ರರಿಯಿಂದ ತನ್ನ ನಿವಾಸಕ್ಕೆ ಮರಳುತ್ತಿದ್ದ ವಿದ್ಯಾರ್ಥಿನಿ 'ನಿರ್ಭಯ'ಳನ್ನು ರಿಕ್ಷಾದಲ್ಲಿ ಅಪಹರಿಸಿ ಮೂವರು ಅತ್ಯಾಚಾರ ನಡೆಸಿದರು. ತನ್ನ ಮೇಲೆ ಎರಗಿದ ಈ ಪುರುಷ ಮೃಗಗಳ ವಿರುದ್ಧ ನಿರ್ಭಯ ಶಕ್ತಿ ಮೀರಿ ಸೆಣೆಸಿದ್ದಾಳೆ; ರಿಕ್ಷಾದಿಂದ ಕೆಳಗೆ ಹಾರಿ ಕಾಲುಮುರಿದು ಕೊಂಡಿದ್ದಾಳೆ. ಘಟನೆ ನಡೆದ ನಾಲ್ಕು ದಿನಗಳ ನಂತರವೂ ನಿರ್ಭಯ ಯಾರೊಡನೆಯೂ ಮಾತಾಡುವ ಸ್ಥಿತಿಯಲ್ಲಿಲ್ಲ. ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೂ ಆಕೆ ಏನನ್ನೂ ಹೇಳಲಾರದಷ್ಟು ಜರ್ಜರಿತಳಾಗಿದ್ದಾಳೆ. ಪಶ್ಚಿಮ ವಲಯ ಪೊಲೀಸ್ ಐ.ಜಿ. ಪ್ರತಾಪ್ ರೆಡ್ಡಿ ಮತ್ತು ಇತರ ವರಿಷ್ಠ ಅಧಿಕಾರಿಗಳಿಗೆ ಆಕೆ ನೀಡಿದ ಚೂರುಪಾರು ಮಾಹಿತಿಯನ್ನು ಆಧರಿಸಿ, ತಾರೀಖು 24ರ ಸಂಜೆಯಷ್ಟೆ ಶಂಕಿತ ಅಪರಾಧಿಗಳ ಮುಖ ಚಹರೆಯ ರೇಖಾಚಿತ್ರಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿದೆ. ಮಣಿಪಾಲದ ಸುತ್ತಮುತ್ತ 15-20 ಕಿ.ಮೀ ಫಾಸಲೆ ಒಳಗಿನ ಎಲ್ಲ ರಿಕ್ಷಾಗಳ ತಪಾಸಣೆ ಮುಂದುವರಿದಿದೆ. ತನಿಖೆ ಬಿರುಸಾಗಿ ನಡೆದಿದೆ.

ಮಣಿಪಾಲದಲ್ಲಿ ಆ ದಿನ ತಡರಾತ್ರಿಯ ನೀರವತೆಯಲ್ಲಿ ನಡೆದದ್ದು ದುರಂತವಾದರೆ, ಆನಂತರ ನಡೆದದ್ದು ಹಿಂದೂತ್ವದ ಎಂದಿನ ಸೋಗಲಾಡಿತನ ಮತ್ತು ಅಬ್ಬರಗಳ ವಿಕಟಪ್ರಹಸನ. ಅತ್ಯಾಚಾರ ಸಂಭವಿಸಿದ್ದು ಗುರುವಾರ ರಾತ್ರಿಯಾದರೂ, ಪತ್ರಿಕೆಗಳಲ್ಲಿ ಇದು ಸುದ್ದಿಯಾದದ್ದು ಶನಿವಾರದಂದು. ಆದರೆ ಶುಕ್ರವಾರವೇ ಟೀವಿ ಚಾನೆಲ್ಲುಗಳಲ್ಲಿ ಇದು ಬ್ರೇಕಿಂಗ್ ನ್ಯೂಸ್ ಆಗಿತ್ತು, ಅವಕ್ಕೆ ಉತ್ತರಾಖಂಡದ ಪ್ರಳಯ, ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಭಾರತದ ಗೆಲುವು, ನಿರ್ಭಯಳ ಗ್ಯಾಂಗ್‌ರೇಪ್-ಎಲ್ಲವೂ ಬ್ರೇಕಿಂಗ್ ನ್ಯೂಸ್! ಶುಕ್ರವಾರದ ಮಧ್ಯಾಹ್ನದ ವೇಳೆಗೆ ಮೂವರು ಶಂಕಿತರ ಬಂಧನವಾಗಿ ಅವರಲ್ಲಿ ಇಬ್ಬರು 'ಬ್ಯಾರಿ' (ಮುಸ್ಲಿಮ್) ಗಳು ಎಂಬ ವದಂತಿ ಕಿವಿಯಿಂದ ಕಿವಿಗೆ ಹರಿದಾಡಿತು. ಸ್ಥಳೀಯ ಟೀವಿ ಚಾನೆಲ್ಲುಗಳು, ಉಡುಪಿಯ ಸಂಸ್ಕೃತಿ ಮತ್ತು ಮಣಿಪಾಲದ ವಿದ್ಯಾರ್ಥಿಗಳು ಅದಕ್ಕೆ, ಸರಿಯಾಗಿ ನಡೆದುಕೊಳ್ಳಬೇಕಾದ ಅಗತ್ಯದ ಬಗ್ಗೆ ಪ್ರವಚನ ಪ್ರಾರಂಭಿಸಿದವು. ಶನಿವಾರದಿಂದ ಅವುಗಳ ವರಸೆಯೇ ಬದಲಾಯಿತು. ಶುಕ್ರವಾರದ ಶಂಕಿತರನ್ನು ಬಂಧಿಸಲಾಗಿದ್ದರೂ, ಸಂಘದ ರಾಜಕೀಯ ಒತ್ತಡಗಳಿಂದ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ಅರ್ಥ ಬರುವ ಸುದ್ದಿಗಳನ್ನು ಅವು ಪ್ರಸಾರ ಮಾಡತೊಡಗಿದವು. ಉಡುಪಿಯ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿ 'ಯಾರನ್ನೂ ಬಂಧಿಸಲಾಗಿಲ್ಲ; ಶಂಕಿತರನ್ನು ಕೇವಲ ವಿಚಾರಣೆಗೆ ಒಳಪಡಿಸಿ, ನಂತರ ಬಿಡುಗಡೆ ಮಾಡಲಾಗಿದೆ' ಎಂದು ಪದೇಪದೇ ಹೇಳಿಕೆ ಕೊಟ್ಟರೂ, ಜಿಲ್ಲೆಯ ಟೀವಿ ಚಾನೆಲ್ಲು ಮತ್ತು ಪತ್ರಿಕೆಗಳು ಮುಸ್ಲಿಮ್ ಸಮುದಾಯದ ತುಷ್ಟೀಕರಣಕ್ಕಾಗಿ ಶಂಕಿತ ಮುಸ್ಲಿಮರನ್ನು ಬಿಡುಗಡೆ ಮಾಡಲಾಗಿದೆ ಎಂಬ ಅರ್ಥ ಹೊರಡಿಸುವ ಸುದ್ದಿಗಳನ್ನು ನಿರಂತರವಾಗಿ ಪ್ರಕಟಿಸಿದವು. ಕರಾವಳಿಯ ಮಾಧ್ಯಮಗಳ ಒಳಗೆ ನುಸುಳಿಕೊಂಡಿರುವ ಚಡ್ಡಿಗಳು ಬೆಂದ ಮನೆಯ ಗಳ ಹಿರಿಯುವ ತಮ್ಮ ಕೊಳಕು ರಾಜಕೀಯವನ್ನು




ಪ್ರಾರಂಭಿಸಿ ಬಿಟ್ಟಿದ್ದವು! ಸ್ಥಳೀಯ ಬಿಜೆಪಿ ನಾಯಕರಂತೂ, ಮಣಿಪಾಲದ ಆ ದುರ್ಘಟನೆಯನ್ನು ಕಣ್ಣಾರೆ ನೋಡಿದವರ ಹಾಗೆ 'ಅತ್ಯಾಚಾರಿಗಳನ್ನು ಯಾಕೆ ಇನ್ನೂ ಬಂಧಿಸಿಲ್ಲ? ಯಾರ ಒತ್ತಡಕ್ಕೆ ಒಳಗಾಗಿ ವಶಕ್ಕೆ ತೆಗೆದುಕೊಂಡ ಶಂಕಿತರನ್ನು ಬಿಡುಗಡೆ ಮಾಡಿದ್ದೀರಿ?' ಎಂದು ಸಾರ್ವಜನಿಕವಾಗಿ ಕೇಳಲಾರಂಭಿಸಿದರು. ಕರಾವಳಿಯಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದ ಪಬ್ ದಾಳಿ, ಹೋಮ್‌ಸ್ಟೇ ಪ್ರಕರಣ ಮತ್ತು ನೈತಿಕ ಪೊಲೀಸ್‌ಗಿರಿಯ ನೂರಾರು ಘಟನೆಗಳಲ್ಲಿ ಹಲ್ಲೆಗೊಳಗಾದ ಮಾನಿನಿಯರ ಬಗ್ಗೆ ಮೌನವಹಿಸಿದ್ದ ಎಬಿವಿಪಿ ಮೊದಲಾದ ಹಿಂದೂತ್ವದ ಸಂಘಟನೆಗಳು ನಿರ್ಭಯಳ ಪರ ಭಾರೀ ಗದ್ದಲ ಎಬ್ಬಿಸಿ ಮಾಧ್ಯಮಗಳಲ್ಲೂ ಅದು ಭಾರೀ ಸುದ್ದಿಯಾಗುವಂತೆ ನೋಡಿಕೊಂಡರು. ಬಿಜೆಪಿಯ ಮಂಗಳೂರು ಲೋಕಸಭಾ ಸದಸ್ಯ ನಳಿನ ಕುಮಾರ ಕಟೀಲು 'ಮಣಿಪಾಲದ ಡ್ರಗ್ ಮಾಫಿಯಾ ಬಗ್ಗೆ ಯಾಕೆ ಕ್ರಮ ಕೈಗೊಂಡಿಲ್ಲ' ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಅದಕ್ಕೆ ಪ್ರತಿಯಾಗಿ ರಾಜ್ಯ ಗೃಹಮಂತ್ರಿ ಕೆ.ಜೆ.ಜಾರ್ಜ್ "ನಾವು ಅಧಿಕಾರಕ್ಕೆ ಬಂದು ಒಂದು ತಿಂಗಳೂ ಆಗಿಲ್ಲ. ನೀವು ಐದು ವರ್ಷ ಅಧಿಕಾರದಲ್ಲಿ ಇದ್ದಿರಲ್ಲ? ಏನು ಕಿಸಿದಿರಿ?" ಎಂದು ಕೇಳಿದ್ದಾರೆ. ಅದರ ಜೊತೆಗೆ ಜಾರ್ಜ್ ಸದ್ರಿ ಲೋಕಸಭಾ ಸದಸ್ಯರಿಗೆ ಅವರ ಪಕ್ಷದ ಗತಕಾಲದ ಪರಾಕ್ರಮಗಳನ್ನೂ ನೆನಪು ಮಾಡಿಕೊಟ್ಟಿದ್ದರೆ ಒಳ್ಳೆಯದಿತ್ತು. ಮಣಿಪಾಲದ ದುರ್ಘಟನೆ ಕುರಿತು ಇನ್ನೊಬ್ಬ ಸ್ಥಳೀಯ ಬಿಜೆಪಿ ನಾಯಕ ಯಶ್‌ಪಾಲ್ ಸುವರ್ಣರ ಪ್ರತಿಕ್ರಿಯೆ ಕೂಡ ಆ ಪಕ್ಷಕ್ಕೆ ಹೇಳಿ ಮಾಡಿಸಿದಂತಿದೆ. ಯಶ್‌ಪಾಲ್ ಸುವರ್ಣ ಉಡುಪಿಯ ಹಾಲೀ ಪುರಸಭಾ ಸದಸ್ಯರು; ಒಂದು ಬಾರಿ ರಾಜ್ಯ ಸರಕಾರದ ನಾಮಕರಣ ಮತ್ತು ಎರಡು ಬಾರಿ ಚುನಾವಣೆ ಮುಖಾಂತರ ಪುರಸಭಾ ಸದಸ್ಯರಾಗಿರುವ ಸುವರ್ಣರು ಅದಕ್ಕೂ ಮೊದಲು ಆದಿ ಉಡುಪಿ ಬೆತ್ತಲೆ ಪ್ರಕರಣದ ಆರೋಪಿಗಳಲ್ಲಿ ಒಬ್ಬರು ಎಂದು ಹೆಸರು ಮಾಡಿದ್ದರು. ಸುಮಾರು ಎರಡು ವಾರಗಳ ಕೆಳಗೆ, ಅವರು ತಮ್ಮ ಸ್ನೇಹಿತರ ಜೊತೆ ಮಂಗಳೂರಿನಿಂದ ಉಡುಪಿಗೆ ಕಾರಿನಲ್ಲಿ ಬರುತ್ತಿದ್ದಾಗ ಒಂದು ಎಕ್ಸ್‌ಪ್ರೆಸ್ ಬಸ್ ಅವರ ಕಾರಿಗೆ ಸೈಡು ಕೊಡಲಿಲ್ಲವಂತೆ. ಸುವರ್ಣ ವೇಗವಾಗಿ ಕಾರನ್ನು ಚಲಾಯಿಸಿ, ಬಸ್ಸಿಗೆ ಅಡ್ಡ ನಿಲ್ಲಿಸಿ, ಡ್ರೈವರ್‌ಗೆ ಹೊಡೆದರು. ಈ ಸುದ್ದಿ ಕ್ಷಣಾರ್ಧದಲ್ಲಿ ಎಲ್ಲೆಡೆ ಹಬ್ಬಿ ಮಂಗಳೂರಿನಿಂದ ಕುಂದಾಪುರದವರೆಗೆ ಹೆದ್ದಾರಿಯಲ್ಲಿ ಬಸ್ ಸಂಚಾರ ಸ್ಥಗಿತಗೊಂಡಿತು. ಪೆಟ್ಟುತಿಂದ ಬಸ್ ಡ್ರೈವರ್‌ಗೆ ಸಹಾನುಭೂತಿಯಲ್ಲಿ ಕರಾವಳಿಯ ಬಸ್ ಚಾಲಕರು ಮಿಂಚಿನ ಮುಷ್ಕರ ನಡೆಸಿದ್ದು ಅಭೂತಪೂರ್ವವಾಗಿತ್ತು, ಪೊಲೀಸರು ಸುವರ್ಣರ ಮೇಲೆ ಕೇಸು ದಾಖಲಿಸಿಕೊಂಡರು. ಅವರು ಕೆಲವೇ ಗಂಟೆಗಳಲ್ಲಿ ಜಾಮೀನು ಪಡೆದು ಬಂಧನದಿಂದ ತಪ್ಪಿಸಿಕೊಂಡರು. ಆದಿಉಡುಪಿ ಪ್ರಕರಣದ ಹಾಗೆ ಈ ಕೇಸು ಕೂಡ ಖುಲಾಸೆಯಾಗಬಹುದು. ಅವರ ವಚನು ಹಾಗಿದೆ. ಮಣಿಪಾಲದ ಘಟನೆಯ ಬಳಿಕ ಸುವರ್ಣ "ಅಜಾಗರೂಕತೆಯಿಂದ ಬಸ್ ಚಲಾಯಿಸುತ್ತಿದ್ದ ಡ್ರೈವರ್‌ಗೆ ಬುದ್ಧಿ ಹೇಳಿದ್ದಕ್ಕೆ ನನ್ನ ಮೇಲೆ ಕೇಸು ಬುಕ್ ಮಾಡಿಕೊಂಡ ಪೊಲೀಸರು ಈಗ ಏನು ಮಾಡುತಿದ್ದಾರೆ?" ಎಂದು ಸವಾಲು ಹಾಕಿದರು.

ಬಿಜೆಪಿಯ ಈ ಶಕ್ತಿಪ್ರದರ್ಶನದ ಉದ್ದೇಶ ಮುಸ್ಲಿಮ್ ಸಮುದಾಯದ ವಿರುದ್ಧ ದ್ವೇಷ ಪ್ರಚೋದನೆ ಎಂಬುದು ಸ್ಪಷ್ಟವಾಗಿದೆ. ಪೊಲೀಸರು ಇವರ ಒತ್ತಡ ತಂತ್ರಗಳಿಗೆ ಮಣಿದು ಅಮಾಯಕ ಮುಸ್ಲಿಮರನ್ನು ಬಂಧಿಸಿ ರುಬ್ಬುವಂತಾಗಬಾರದು. ಈ ಪ್ರಕರಣದಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸುವುದಕ್ಕೆ ಯಾರೂ ಅಡ್ಡಿಯಾಗಿಲ್ಲ, ಎಂದು ಸರಕಾರ ಜನರಿಗೆ ಮನವರಿಕೆ ಮಾಡಿಕೊಡಬೇಕು. ಇತ್ತೀಚೆಗಷ್ಟೆ ರಾಜ್ಯದ ಪುರಸಭೆಗಳು ಮತ್ತು ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿ ಉಡುಪಿ ಮತ್ತು ದ.ಕ ಜಿಲ್ಲೆಗಳಲ್ಲಿ ಇನ್ನಿಲ್ಲದಂತೆ ನೆಲಕಚ್ಚಿದೆ. ಆದರೆ ಮಣಿಪಾಲದ ದುರಂತದ ಕುರಿತು ಬಿಜೆಪಿ ನಡೆಸಿದ ಪಬ್ಲಿಕ್ ಶೋ ಅಧಿಕಾರ ಕಳೆದುಕೊಂಡರೂ ಅದರ ಪ್ರಭಾವ ಕಿಂಚಿತ್ತೂ ಕಡಿಮೆಯಾಗಿಲ್ಲ ಎಂಬುದನ್ನು ತೋರಿಸುತ್ತದೆ. ಕಾಂಗ್ರೆಸ್ ಮತ್ತು ಬಿಜೆಪಿಯೇತರ ಪಕ್ಷಗಳು ಈ ವಾಸ್ತವವನ್ನು ಇನ್ನಾದರೂ ಗುರುತಿಸಿ, ಬಿಜೆಪಿಯ ಪ್ರಚಾರ ಮತ್ತು ಪ್ರಕ್ಷೋಭೆಯ ರಾಜಕೀಯವನ್ನು ಪರಿಣಾಮಕಾರಿಯಾಗಿ ಎದುರಿಸುವ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಮಣಿಪಾಲದ ಈ ಅತ್ಯಾಚಾರ ಜನರಲ್ಲಿ ಹುಟ್ಟಿಸಿದ ಸಾತ್ವಿಕ ಆಕ್ರೋಶ, ರಿಕ್ಷಾ ಡ್ರೈವರುಗಳು ಅಥವಾ ಮುಸ್ಲಿಮರ ವಿರುದ್ಧ ಸಾರಾಸಗಟು ದ್ವೇಷವಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಕಾಂಗ್ರೆಸ್ ಮತ್ತು ಇತರ ಸೆಕ್ಯುಲರ್ ಪಕ್ಷಗಳ ಮೇಲಿದೆ. ಇದು ಸೆಕ್ಯುಲರ್ ರಾಜಕೀಯದ ಈ ಕ್ಷಣದ ಅಜೆಂಡಾವಾದರೆ ಹೆಣ್ಣಿನ ಮೇಲೆ ನಡೆಯುವ ಇಂತಹ ಆಕ್ರಮಣಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ನೋಡಿಕೊಳ್ಳಲು ಸೆಕ್ಯುಲರ್ ಶಕ್ತಿಗಳು ದೀರ್ಘಕಾಲೀನ ರಾಜಕೀಯ ಕಾರ್ಯಕ್ರಮವೊಂದನ್ನು ರೂಪಿಸಬೇಕಾಗಿದೆ.ಕಳೆದ ಗುರುವಾರ ತಡರಾತ್ರಿ ಮಣಿಪಾಲದ ನಿರ್ಭಯ ಅನುಭವಿಸಿದ ಅಸಹಾಯಕತೆ ಮತ್ತು ಒಂಟಿತನ ಆಕೆಯೊಬ್ಬಳದ್ದು ಮಾತ್ರವಲ್ಲ, ಅದು ಜಾತಿ, ವರ್ಗ ಮತ್ತು ಅಂತಸ್ತುಗಳ ಭೇದ ಲೆಕ್ಕಿಸದೆ ಎಲ್ಲ ಹೆಂಗಸರನ್ನೂ ಕಾಡುವಂತಹದ್ದು. ಈ ದೃಷ್ಟಿಯಿಂದ ರಾಮಾಯಣದ ಸೀತೆಯೇ ಮೊದಲ ನಿರ್ಭಯಳಾಗಿರಬಹುದು. ಆದರೆ ಆ ಕಾವ್ಯದ ಪುರುಷೋತ್ತಮ ರಾಮನ ಹಾಗೆ ಸ್ತ್ರೀರತ್ನ ಸೀತೆ ಕೂಡ ನಾಗರಿಕತೆ ಕೆತ್ತಿಟ್ಟ ಮೂರ್ತಿ. ಅದು ಪ್ರಕೃತಿ ಸಹಜವೂ ಅಲ್ಲ ದೈವ ನಿರ್ಮಿತವೂ ಅಲ್ಲ. ಜಾತಿ, ವರ್ಗ ಮತ್ತು ಲಿಂಗ ಸಮಾನತೆ ಮಾತ್ರ ಹೆಣ್ಣನ್ನು ಆಕೆಯ ಅಸಹಾಯಕತೆ ಮತ್ತು ಒಂಟಿತನಗಳಿಂದ ಪಾರು ಮಾಡಬಲ್ಲದು. ಸೆಕ್ಯುಲರ್ ರಾಜಕೀಯ ಪಕ್ಷಗಳಿಗೆ ಈ ಶಾಶ್ವತ ರಾಜಕೀಯದ ಕಾರ್ಯಕ್ರಮವೂ ಅಗತ್ಯ.

● ಜಿ.ರಾಜಶೇಖರ್

# ಸೆಕ್ಸ್ ಬಾಂಬ್ ಶಕೀಲಾಳ ದುರಂತ ಕತೆ



ಸರಿತ ಮುಗಿಯಲೇಬೇಕು.

ಕಾಲದ ಬಂಧಿ ಯಾರಿಗೂ ಕಾಯುವುದಿಲ್ಲ, ಹಾಗೇ ಯೌವನ ಕೂಡ. ಸೆಕ್ಸ್ ಬಾಂಬ್ ಸಿಲ್ಕ್ ಸ್ಮಿತಾಳ ದುರಂತವನ್ನು ಕಣ್ಣಾರೆ ಕಂಡ ನಂತರವೂ ಅದರಿಂದ ಪಾಠ ಕಲಿಯಲಿಲ್ಲವೆಂದರೆ ಅದಕ್ಕೆ ದಂಡ ಕಟ್ಟಲೇಬೇಕಲ್ಲವೆ?

ಮಾದಕ ಮೋಹದ ಶನಿಯೀಗ ಶಕೀಲಾ ಬೆನ್ನೇರಿರಬೇಕು. ಆಕೆಗೀಗ ನಲವತ್ತರ ಇಳಿಪ್ರಾಯ. ಪುಟಿಯುತ್ತಿದ್ದ ಆ ಕೆನ್ನೆಗಳ ಹೊಳಪು ಹಿಂದಿನಂತಿಲ್ಲ, ಕಣ್ಣು ಕಾಂತಿ ಕ್ಷೀಣ ದೀಪದಂತೆ ಮಂದಮಂದ. ಕೆಣಕುವ ಆ ತುಟಿಗಳಲ್ಲೆಂಥದೋ ವಿಷಾದ. ಎತ್ತಿಂದೆತ್ತ ನೋಡಿದರೂ ಆವತ್ತಿದ್ದ ಆ ಶಕೀಲಾ ಇವಳೇನಾ ಎನ್ನುವಂತ ಹೈರಾಣ. ರೂಪ. ಚೆನ್ನೈ ನಗರದ ಕೋಡಂಬಾಕಂನ ತನ್ನ ಹಳೆಯ ಫ್ಲಾಟಿನಲ್ಲಿ ಯಾವುದೋ ಗತವೈಭವದ ವಿಕಟ ವಿಡಂಬನೆಯಂತೆ ಬದುಕುತ್ತಿರುವ ಸೆಕ್ಸ್ ಬಾಂಬ್ ಶಕೀಲಾ ಸದ್ಯ ವ್ಯಸನದಾಸಿ-

ಮಾತುಮಾತಿಗೆ ತನ್ನ ಕೊಳಕೊಳೆಯಾದ ಪರ್ಸ್‌ನಿಂದ ಮಾಣಿಕ್‌ಚಂದ್ ಗುಟ್ಕಾದ ಪ್ಯಾಕೇಟು ತೆಗೆದದ್ದೇ ಹರಿದು ಬಾಯಿಗೆ ಸುರಿದುಕೊಳ್ಳುತ್ತಾಳೆ. ಎದುರಿದ್ದವರೇನು ಅಂದುಕೊಂಡಾರೆಂಬ ಪರಿವೆಯೂ ಇಲ್ಲದೆ ಗುಟ್ಕಾ ಜಗಿದು ಪಕ್ಕಕ್ಕಿಟ್ಟ ಪೀಕುದಾನಿಯೊಳಕ್ಕೆ ಕ್ಯಾಕರಿಸುತ್ತಾಳೆ. ಮಾತು ವರ್ತನೆಗಳೂ ಚಿತ್ರವಿಚಿತ್ರ. ಬೆಳ್ಳಂಬೆಳಗ್ಗೆಯೇ ಕುಡಿತ. ನಡುನಡುವೆ ಗುಟ್ಕಾ, ಪದೇಪದೇ ಕೆಮ್ಮು. ಸಂಜೆಯಾಗುತ್ತಿದ್ದಂತೆ ಅಫೀಮಿನ ಘಾಟು. ಇದ್ದಕ್ಕಿದ್ದಂತೆ ಏನನ್ನೋ ನೆನೆದು ಕಣ್ಣೀರಿಡುತ್ತಾಳೆ! ಯಾರನ್ನೋ ಬಯ್ಯುತ್ತಾಳೆ. ಅಂಗೈ ಕೆಳಭಾಗದಿಂದ ತೋಳಿನವರೆಗೆ ಬ್ಲೇಡೋ, ಚಾಕುವನ್ನೋ ಬಳಸಿ ಕುಯ್ದುಕೊಂಡಂತೆ ಗೀರಿದ ಗಾಯದ ಗುರುತು!

## ಕ್ಯಾನ್ಸರ್ ಭೀತಿ?

ಅಲ್ಲಿಗೆ ಶಕೀಲಾ ಎಂಬ ಸಿಲ್ಕ್ ತಂಗಿಯಂಥವಳ ಬದುಕು ಕೂಡ ಯಾವುದೋ ದುರಂತಕ್ಕಪ್ಪಳಿಸಿತೆ? ಅಥವಾ ಗ್ಲಾಮರ್ ಮರೆಯ ಕರಾಳ ಸತ್ಯವನ್ನು ಎದುರಿಸಲಾಗದ ಅಸಹಾಯಕ ತೊಳಲಾಟವೆ? ಜೀವನವಿಡೀ ತನ್ನ ಮೈಮಾಟ ಮಾತ್ರದಿಂದಲೇ ಗಳಿಸಿದ ಕೋಟಿಗಟ್ಟಲೇ ದುಡ್ಡನ್ನು ಆಕೆಯ ಒಡಹುಟ್ಟಿದ ಅಕ್ಕನೇ ಲಪಟಾಯಿಸಿಕೊಂಡು ಪರಾರಿಯಾದ ಹತಾಶೆ, ನಂಬಿ ಕೈಹಿಡಿದ ಗಂಡನೇ ದ್ರೋಹ ಬಗೆದ ಆಘಾತ, ಬದುಕಿನ ಏಕೈಕ ಭರವಸೆಯಂತಿದ್ದ ಹೆತ್ತ ತಾಯಿಯ ಅಕಾಲಿಕ ಸಾವು ಮತ್ತು ದಿನೇದಿನೇ ಕುಸಿಯುತ್ತಿರುವ ಬೇಡಿಕೆ, ಜನಪ್ರಿಯತೆ ಮತ್ತು ಮೈಮಾಟದ ಭೀತಿಗೆ ಸಿಲುಕಿದ ನರಳುವಿಕೆ, ಅದೆಂಥದೋ ಕಾಯಿಲೆ; ಎಲ್ಲವೂ ಒಟ್ಟೊಟ್ಟಿಗೆ ದಾಳಿಯಿಟ್ಟದ್ದರ ಪ್ರತಿಫಲವೋ ಗೊತ್ತಿಲ್ಲ, ಒಟ್ಟಿನಲ್ಲಿ ಶಕೀಲಾ ಬದುಕು ಕೂಡ ಸಿಲ್ಕ್ ಬದುಕಿನಂತೆಯೇ ದುರಂತಕ್ಕೀಡಾಗಿದೆ.

ಶಕೀಲಾಳ ಆಪ್ತ ಮೂಲಗಳೇ ಹೇಳುವಂತೆ ಕಳೆದೆರಡು ತಿಂಗಳುಗಳಿಂದ ಗೋವಾದ ಯಾವುದೋ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಆಕೆ ಚಿಕಿತ್ಸೆ ಪಡೆಯುತ್ತಿದ್ದಾಳೆ. ಬಹುಶಃ ಆಕೆಯ ಧ್ವನಿಪೆಟ್ಟಿಗೆಯನ್ನೇ ತೆಗೆಯಬೇಕಾಗಬಹುದೇನೋ! ಅದು ವಿಪರೀತ ಗುಟ್ಕಾ ಸೇವನೆಯ ದುಷ್ಪರಿಣಾಮವಂತೆ. ಇಲ್ಲಿಗೆ ಆರು ತಿಂಗಳ ಹಿಂದಿನಿಂದಲೇ ಆಕೆಯ ಧ್ವನಿಯಲ್ಲಿ ಬದಲಾವಣೆಯಿತ್ತಂತೆ. ಚೆನ್ನೈನ ಆಸ್ಪತ್ರೆಯೊಂದರಲ್ಲಿ ಗಂಟಲಿನ ಸ್ಕ್ಯಾನ್ ಮಾಡಿಸಲಾಗಿ ಧ್ವನಿಪೆಟ್ಟಿಗೆಗೆ ಹೊಂದಿಕೊಂಡಂತೆ ಅದೆಂಥದೋ ಗಡ್ಡೆ ಬೆಳೆದಿದೆಯೆಂದು ಗೊತ್ತಾಯಿತಂತೆ.

ಸದ್ಯ ಸಾಯಿಪ್ರಕಾಶ್‌ರ ಕನ್ನಡ ಚಿತ್ರವೊಂದಕ್ಕೆ ಕಾಲ್‌ಶೀಟ್ ಕೊಟ್ಟಿರುವ ಶಕೀಲಾ ಮಲೆಯಾಳದಲ್ಲೊಂದು ಚಿತ್ರ ನಿರ್ದೇಶಿಸುತ್ತಿದ್ದಾಳೆಂಬುದರ ಹೊರತಾಗಿ ತೆಲುಗಿನಲ್ಲಾಗಲಿ, ತಮಿಳಿನಲ್ಲಾಗಲಿ ಹೊಸ ಚಿತ್ರಕ್ಕೆ ಆಯ್ಕೆಯಾದ ಸುದ್ದಿಗಳಿಲ್ಲ. 'ನೀಲಕುರಂಜಿ ಪೂತು' ಎಂಬ ಮಲೆಯಾಳಿ ಚಿತ್ರವನ್ನು ತಾನು ನಿರ್ದೇಶಿಸುತ್ತಿದ್ದೇನೆಂದು 2012ರಿಂದಲೂ ಹೇಳಿಕೆ ನೀಡುತ್ತಲೇ ಬಂದಿರುವ ಶಕೀಲಾ ಬಹುಶಃ ತನ್ನ ಹೆಸರಿನಲ್ಲಿ ಬೇರೆ ಯಾರೋ ನಿರ್ದೇಶಕನಿಂದ ಆ ಚಿತ್ರ ಮಾಡಿಸುತ್ತಿದ್ದಾಳೆಂಬ ವದಂತಿಯೂ ಇದೆ.

## ಸಿಲ್ಕ್ ಸೆಕೆಂಡ್!

ಒಂದಾನೊಂದು ಕಾಲಕ್ಕೆ ಮಲೆಯಾಳವ್ ಚಿತ್ರರಂಗವನ್ನು ಅಕ್ಷರಶಃ ಆಳಿದವಳು ಶಕೀಲಾ: ಸಿಲ್ಕ್ ಸ್ಮಿತ ಕೂಡ ತಮಿಳಿನ ಮೇಲೆ ಸಾಧಿಸಲಾಗದ ಹಿಡಿತವನ್ನು ಶಕೀಲಾ ಸಾಧಿಸಿಬಿಟ್ಟಳು. ಮಲೆಯಾಳದ ಸೂಪರ್ ಸ್ಟಾರ್‌ಗಳಾದ ಮಮ್ಮುಟ್ಟಿ, ಮೋಹನ್‌ಲಾಲ್‌ರಿಗೆ ಕೋಟಿ ಮೊತ್ತದ ಸಂಭಾವನೆ ಕೊಟ್ಟು ಅಷ್ಟೇ ಮೊತ್ತದ ಬಂಡವಾಳ


ಸಿಲ್ಕ್ ಸ್ಮಿತಾ

ಹಾಕಿ ಮಾಡಿದ ಸಿನಿಮಾದ ಲಾಭಕ್ಕೆ ಹೋಲಿಸಿದರೆ ಶಕೀಲಾಳ soft porn ಚಿತ್ರಗಳೇ ಹೆಚ್ಚು ಲಾಭಕರವಾಗಿದ್ದ ಕಾಲವೊಂದಿತ್ತು. ಶಕೀಲಾಳ ಯಾವುದೇ ಹೊಸ ಚಿತ್ರವೊಂದು ಬಿಡುಗಡೆಯಾಗುತ್ತದೆಯೆಂದರೆ ಮೋಹನ್‌ಲಾಲ್, ಮಮ್ಮುಟ್ಟಿ, ಸುರೇಶ್ ಗೋಪಿಯಂಥ ಸ್ಟಾರ್ ನಟರುಗಳೇ ತಮ್ಮ ಚಿತ್ರದ ಬಿಡುಗಡೆಯನ್ನು ಮುಂದೂಡುತ್ತಿದ್ದರು. ತಮಿಳು, ಮಲೆಯಾಳಂ, ತೆಲುಗು, ಕನ್ನಡ, ಭೋಜ್‌ಪುರಿ ಮತ್ತು ಹಿಂದಿ ಸೇರಿದಂತೆ ಕೇವಲ ಹತ್ತು ವರ್ಷಗಳ ಅವಧಿಯಲ್ಲಿ ಬರೋಬ್ಬರಿ 160 ಚಿತ್ರಗಳಲ್ಲಿ ನಟಿಸಿದ ಶಕೀಲಾ ದಕ್ಷಿಣ ಭಾರತದ ಮಟ್ಟಿಗೆ ಎರಡನೇ ಸಿಲ್ಕ್ ಸ್ಮಿತಾ, ಎರಡನೇ ಸೆಕ್ಸ್ ಬಾಂಬ್ ಕೂಡ.

ಕನ್ನಡಿಗರ ಪಾಲಿಗೆ ಸಿಲ್ಕ್ ಸ್ಮಿತಾ ಮಟ್ಟದಲ್ಲಲದಿದ್ದರೂ ಶಕೀಲಾ ಎಂಬ ಮಾಯೆಯಿಂದ ಬಚಾವಾಗುವುದು ಗಾಂಧಿನಗರಕ್ಕೂ ಸಾಧ್ಯವಾಗಲಿಲ್ಲ, ಇಂದ್ರಜಿತ್ ನಿರ್ದೇಶನದ ಮೊನಾಲಿಸಾ, ಸಾಧು ಕೋಕಿಲಾ ನಿರ್ದೇಶನದ ನೈನ್ಸಿ ವಿಜಯ್ ರಾಘವೇಂದ್ರ ಅಭಿನಯದ ಶ್ರೀ ಮತ್ತು ಛಾನ್ಸ್ ಎಂಬ ಇನ್ನೊಂದು ಚಿತ್ರದಲ್ಲಿ ನಟಿಸಿದ್ದಷ್ಟೇ ಆಕೆಯ ಕನ್ನಡದ ಪಟ್ಟಿಯಾದರೆ ಇದರ ಹತ್ತು ಪಟ್ಟು ಮಲೆಯಾಳಿ, ತಮಿಳು, ತೆಲುಗು ಚಿತ್ರಗಳಲ್ಲಿ ನಟಿಸಿದ್ದಾಳೆ. ತೆಲುಗು, ತಮಿಳು, ಮಲೆಯಾಳಕ್ಕೆ ಹೋಲಿಸಿದರೆ ಸಾಮಾನ್ಯ ಕನ್ನಡ ಪ್ರೇಕ್ಷಕರಿಗಾಕೆ ಅಪರೂಪವಾದರೂ 'ಎ' ಸರ್ಟಿಫಿಕೇಟ್ ಚಿತ್ರಗಳನ್ನೇ ಕಾದು ನೋಡುವ ಒಂದು ವರ್ಗಕ್ಕಂತೂ ಆಕೆ ಕಾಮದೇವತೆಯೇ.

ಅದು 2005 ರ ಹೊತ್ತು, ಕಿನ್ನರ ತಂಬಿಕ್ಕಳ್ ಎಂಬ ಹೇಳಹೆಸರಿಲ್ಲದ ಮಲೆಯಾಳಿ ಚಿತ್ರವೊಂದು ಕೇರಳದ ಬಿ ಮತ್ತು ಸಿ ಸೆಂಟರುಗಳಲ್ಲಿ ಸದ್ದಿಲ್ಲದೆ ಪಡ್ಡೆ ಹುಡುಗರನ್ನು ಸೆಳೆಯಲಾರಂಭಿಸಿತು. ಯಾರೇ ಸ್ಟಾರ್‌ಗಳಿಲ್ಲದೆ, ದೊಡ್ಡ ಬ್ಯಾನರ್, ದೊಡ್ಡ ಬಜೆಟ್ ಯಾವುದೂ ಇಲ್ಲದೆ, ಸಿನಿಮಾ ವಿಮರ್ಶಕರ ಎಲ್ಲಾ ಲೆಕ್ಕಾಚಾರಗಳನ್ನೂ ತಲೆಕೆಳಗು ಮಾಡಿದ 'ಕಿನ್ನರ ತಂಬಿಕ್ಕಳ್'ಗೆಂದು ಅದರ ನಿರ್ಮಾಪಕ ಹಾಕಿದ್ದು ಕೇವಲ 21 ಲಕ್ಷ. ಅಷ್ಟೊಂದು ಸಣ್ಣ ಮೊತ್ತದ ಬಂಡವಾಳದಲ್ಲಿ ನಿರ್ಮಾಣಗೊಂಡಿದ್ದ ಆ ಚಿತ್ರ ಬಿಡುಗಡೆಯಾದ ನಾಲ್ಕೇ ತಿಂಗಳಲ್ಲಿ ಎರಡು ಕೋಟಿಯಷ್ಟು ಲಾಭ ಗಳಿಸಿತ್ತು.

## 2 ಕೋಟಿ ಲಾಭ!

ಅಂದರೆ ಹಾಕಿದ ಬಂಡವಾಳದ ಹತ್ತು ಪಟ್ಟು ಲಾಭ. ಇಡೀ ಚಿತ್ರದ ಜೀವಾಳವೇ ಶಕೀಲಾಳ ಮೈಮಾಟ. ಗುಂಡು ಮುಖ, ಸಿಲ್ಕ್ ಸ್ಮಿತಾಳಂತೆಯೇ ಮಾದಕ ಕಂಗಳು, ವಿಶಾಲ ಮೈಕಟ್ಟು, ದಘೂತಿಯಂತೆ, ಮಾಂಸದ ಮುದ್ದೆಯಂತೆ ಕಂಡರೂ ಅದನ್ನು ಮೀರಿದ ರತಿರೂಪ. ಯಾರೆಲ್ಲ ಸಿಲ್ಕ್ ಸ್ಮಿತಾಳ ಸೆಕ್ಸಿ ಇಮೇಜಿನಿಂದ 'ಬೋರ್' ಹೊಡೆಸಿಕೊಂಡಿದ್ದರೋ ಅವರೆಲ್ಲ ಶಕೀಲಾ ಮೈಮಾಟದ ಭಕ್ತರಾಗಿದ್ದರೆಂಬುದು ಕಿನ್ನರ ತಂಬಿಕ್ಕಳ್ ಚಿತ್ರದಿಂದ ಸಾಬೀತಾಗಿತ್ತು. ತಮಿಳು, ತೆಲುಗು, ಭೋಜ್‌ಪುರಿ, ಹಿಂದಿಗೂ ಡಬ್ ಆದ ಕಿನ್ನರ... ಚಿತ್ರದ ಶಕೀಲಾ ಮೈಮಾಟದಿಂದಾಗಿಯೇ ಚೈನೀಸ್, ನೇಪಾಳಿ ಮತ್ತು ಸಿಂಹಳಿ ಭಾಷೆಗಳಿಗೂ ಡಬ್ಬಾಗುವಂತಾಯ್ತು.

ಇದಕ್ಕೂ ಮುನ್ನ ಸಿಲ್ಕ್ ಸ್ಮಿತಾ ಮುಖ್ಯ ಪಾತ್ರದಲ್ಲಿದ್ದ 'ಪ್ಲೇ ಗರ್ಲ್ಸ್' ಎಂಬ ತಮಿಳು ಚಿತ್ರದ ಮೂಲಕ ಶಕೀಲಾ ಬಣ್ಣದ ಲೋಕಕ್ಕೆ ಕಾಲಿಟ್ಟಿದ್ದಳು. ಪ್ಲೇ ಗರ್ಲ್ಸ್ ಚಿತ್ರದಲ್ಲಿ ಆಕೆಯದು ಸಿಲ್ಕ್ ತಂಗಿಯ ಪಾತ್ರ. ಯಾರೋ ಮೇಕಪ್ ಮನ್ ಒಬ್ಬ ಶೂಟಿಂಗ್ ವೇಳೆ ಶಕೀಲಾಳನ್ನು ಕಂಡವನೇ 'ಸಿನಿಮಾದಲ್ಲಿ ಆಕ್ಟ್ ಮಾಡ್ತೀಯಾ' ಎಂದು ಉಡಾಫೆಯಿಂದ ಕೇಳಿದ್ದನ್ನೇ ಶಕೀಲ ಗಂಭೀರವಾಗಿ ಪರಿಗಣಿಸಿದ್ದಳು. ದಕ್ಷಿಣದ ಸೆಕ್ಸ್ ಡಾಲ್‌ಗಳೆಂದೇ ಪ್ರಸಿದ್ಧಿಯಾಗಿದ್ದ ಅನುರಾಧ, ಡಿಸ್ಕೋ ಶಾಂತಿ, ನೈಲೆಕ್ಸ್ ನಳಿನಿ, ಜಯಮಾಲಿನಿ, ಜ್ಯೋತಿಲಕ್ಷ್ಮಿ ಇತ್ಯಾದಿ ಕ್ಯಾಬರೆ ನರ್ತಕಿಯರ ಪರಂಪರೆಯನ್ನೇ ಶಕೀಲಾ ಮತ್ತಷ್ಟು ವ್ಯವಸ್ಥಿತವಾಗಿ ಮುಂದುವರೆಸಿದ್ದಳು.

ಕಿನ್ನರ ತಂಬಿಕ್ಕಳ್ ಎರಡು ಕೋಟಿಯ ಲಾಭ ಗಳಿಸಿದ್ದು ಸುದ್ದಿಯಾಗುವ ಹೊತ್ತಿಗೆ ದಿನವೊಂದಕ್ಕೆ ಶಕೀಲಾ ಪಡೆಯುತ್ತಿದ್ದ ಸಂಭಾವನೆ ಕೇವಲ 20 ಸಾವಿರ. ಯಾರೋ ನಿರ್ಮಾಪಕನೊಬ್ಬ ದಿನವೊಂದಕ್ಕೆ ನಾನು ಐವತ್ತು ಸಾವಿರ ಕೊಡ್ತೀನಿ ಎಂದು ದುಂಬಾಲು ಬಿದ್ದಾಗಲೇ ಆಕೆಗೆ ತಾನೆಂಥ ಬೇಡಿಕೆಯ ಸರಕೆಂದು ಅರ್ಥವಾಗಿತ್ತು. ಇದಕ್ಕೂ ಮುನ್ನ ಜಲ್ಲಿಕಟ್ಟು ಕಾಳೈ, ಮರುಮಲರ್ಚಿ, ಪೆಣ್ ಮನಸು ಇತ್ಯಾದಿ ತಮಿಳು ಚಿತ್ರಗಳಲ್ಲಾಕೆ ನಟಿಸಿದ್ದಳು. 2001 ರಲ್ಲಿ ತೆಲುಗಿನ ಅಗ್ನಿಪುತ್ರಿ ಬಿಡುಗಡೆಯಾಯ್ತು. ಆ ಹೊತ್ತಿಗೆ ಆಕೆಯ ಒಂದು ದಿನದ ಸಂಭಾವನೆ ಎರಡು ಲಕ್ಷಕ್ಕೇರಿತ್ತು.

2002ರಲ್ಲಿ ತೆಲುಗಿನ ತೊಟ್ಟಿ ಗ್ಯಾಂಗ್ಸ್, ಸೌಂದರ್ಯ ಲಹರಿ, 2003ರಲ್ಲಿ ತೆರೆಕಂಡ ತಮಿಳಿನ ಧೂಳ್, ತೆಲುಗಿನ ದೊಂಗಲು, ತಮಿಳಿನ ಜಯಂ, ತೆಲುಗಿನ ಪುಟ್ಟಂಟಿಕಿ ರಾ ಚೆಲ್ಲಿ, ದೂಪಟ್ಟೋ ದಡದಡಾ, ವಾದ್ಯಾರ್, 2006ರಲ್ಲಿ ತೆಲುಗಿನ ಬಂಗಾರಂ, 2007ರ ಆಳಗಿಯ ತಮಿಳ್ ಮಗನ್ ಮುಂತಾದ ಚಿತ್ರಗಳಲ್ಲಿ ಶಕೀಲಾಳ ದಿನವೊಂದರ ಸಂಭಾವನೆಯೇ ಎರಡು ಲಕ್ಷಕ್ಕೇರಿತ್ತು.

2007 ಆಕೆಯ ಪಾಲಿಗೆ ಸುವರ್ಣ ಗಳಿಗೆಯಾಗಿತ್ತು. ಯಾವ ಮಲೆಯಾಳದ ಸೂಪರ್ ಸ್ಟಾರ್ ಮೋಹನ್‌ಲಾಲ್ ಜೊತೆ ನಟಿಸಬೇಕೆಂಬುದು ಆಕೆಯ ಜೀವಮಾನದ ಕನಸಾಗಿತ್ತೋ ಅಕ್ಷರಶಃ ಅದು ಕೈಗೂಡಿತ್ತು. ಛೋಟಾ ಮುಂಬೈ ಎಂಬ ಮಲೆಯಾಳಿ ಚಿತ್ರದಲ್ಲಿ ಮೋಹನ್‌ಲಾಲ್ ಜೊತೆ ನಟಿಸುವ ಮೂಲಕ ಶಕೀಲಾಳ ಸ್ಟಾರ್ ಇಮೇಜ್ ಉತ್ತುಂಗಕ್ಕೇರಿತ್ತು. 2011 ರಲ್ಲಿ ತಮಿಳಿನಲ್ಲಿ ತೆರೆಕಂಡ ಗುರುಶಿಷ್ಯನ್, ಕೈ, ಮಲೆಯಾಳದ ತೇಜುಬಾಯ್ ಅಂಡ್ ಫ್ಯಾಮಿಲಿ, 2012 ರ ತಮಿಳಿನ ಆಸಾಮಿ; ಇತ್ಯಾದಿ ಚಿತ್ರಗಳೆಲ್ಲ ಶಕೀಲಾ ಕಾರಣಕ್ಕಾಗೇ ಸಾಕಷ್ಟು ದುಡ್ಡು ಬಾಚಿದ್ದವು.

ಇಂಥ ಚಿತ್ರಗಳಲ್ಲಿ ಆಕೆ ಪಡೆದ ಸಂಭಾವನೆಯನ್ನೇ ಲೆಕ್ಕಹಾಕಿದರೆ ಕಮ್ಮಿಯೆಂದರೂ ಅದೇ 15 ಕೋಟಿಯಷ್ಟಾಗಿತ್ತು, ಆಕೆಯ ಪಾಲಿಗದು ದೊಡ್ಡ ಮೊತ್ತ.

## ಆಖ್ರೀ ಗುಲಾಂ

ಅಷ್ಟಕ್ಕೂ ಶಕೀಲಾ ಅನುಕೂಲಸ್ಥ ಹಿನ್ನೆಲೆಯವಳೇನಲ್ಲ. ಮೂಲತಃ ಆಂಧ್ರದ ನೆಲ್ಲೂರು ಜಿಲ್ಲೆಯ ಬಾಚಿರೆಡ್ಡಿ ಪಾಲೇಮ್ ಎಂಬ ಕುಗ್ರಾಮದ ಬ್ಯಾರಿ ಮುಸ್ಲಿಂ ಕುಟುಂಬದವಳು ಶಕೀಲಾಳ ತಂದೆ 1980 ರ ಹೊತ್ತಿಗೆ ಉದ್ಯೋಗ ಹುಡುಕುತ್ತ ಚೆನ್ನೈಗೆ ವಲಸೆ ಬಂದರು. ಕೋಡಂಬಾಕಂನ ಲಿಬರ್ಟಿ ಥಿಯೇಟರ್ ಪಕ್ಕದ ಅಪಾರ್ಟ್‌ಮೆಂಟ್ ಒಂದರಲ್ಲಿ ತಿಂಗಳಿಗೆ 600 ರೂಪಾಯಿಗಳ ಬಾಡಿಗೆ ಮನೆಯೊಂದನ್ನು ಹಿಡಿದರು. ಕಿತ್ತು ತಿನ್ನುವ ಬಡತನ. ಮಕ್ಕಳಿನ್ನು ಬೆಳೆದು ದೊಡ್ಡವರಾಗಬೇಕೆನ್ನುವಷ್ಟರಲ್ಲೇ ತಂದೆ ಯಾವುದೋ ಕಾಯಿಲೆಗೆ ಸಿಲುಕಿ ಸತ್ತಾಗ ಶಕೀಲಾ ಹನ್ನೆರಡರ ಬಾಲಕಿ. ಅಸೀನಾ ಆಕೆಯ ಹುಟ್ಟು ಹೆಸರು. ಒಬ್ಬ ಅಣ್ಣ, ಒಬ್ಬ ಅಕ್ಕ ಮತ್ತು ಒಬ್ಬ ತಮ್ಮ ಹೀಗೆ ನಾಲ್ವರು ಮಕ್ಕಳ ಆ ಕುಟುಂಬದಲ್ಲಿ ಮೂರನೆಯವಳಾಗಿ ಜನಿಸಿದ ಶಕೀಲಾಳ ಪಾಲಿಗೆ ಸರ್ವಸ್ವವೂ ಆಗಿದ್ದದ್ದು ಆಕೆಯ ತಾಯಿಯೇ.

ಮನೆಗೆಲಸ ಮಾಡಿ ತನ್ನ ನಾಲ್ವರೂ ಮಕ್ಕಳನ್ನು ಓದಿಸಿ ಬೆಳೆಸಿದ ತಾಯಿಯ ಅದೃಷ್ಟವೋ ಎಂಬಂತೆ ತೇಜುಬಾಯ್ ಎಂಬ ಮುಂಬಯಿಯ ಮಾರ್ವಾಡಿಯೊಬ್ಬನ ಬಳಿ ಆಗಾಗ ಸಾಲ ಪಡೆಯುತ್ತಿದ್ದದ್ದು ಶಕೀಲಾಳ ಬದುಕಿನ ದಿಕ್ಕನ್ನೇ ಬದಲಾಯಿಸಿತ್ತು. ವಯಸ್ಸು ಹದಿನಾಲ್ಕಾಗುವ ಹೊತ್ತಿಗೆ ಮೈಕೈ ತುಂಬಿಕೊಂಡ ಅಸೀನಾ ತನ್ನ ವಯಸ್ಸಿಗೂ ಮೀರಿದ ರತಿಯಂತಿದ್ದಳು. ಮೊದಲೇ 'ಪ್ಲೇ ಗರ್ಲ್ಸ್' ಚಿತ್ರದ

## ಹಿಂದೂವಾಗಿ ಬದಲಾದರೂ ವಿಧಿ ಬದಲಾಗಲಿಲ್ಲ!

2012 ರ ಫೆಬ್ರವರಿಯಲ್ಲಿ ತಮಿಳುನಾಡಿನ ವಿಲ್ಲುಪುರಂ ಜಿಲ್ಲೆಯ ಮೇಲ್ ಮಲೆಯಾನೂರ್ ಎಂಬ ಊರಿನಲ್ಲೊಂದು ವಿಚಿತ್ರ ಪ್ರಸಂಗ ನಡೆಯಿತು. ಅದು ಆ ಊರಿನ ಖ್ಯಾತ ಅಂಗಾಳ ಪರಮೇಶ್ವರಿ ದೇವಸ್ಥಾನಕ್ಕೆ ಸೆಕ್ಸಿ ನಟಿ ಶಕೀಲ ಕೊಟ್ಟ ಭೇಟಿ. ತನ್ನ ಪತಿ ಸುಜಿಬಾಲನ ಜೊತೆ ಮೇಲ್‌ಮಲೆಯಾನೂರ್‌ನ ಅಂಗಾಳ ಪರಮೇಶ್ವರಿ ದೇವಸ್ಥಾನಕ್ಕೆ ಶಕೀಲ ಬರುತ್ತಿದ್ದಾಳೆಂಬ ಸುದ್ದಿ ಅದ್ಹೇಗೆ ಪ್ರಚಾರಾಯಿತೋ ಗೊತ್ತಿಲ್ಲ.

ದೇವಿಯ ದರ್ಶನಕ್ಕಿಂತಲೂ ಪೂಜೆಗೆಂದು ಬಂದ ಶಕೀಲಳನ್ನು ನೋಡಲೆಂದೇ ಸಹಸ್ರಾರು ಮಂದಿ ಅಂಗಾಳ ಪರಮೇಶ್ವರಿ ದೇವಸ್ಥಾನದ ಸುತ್ತ ಜಮಾಯಿಸಿಬಿಟ್ಟರು. ಪತಿ ಜೊತೆ ಶಕೀಲ ಬಂದಿದ್ದೇ ತಡ ಏಕಾಏಕಿ ಜನ ಮುತ್ತಿಕೊಂಡರು. ಮೊದಲೇ ಇದರ ಸುಳಿವು ದೊರೆತಿದ್ದ ಪೊಲೀಸರೂ ನೂರಾರು ಸಂಖ್ಯೆಯಲ್ಲಿ ಸಜ್ಜಾಗಿದ್ದರು. ಜನ ಶಕೀಲಾಳನ್ನು ಮುತ್ತಿಕೊಂಡಿದ್ದೇ ತಡ, ನುಗ್ಗಿ ಬಂದ ಪೊಲೀಸರು ಲಾಠಿಚಾರ್ಜ್ ಮಾಡಿಬಿಟ್ಟರು. ಪೊಲೀಸರು ಮತ್ತು ಶಕೀಲಾ ರಸಿಕರ ನಡುವೆ ಬೀದಿ ಕಾಳಗವೇ ನಡೆದುಹೋಯ್ತು.

ಕೊನೆಗೂ ಪೊಲೀಸ್ ಬಂದೋಬಸ್ತಿನಲ್ಲಿ ಅಂಗಾಳ ಪರಮೇಶ್ವರಿಗೆ ಪೂಜೆ ಸಲ್ಲಿಸಿದ ಶಕೀಲ ಮರುದಿನದ ಹೊತ್ತಿಗೆ ತಮಿಳುನಾಡಿನ ಬಹುತೇಕ ಪತ್ರಿಕೆಗಳಲ್ಲಿ ಮುಖಪುಟದ ಸುದ್ದಿಯಾಗಿದ್ದಳು.

ಹಕೀಕತ್ತೇನೆಂದರೆ ತಾನು ಅಂಗಾಳ ಪರಮೇಶ್ವರಿಯ ಪೂಜೆಗೆ ಬಂದಿದ್ದು ದೊಡ್ಡ ಸುದ್ದಿಯಾಗಲೆಂದೇ ಶಕೀಲ ಇಂಥದೊಂದು ಗಿಮ್ಮಿಕ್‌ಗೆ ಕೈಯಿಟ್ಟಿದ್ದಳು. ತನ್ನ ಪರಮಾಪ್ತ ಸಿನಿಮಾ ಪತ್ರಕರ್ತನೊಬ್ಬನ ಮೂಲಕ ಮೊದಲೇ ಸುದ್ದಿ ಹಬ್ಬಿಸಿ ಸಹಸ್ರಾರು ಜನ ಜಮಾಯಿಸುವಂತೆ ಮಾಡಿದ್ದ ಆಕೆಯ ಉದ್ದೇಶವಿಷ್ಟೆ. ತಾನು ಹಿಂದೂ ಧರ್ಮಕ್ಕೆ ಮತಾಂತರವಾಗಿದ್ದು, ಹಿಂದೂ ಪತಿಯನ್ನು ವಿವಾಹವಾಗಿ ಹಿಂದೂ ಸಂಪ್ರದಾಯ ಪಾಲಿಸುತ್ತಿದ್ದೇನೆಂದು ಸುದ್ದಿಯಾಗಬೇಕೆಂಬುದು ಆಕೆಯ ಬಯಕೆಯಾಗಿತ್ತು, ಆ ಮೂಲಕ ತನ್ನನ್ನು ಮತ್ತಷ್ಟು ಜನ ಪ್ರೀತಿಸುತ್ತಾರೆಂದೇ ಲೆಕ್ಕ ಹಾಕಿದ್ದಳು. ಈ ವಿಷಯದಲ್ಲಿ ತಮಿಳುನಟಿ ಖುಷ್ಬೂಳನ್ನು ಆಕೆ ಅನುಕರಿಸಲೆತ್ನಿಸಿದ್ದಳು.

ಆದರೆ ಧನಪಿಶಾಚಿ ಗಂಡನಿಗೆ ತನ್ನ ಶೋಕಿ ಮತ್ತು ಆಕೆಯ ಕೋಟಿ ಲೆಕ್ಕದ ಗಂಟಷ್ಟೇ ಮುಖ್ಯವಾಗಿತ್ತೇ ಹೊರತು ಆಕೆಯ ಪ್ರೀತಿಯಾಗಲಿ, ಆ ಕಾರಣದಿಂದ ಆಕೆ ಹಿಂದೂವಾಗಿದ್ದಾಗಲಿ ಅರ್ಥವಾಗಲೇ ಇಲ್ಲ. ಶಕೀಲಾ ಬದುಕಿನ ವಿಧಿವಿಕಟದ ಮುಂದೆ ದೇವರು, ಧರ್ಮ ಯಾವುದೂ ಪ್ರಯೋಜನಕ್ಕೆ ಬರಲಿಲ್ಲ.

ಸಿಲ್ಕ್ ಜೊತೆ ಅಭಿನಯಿಸಿದ್ದ ಅನುಭವವಿತ್ತಲ್ಲ; ಮಾರ್ವಾಡಿ ತೇಜುಭಾಯಿ ಅದೊಂದು ದಿನ 'ಹಿಂದಿಮೇ ಕಾಮ್ ಕರೇಂಗಿ ಕ್ಯಾ.....' ಎಂದು ಕೇಳಿಬಿಟ್ಟ. ಅದು 1989 ರ ಕಾಲ. 'ಅಬ್ಬೀ ಗುಲಾಂ' ಎಂಬ ಹಿಂದಿ ಚಿತ್ರದಲ್ಲಿ ಹೀರೋಯಿನ್ನಾಗಿ ನಟಿಸಿದಳಾದರೂ ಬಾಲಿವುಡ್ ಜಾಯಮಾನಕ್ಕೆ ಶಕೀಲಾಳ ಮೈಮಾಟ ಒಗ್ಗುತ್ತಿರಲಿಲ್ಲ. ತೇಜುಭಾಯಿಯ ಬೆಂಬಲ ಇದ್ದೂನಿದ್ದೂ ಕೇವಲ ಒಂದು ಚಿತ್ರಕ್ಕಷ್ಟೇ ಸೀಮಿತಗೊಂಡಿತ್ತು.

ಮುಂಬಯಿಯಿಂದ ಮತ್ತೆ ಚೆನ್ನೈಗೆ ವಾಪಸ್ಸಾದ ಶಕೀಲ 1994 ರಲ್ಲಿ 'ಜಲ್ಲಿಕಟ್ಟು ಕಾಳೈ' ಎಂಬ ತಮಿಳು ಚಿತ್ರದಲ್ಲಿ ಎರಡನೇ ನಾಯಕಿಯಾಗುವ ಮೂಲಕ ತಾನು ಸಿಲ್ಕ್ ಉತ್ತರಾಧಿಕಾರಿಯೆಂಬ ಸುಳಿವು ನೀಡಿದ್ದಳು. ದೇಹವೇ ಆಸ್ತಿ, ಎದೆಯೇ ನಿಧಿ, ಕೊಲ್ಲುವ ಕಂಗಳು, ವಿಶಾಲ ಭುಜ, ತೀಳಿಮಾಡಿಸಿದಂತಿದ್ದ ಕಾಲುಗಳು; ಒಟ್ಟಿನಲ್ಲಿ ಮಲೆಯಾಳಿ ರಸಿಕರಿಗೆ ಏನೇನು ಬೇಕೋ ಎಲ್ಲವೂ ಆಕೆಯಲ್ಲಿತ್ತು. ಮಲೆಯಾಳದಲ್ಲಿ ಮಮ್ಮುಟ್ಟಿ ಮತ್ತು ಮೋಹನ್ ಲಾಲ್‌ಗಿಂತಲೂ ಮೊದಲು ಸೂಪರ್ ಸ್ಟಾರ್ ಆಗಿದ್ದವನು ಜಯನ್. ಪ್ರೇಮ್ ನಜೀರ್ ಕೇರಳ ಕಂಡ ಮೊದಲ ಸೂಪರ್ ಸ್ಟಾರಾದರೆ ಅಂಥಾ ಪ್ರೇಮ್ ನಜೀರ್‌ನನ್ನೇ ಹಿಂದಿಕ್ಕಿ ಮಿಂಚಲಾರಂಭಿಸಿದ್ದ ಜಯನ್‌ಗೆ ತಕ್ಕ ಜೋಡಿ ಎನ್ನಿಸಿಕೊಂಡ ಸೀಮಾಳ 'ಅವಳ ರಾತ್ರಿಗಳು' ಪಾತ್ರವನ್ನೇ ಶಕೀಲ ಹೋಲುತ್ತಿದ್ದಳು.

## ಬೀದಿಗಿಳಿದ ಸಂಘಟನೆಗಳು

ಕೆಲವೊಮ್ಮೆ ಸೀಮಾಳ ಹಾಗೆ, ಮೈಮಾಟದಲ್ಲಿ ಜ್ಯೋತಿಲಕ್ಷ್ಮಿಯ ಹಾಗೆ ಕಾಣುತ್ತಿದ್ದ ಶಕೀಲ, ಮೋಹನ್‌ಲಾಲ್ ಮತ್ತು ಮಮ್ಮುಟ್ಟಿಗೆ ಪರ್ಯಾಯವಾಗಿ ಬೆಳೆದು ನಿಂತದ್ದು ಮಲೆಯಾಳಿ ಬಾಕ್ಸ್ ಆಫೀಸ್ ಮಟ್ಟಿಗೆ ಕಾಮದೇವತೆಯೂ ಹೌದು ದುಡ್ಡಿನ ದೇವತೆಯೂ ಕೂಡ!

ಶಕೀಲಾಳ ಪ್ರತಿಯೊಂದು ಚಿತ್ರವೂ ತಮಿಳು ಮತ್ತು ತೆಲುಗಿಗೆ ಡಬ್ಬಾಗತೊಡಗಿದವು. ಹಾಗೆ ತಮಿಳಿನಲ್ಲಿ ಅಥವಾ ತೆಲುಗಿನಲ್ಲಿ ಬಂದ ಆಕೆಯ ಚಿತ್ರಗಳಿಗೂ ಮಲೆಯಾಳದಲ್ಲಿ ಬೇಡಿಕೆಯಿರುತ್ತಿತ್ತು. 2005 ರ ಹೊತ್ತಿಗೆ ಸಿಲ್ಕ್ ಬೇರೆ ಆತ್ಮಹತ್ಯೆ ಮಾಡಿಕೊಂಡಿದ್ದಳಲ್ಲ, ಶಕೀಲ ಅಕ್ಷರಶಃ ಸಿಲ್ಕ್ ವಾರಸುದಾರಳಂತೆ ಮೆರೆದಳು. 'ಬಿ' ಮತ್ತು 'ಸಿ' ಸೆಂಟರುಗಳಲ್ಲಿ ಆಕೆಯದೊಂದು ವಾಲ್‌ಪೋಸ್ಟರ್ ಬಿದ್ದರೆ ಸಾಕು ಜನ ಕಿಕ್ಕಿರಿದು ಮುಗಿಬೀಳುತ್ತಿದ್ದರು. ಕೇರಳದ ಹಲವೆಡೆ ಆಕೆಯ ಚಿತ್ರಗಳನ್ನು ನಿಷೇಧಿಸುವಂತೆ ಸಂಪ್ರದಾಯವಾದಿ ಸಂಘಟನೆಗಳು ಪ್ರತಿಭಟನೆಗಿಳಿದವು. ಮುಸ್ಲಿಂ ಮೂಲಭೂತವಾದಿಗಳಂತೂ ಫತ್ವಾ ಹೊರಡಿಸಬೇಕೆಂದು ಬೊಬ್ಬೆ ಹಾಕತೊಡಗಿದರು. 2004 ರಲ್ಲಿ ತಮಿಳುನಾಡಿನ ತಿರುನೆಲ್ವೇಲಿಯ ಕೋರ್ಟಿನಲ್ಲಿ ಆಕೆ ಅತೀ ಅಶ್ಲೀಲವಾಗಿ ನಟಿಸುತ್ತಾಳೆಂದೂ ತನ್ನ ಅಂಗಾಂಗಗಳನ್ನು ಬಿಚ್ಚಿಡುವ ಮೂಲಕ ಯುವ ಜನಾಂಗವನ್ನು ಹಾಳು ಮಾಡುತ್ತಿದ್ದಾಳೆಂದೂ ಆರೋಪಿಸಿ ತಮಿಳು ಸಂಘಟನೆಯೊಂದು ಮೊಕದ್ದಮೆ ದಾಖಲಿಸಿತು.

ತಮಾಷೆಯೆಂದರೆ ಕೇಸಿನ ವಿಚಾರಣೆಗೆಂದು ಶಕೀಲ ತಿರುನೆಲ್ವೇಲಿ ಕೋರ್ಟಿಗೆ ಬರುತ್ತಿದ್ದಾಳೆಂಬ ಸುದ್ದಿ ಕೇಳಿಯೇ ಸಹಸ್ರಾರು ಮಂದಿ ಅಭಿಮಾನಿಗಳು ಕೋರ್ಟ್ ಸುತ್ತ ಕಿಕ್ಕಿರಿದಿದ್ದರು. ಸುತ್ತಮುತ್ತಲ ಅಷ್ಟೂ ರಸ್ತೆಗಳೆಲ್ಲ ಶಕೀಲಳ ಅಭಿಮಾನಿಗಳಿಂದ ತುಂಬಿಹೋಗಿ ಎಂಥಾ ಟ್ರಾಫಿಕ್ ಜಾಮ್ ಎಂದರೆ ವಿಚಾರಣೆಗೆಂದು ಕೋರ್ಟಿಗೆ ಬರಬೇಕಿದ್ದ ನ್ಯಾಯಾಧೀಶರೇ ಕಾರಿಳಿದು ಫರ್ಲಾಂಗ್ ದೂರ ನಡೆದೇಬಂದರೂ ಕೋರ್ಟ್ ಆವರಣವನ್ನು ಹೊಕ್ಕುವುದು ಕಷ್ಟವಾಯ್ತು!

ಅಭಿಮಾನಿಗಳ ಲಗ್ಗೆ ನೋಡಿಯೇ ರೋಸತ್ತ ತಿರುನೆಲ್ವೇಲಿ ಕೋರ್ಟು ಒಂದೇ ಹಿಯರಿಂಗ್‌ಗೆ ಪ್ರಕರಣವನ್ನೇ ವಜಾಗೊಳಿಸಿತ್ತು. ಅದು ತಮಿಳುನಾಡು ಮತ್ತು ಕೇರಳಗಳಲ್ಲಿ ಶಕೀಲಾ ಎಬ್ಬಿಸಿದ್ದ ಬಿರುಗಾಳಿಯ ಪ್ರತೀಕವಾಗಿತ್ತು. ಆದರೆ ಆಕೆಯ ಖಾಸಗಿ ಬದುಕು ಕೂಡ ಬಿರುಗಾಳಿಗೆ ಸಿಲುಕಿತ್ತು. ಇದ್ದೊಬ್ಬ ಅಣ್ಣ ಕುಡಿತಕ್ಕೆ ಬಿದ್ದು ಹಾಸಿಗೆ ಹಿಡಿದವನು ಕುಡಿಕುಡಿದೇ ಸತ್ತು ಹೋದ. ಕೊನೇ ತಮ್ಮ ಸಲೀಮ್ ಅಕ್ಕನ ದುಡಿಮೆಯ ಒಂದು ಪಾಲಿನ ಮೊತ್ತ ನಾಪತ್ತೆಯಾದವನು ಯಾರೋ ಹೆಂಗಸೊಬ್ಬಳ ಸಹವಾಸಕ್ಕೆ ಸಿಲುಕಿ ಪ್ರತ್ಯೇಕ ಮನೆ ಮಾಡಿ ದೂರಾದ. ಉಳಿದದ್ದು ತಾಯಿ ಮತ್ತು ಅಕ್ಕ ಮಾತ್ರ.

## ಮದುವೆಗೊಂದು ಗಂಡು ಬೇಕು!

ಅಪ್ಪಿಲ್ಲಾ ಕಷ್ಟಪಟ್ಟು ತನ್ನನ್ನು ಸಾಕಿ ಬೆಳೆಸಿದ ತಾಯಿಯನ್ನು ಸಂತೋಷವಾಗಿಡುವುದೊಂದೇ ಬದುಕಿನ ಉದ್ದೇಶವಾಗಿಸಿಕೊಂಡಿದ್ದ ಶಕೀಲಾ ಕೊನೆತನಕ ತಾಯಿಯನ್ನು ಜೊತೆಯಾಗೇ ಇರಿಸಿದ್ದಳು. ಹಾಗಂತ ದುಡ್ಡೊಂದೇ ನೆಮ್ಮದಿ ನೀಡುವುದಿಲ್ಲವಲ್ಲ, ಮಲೆಯಾಳದ ಉದಯೋನ್ಮುಖ ಡೈರೆಕ್ಟರ್ ಒಬ್ಬನನ್ನು ಅತಿಯಾಗಿ ಪ್ರೀತಿಸುತ್ತಿದ್ದ ಶಕೀಲಾ ಆತನ ಪಾಲಿಗೆ ತಾನು ಕೇವಲ ಭೋಗವಸ್ತು ಎಂದು ಗೊತ್ತಾದ್ದೇ ಕೈ ಕುಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು ತಾಯಿಯ ಪಾಲಿಗೆ ದೊಡ್ಡ ಆಘಾತವಾಗಿತ್ತು. ತಮಿಳಿನ ನಿರ್ಮಾಪಕನೊಬ್ಬ ಮದುವೆಯಾಗುತ್ತೇನೆಂದು ನಂಬಿಸಿಯೇ ಮೂರು ಚಿತ್ರಗಳಿಗೆ ಬಿಟ್ಟಿ ಕಾಲ್‌ಶೀಟ್ ಪಡೆದು ವಂಚಿಸಿದ್ದ. ಕೇರಳದ ಮುಸ್ಲಿಂ ಹುಡುಗರ ಪೈಕಿ ಯಾರು ತಾನೇ ಗೊತ್ತಿದ್ದೂ ಆಕೆಯನ್ನು ಮದುವೆಯಾಗಲು ಸಾಧ್ಯ?

ಆಕೆಯ ಹತಾಶೆ ಯಾವ ಅತಿರೇಕಕ್ಕೆ ಹೋಯಿತೆಂದರೆ 'ತನ್ನನ್ನು ಯಾರೇ ಗಂಡಸು ಪ್ರೀತಿಸಿ ಮದುವೆಯಾಗುವುದಾದರೆ ತಾನು ಜೀವನಪೂರ್ತಿ ಆತನ ಸೇವೆ ಮಾಡಿಕೊಂಡು ಇದ್ದುಬಿಡುತ್ತೇನೆ. ಸಿನಿಮಾಗಳಲ್ಲಿ ಅಶ್ಲೀಲ ಪಾತ್ರ ಮಾಡುವುದನ್ನೇ ನಿಲ್ಲಿಸುತ್ತೇನೆ. ಯಾರೇ ನನ್ನ ಅಭಿಮಾನಿಗಳು ನನಗೆ ಗಂಡನಾಗಿ ಬರುವುದಾದರೆ ಅದಕ್ಕೂ ಸಿದ್ಧ.....!' ಎಂದೆಲ್ಲ ಬಹಿರಂಗವಾಗಿ ಹೇಳಿಕೆ ಕೊಟ್ಟಳು. ಶಕೀಲಾ ನೀಡಿದ ಈ ಹೇಳಿಕೆ ಕೇರಳ, ತಮಿಳುನಾಡಿನ ಬಹುತೇಕ ಪತ್ರಿಕೆಗಳಲ್ಲಿ ಸುದ್ದಿಯಾಯಿತಾದರೂ ಗಂಡನಾಗಲು ಮಾತ್ರ ಯಾರೂ ಸಿದ್ಧರಾಗಲೇ ಇಲ್ಲ!

ಹಾಗಂತ ಸಿಕ್ಕಸಿಕ್ಕವರನ್ನು ಮದುವೆಯಾಗುವುದು ಸಾಧ್ಯವಿಲ್ಲ. ಅದೂ ಶಕೀಲಳಂಥ ಜನಪ್ರಿಯ ನಟಿಗೆ ಹಾದಿಬೀದಿಯ 'ಪುರುಷ' ಸಹ್ಯವಾಗಬೇಕಲ್ಲ. ಕೊನೆಗೂ ಬಯಸಿದ ಗಂಡು ಆಕೆಗೆ ಸಿಗಲೇ ಇಲ್ಲ. ಪ್ರತಿಯೊಬ್ಬರೂ ಕಾಮದ ಕಣ್ಣಿನಿಂದ ನೋಡುತ್ತಿದ್ದರೇ ಹೊರತು ಬದುಕಿನ ವಿಷಯದಲ್ಲಿ ಬೇರೆಯದೇ ಯೋಚನೆ ಮಾಡುತ್ತಿದ್ದರು. ಶಕೀಲ ಏನಿದ್ದರೂ ಹಾಸಿಗೆಯ ಸರಕಷ್ಟೆ. ಹೆಂಡತಿಯಾಗಲ್ಲ!

ಇದು ಆಕೆಯ ಅಂತಃಸ್ಸತ್ವವನ್ನೇ ಅಲ್ಲಾಡಿಸಿ ಹಾಕಿತ್ತು. ವಯಸ್ಸು ಬೇರೆ ಮೀರುತ್ತಿತ್ತು. ಪ್ರಾರಂಭದ ಮೈಮಾಟವೂ ಬದಲಾಗತೊಡಗಿತ್ತು. ಕಟ್ಟುಮಸ್ತಾಗಿದ್ದ ಆಕಾರ ಕಾಲಕ್ರಮೇಣ ಬೊಜ್ಜಿನಂತಾಯಿತು. ಬರುಬರುತ್ತ ಮಾಂಸದ ಮುದ್ದೆಯಂತಾದಳು. ಹಿಂದೆಲ್ಲ ಹೀರೋಯಿನ್ನಾಗಿ ನಟಿಸುತ್ತಿದ್ದವಳಿಗೆ ಅವಕಾಶಗಳು ಕ್ಷೀಣಿಸತೊಡಗಿದವು. ಪ್ರೇಕ್ಷಕನಿಗೆ ಶಕೀಲ ಹಳೆಯದಂತಾಗಿದ್ದಳು. ಹಾಗಂತ ದುಡ್ಡು ದುಡಿಯಬೇಕಲ್ಲ. ವಯಸ್ಸಿಗೆ ತಕ್ಕಂತ ಹಾಸ್ಯದ ಪಾತ್ರಗಳನ್ನು ಒಪ್ಪಿಕೊಳ್ಳತೊಡಗಿದಳು. ಒಮ್ಮೆ ಹಾಸ್ಯದ ಪಾರ್ಟೋ ಸಣ್ಣಪುಟ್ಟ ಜೋಕರ್ ರೋಲುಗಳನ್ನೋ ಮಾಡಿದಳೆಂದರೆ ಮತ್ತೆ ವಾಪಸ್ಸು ಬರುವಂತಿಲ್ಲ ಎಂಬ ಕಟುವಾಸ್ತವವನ್ನು ಆಕೆ ಅರಿಯಲೇ ಇಲ್ಲ.

ಇಂಥ ಕುಸಿತದ ನಡುವೆಯೇ ಶಕೀಲಳ ಬದುಕಿನಲ್ಲಿ ಬರಸಿಡಿಲು ಬಡಿದಂತೆ ಆಕೆಯ ತಾಯಿ ತೀರಿಕೊಂಡಳು. ಅದೂ ಕೊರಗಿಗೆ ಬಿದ್ದು ಸತ್ತ ಸಾವಾಗಿತ್ತು. ಶಕೀಲಳ ಖಾಸಗಿ ಬದುಕಿನಲ್ಲಿ ಇದ್ದ ಏಕೈಕ ಭರವಸೆಯೆಂದರೆ ಅದು ತಾಯಿ. ಇನ್ನೇನು ತಾಯಿಯೇ ಕಣ್ಮರೆಯಾದ ಮೇಲೆ ಆಕೆಯ ಕಟ್ಟಕಡೆಯ ಆಸೆಯಾದ ತನ್ನ ಮದುವೆಯನ್ನು ಮುಗಿಸಿಕೊಳ್ಳಬೇಕೆಂದು ಶಕೀಲ ಆಶ್ರಯಿಸಿದ್ದು ಸುಜಿಬಾಲ ಎಂಬ ಚೆನ್ನೈನ ಶೋಕಿಲಾಲನನ್ನು.

## ಶೋಕಿಲಾಲ ಗಂಡ

ಸುಜಿಬಾಲ ನಲವತ್ತರ ಆಸುಪಾಸಿನ ಚೆನ್ನೈನ ಶ್ರೀಮಂತ. ಜಾತಿಯಲ್ಲಿ ಹಿಂದೂ. ರಿಯಲ್ ಎಸ್ಟೇಟ್ ವ್ಯವಹಾರವಿತ್ತು. ಕೈಗಾರಿಕೆಯೊಂದರ ಒಡೆಯನೂ ಹೌದು. ಆದರೆ ಶೋಕಿಲಾಲ. ಆ ಕಾಲದಿಂದಲೂ ಕದ್ದೂಮುಚ್ಚಿ ಶಕೀಲಾ ಜೊತೆ ಸುತ್ತಾಡುತ್ತಿದ್ದ. ಚೆನ್ನೈ ಬೀದಿಗಳಲ್ಲಿ ಬುರ್ಖಾ ಹಾಕಿಕೊಂಡು ಶಕೀಲಾ ಸುಜಿಬಾಲನ ಜೊತೆ ಓಡಾಡುತ್ತಿದ್ದ ಗಾಸಿಪ್ಪುಗಳಿದ್ದವು. ಇದೇ ಕಾರಣಕ್ಕೆ ಆತನ ಪತ್ನಿ ಡೈವೋರ್ಸ್ ಕೊಟ್ಟಿದ್ದಳು. ಹಾಗಂತ ಸುಜಿಬಾಲ ಕೇವಲ ಶಕೀಲಳನ್ನಷ್ಟೇ ನಂಬಿ ಕೂತಿರಲಿಲ್ಲ. ಇನ್ನೂ ಅನೇಕ ಹೆಂಗಸರೊಂದಿಗೆ ಆತನಿಗೆ ಒಡನಾಟವಿತ್ತು.

ಯಾವತ್ತು ಇದೊಬ್ಬ ತಾಯಿಯೇ ಕೊನೆಯುಸಿರೆಳೆದಳೋ ಆಕೆಯ ಕೊನೆಯಾಸೆ ಪೂರೈಸುವ ಅವಸರಕ್ಕೆ ಬಿದ್ದ ಶಕೀಲ ತನ್ನನ್ನು ಮದುವೆಯಾಗುವಂತೆ ಸುಜಿಬಾಲನಿಗೆ ದುಂಬಾಲು ಬಿದ್ದಳು. ಹೇಗೂ ಕೋಟಿಗಟ್ಟಲೆ ದುಡ್ಡಿದೆ. ಹೆಸರಾಂತ ನಟಿ ಬೇರೆ. ನಾಮಕಾವಸ್ತೆಗೊಂದು ತಾಳಿಕಟ್ಟಿ ಮನೆಯಲ್ಲಿ ಬಿದ್ದಿರುವಂತೆ ಮಾಡಿಬಿಟ್ಟರೆ ಆಸ್ತಿಯೂ ಬಂದಂತಾಯ್ತು. ಆಕೆಯ ದುಡ್ಡಲ್ಲಿ ಶೋಕಿಯನ್ನೂ ಮಾಡಿದಂತಾಯ್ತು ಎಂಬುದು ಆತನ ಲೆಕ್ಕಾಚಾರವಾಗಿತ್ತು. ಇದ್ಯಾವುದರ ಪರಿವೆಯಿಲ್ಲದ ಶಕೀಲ ಅವಸರಕ್ಕೆ ಬಿದ್ದು ಸುಜಿಬಾಲನ ಜೊತೆ ಮದುವೆಯಾಗುತ್ತೇನೆಂದು ಘೋಷಿಸಿಬಿಟ್ಟಳು. 2010 ರಲ್ಲಿ ಮದುವೆಯೂ ನಡೆಯಿತು. ಅದೇ ಹೊತ್ತಿಗೆ ಮತ್ತೊಂದು ದುರಂತ ಸಂಭವಿಸಿತ್ತು.

ಅದು ಆಕೆ ಜೀವನಪೂರ್ತಿ ದುಡಿದಿಟ್ಟದ್ದನ್ನು ಆಕೆಯ ಅಕ್ಕನೇ ಲಪಟಾಯಿಸಿದ್ದು!

ಹೆಚ್ಚೂಕಮ್ಮಿ 160 ಸಿನಿಮಾಗಳಲ್ಲಿ ಬಿಡುವಿಲ್ಲದೆ ದುಡಿದು ಗಳಿಸಿದ್ದ ಕೋಟಿಗಟ್ಟಲೇ ಹಣವನ್ನು ಹೇಗೆ ಬಳಸಬೇಕೆಂಬ ವ್ಯವಹಾರಜ್ಞಾನವೇ ಆಕೆಗಿರಲಿಲ್ಲ. ಸಾಲದ್ದಕ್ಕೆ ಆಕೆಯ ಅಕ್ಕ ನಿನ್ನ ಮೇಲೆ ಇನ್‌ಕಮ್ ಟ್ಯಾಕ್ಸ್ ದಾಳಿಯಾಗುತ್ತದೆ, ಹಣವನ್ನೆಲ್ಲ ಆದಾಯ ತೆರಿಗೆ ಅಧಿಕಾರಿಗಳು ಹೊತ್ತೊಯ್ಯುತ್ತಾರೆ ಎಂದು ಪದೇಪದೇ ಹೆದರಿಸುತ್ತಿದ್ದಳು. ಹೆಚ್ಚೂಕಮ್ಮಿ ಹತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಶಕೀಲ ತನ್ನ ಅಕ್ಕನ ಬಳಿ ಜೋಪಾನ ಮಾಡಿದ್ದಳು. ತಾನು ಕೇಳಿದಾಗ ಅಕ್ಕ ಅದನ್ನು ವಾಪಸ್ಸು ಮಾಡುತ್ತಾಳೆಂಬ ಆಕೆಯ ನಂಬಿಕೆ ಸುಜಿಬಾಲನನ್ನು ಮದುವೆಯಾದ ಒಂದೇ ವರ್ಷಕ್ಕೆ ಹುಸಿಯಾಗಿತ್ತು.

## ಅಕ್ಕನ ದೋಖಾ

ಗಳಿಕೆಯ ದುಡ್ಡೆಲ್ಲ ಎಲ್ಲಿ ಸುಜಿಬಾಲನ ಪಾಲಾಗುತ್ತೋ ಎಂದು ಹೆದರಿದ ಅಕ್ಕ ಅಷ್ಟೂ ದುಡ್ಡನ್ನು ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಹೊತ್ತೊಯ್ದರೆಂದು ಕತೆ ಕಟ್ಟಿದಳು. ಒಡಹುಟ್ಟಿದ ಅಕ್ಕನೇ ದೋಖಾ ಮಾಡಿದ ಮೇಲೆ ಉಳಿದದ್ದಾದರೂ ಏನು? ಶಕೀಲ ಅಕ್ಷರಶಃ ಬರಿಗೈ ದಾಸಿಯಂತಾದಳು. ಇನ್ನು ದುಡ್ಡಿನ ಆಸೆಯಿಟ್ಟೇ ಮದುವೆಯ ನಾಟಕವಾಡಿದ್ದ ಸುಜಿಬಾಲ ಗಂಟು ಹೊಡೆಯಲು ಸಾಧ್ಯವಿಲ್ಲ ಎಂದು ಗೊತ್ತಾದದ್ದೇ ತಡ ಶಕೀಲಾಳನ್ನು ಮನೆಗೆಲಸದವಳಿಗಿಂತ ಕೀಳಾಗಿ ನಡೆಸಿಕೊಂಡ. ಬೇರೆಬೇರೆ ಹೆಂಗಸರ ಜೊತೆ ಬಹಿರಂಗವಾಗೇ ಚಕ್ಕಂದಕ್ಕಿಳಿದ. ಅಲ್ಲಿಗೆ ಮದುವೆಯೂ ಮುರಿದುಬಿತ್ತು. ಜೀವನವಿಡೀ ದುಡಿದದ್ದೂ ಮಣ್ಣುಪಾಲಾಗಿತ್ತು. ಅತ್ತ ಗಂಡನಿಗೂ ಸಲ್ಲದೆ, ಇತ್ತ ಸಂಬಂಧಿಕರೂ ಇಲ್ಲದೆ ಖಾಲಿ ಕೈ ಹೊತ್ತು ತನ್ನ ತಂದೆಯಿದ್ದ ಕೋಡಂಬಾಕಂನ ಹಳೆಯ ಫ್ಲಾಟಿಗೆ ಮರಳಿದ ಶಕೀಲಳ ಪಾಲಿಗೆ ಉಳಿದದ್ದು ಗತವೈಭವದ ನೆನಪು ಮಾತ್ರ. ಗ್ಲಾಮರ್ ಮುಗಿದಿತ್ತು. ಬೇಡಿಕೆ ಕ್ಷೀಣಿಸಿತ್ತು. ಎಲ್ಲೋ ಸಣ್ಣಪುಟ್ಟ ಕಾಮಿಡಿ ಪಾತ್ರಗಳು ಹುಡುಕಿ ಬರುತ್ತಿದ್ದವಾದರೂ ಅದು ಆವತ್ತಿನ ಖರ್ಚಿಗಾಗುತ್ತಿತ್ತು. ತಾನೇ ಡೈರೆಕ್ಷನ್ ಮಾಡ್ತೀನಿ ಎಂದು ಆರಂಭಿಸಿದ್ದ ಮಲೆಯಾಳದ 'ನೀಲಕರಂಜಿ ಪೂತು' ಎಂಬ ಚಿತ್ರವೂ ನೆನೆಗುದಿಗೆ ಬಿತ್ತು. ಬೆಳ್ಳಂಬೆಳಗ್ಗೆಯೇ ಕುಡಿಯಲಾರಂಭಿಸಿದಳು. ಗುಟ್ಕಾ ಬದುಕಿನ ಅವಿಭಾಜ್ಯ ವ್ಯಸನವಾಯಿತು. ಮುಖದ ಕಾಂತಿ ಮಾಯವಾಗಿತ್ತು. ಮಾಂಸಖಂಡಗಳು ಜೋತುಬಿದ್ದವು. ಕಣ್ಣು ಸುಕ್ಕು ಮರೆಮಾಚಲೆಂದು ಏನೇ ಮೇಕಪ್ ಮಾಡಿಕೊಂಡರೂ ಸೋತುಬಿದ್ದ ಕಣ್ಣುಗುಡ್ಡೆಗಳೇ ವಿಷಾದ ಗೀತೆ ಹಾಡುತ್ತಿದ್ದವು. ಇಲ್ಲಿಗೆ ಎರಡು ತಿಂಗಳ ಹಿಂದಷ್ಟೇ ಆಕೆಯ ಧ್ವನಿಯಲ್ಲೇನೋ ಬದಲಾವಣೆ ಕಂಡಿತ್ತು. ಚೆನ್ನೈನ ಆಸ್ಪತ್ರೆಯೊಂದರಲ್ಲಿ ಗಂಟಲಿನ ಸ್ಕ್ಯಾನ್ ಮಾಡಿಸಿದರೆ ಫಲಿತಾಂಶ ಆಘಾತಕಾರಿಯಾಗಿತ್ತು.

ಧ್ವನಿಪೆಟ್ಟಿಗೆಯನ್ನೇ ಕಿತ್ತೆಸೆಯುವಂತೆ ವೈದ್ಯರು ಸೂಚಿಸಿದ್ದರಂತೆ. ಲೇಟೆಸ್ಟ್ ಸುದ್ದಿಯೊಂದರ ಪ್ರಕಾರ ಶಕೀಲ ಗೋವಾದ ಯಾವುದೋ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದಾಳಂತೆ. ಅದು ಕ್ಯಾನ್ಸರ್ ವಿರುದ್ಧದ ಚಿಕಿತ್ಸೆಯೋ, ಆಕೆಯ ಹೃದಯ ವೇದನೆಗೆ ಮದ್ದೂ ಮಾದಕ ವ್ಯಸನಗಳಿಂದ ಹೊರಬರುವ ಆಕೆಯ ಪ್ರಯತ್ನವೋ ಅಥವಾ ತನ್ನ ದುರ್ವಿಧಿಯ ವಿರುದ್ಧ ಹೋರಾಟವೋ ಬಲ್ಲವರ್‍ಯಾರು?

ಸಿಲ್ಕ್ ಸ್ಮಿತಾಳ ಹಾದಿಯಲ್ಲೇ ಸಾಗಿಬಂದ ಶಕೀಲ ಕೂಡ ಆಕೆಯ ದುರಂತದ ದಾರಿ ಹಿಡಿಯಬೇಕೆ? ಕೋಟ್ಯಂತರ ರಸಿಕರ ಹೃದಯ ಕದ್ದವರೆಲ್ಲ ಈ ಪಾಟ ದಂಡ ಕಟ್ಟಬೇಕೆ?

● ರಾ. ಸೋಮನಾಥ್






ಆರಂಭದ ದಿನಗಳ ಮೈಮಾಟ ........ ಇವತ್ತು ಹೀಗಿದ್ದಾಳೆ ಶಕೀಲ

## ಆತ್ಮಚರಿತ್ರೆ ಬರೆದಿದ್ದರೆ ಯಾರೆಲ್ಲರ ಮಾನ ಹರಾಜಾಗುತ್ತಿತ್ತು?



ಸಿಲ್ಕ್ ಸಾವಿನ ನಂತರ ಕೇರಳ ಮತ್ತು ತಮಿಳುನಾಡಿನಲ್ಲಿ ಎದ್ದ ಮತ್ತೊಂದು ಸುಂಟರಗಾಳಿಯೆಂದರೆ ಅದು ಶಕೀಲ ಬರೆಯ ಹೊರಟ ಬಯಾಗ್ರಫಿ!

2012 ರ ಹೊತ್ತಿಗೆ ತಾನು ತನ್ನ ಆತ್ಮಚರಿತ್ರೆ ಬರೆಯುತ್ತಿದ್ದೇನೆಂದು ಇದ್ದಕ್ಕಿದ್ದಂತೆ ಶಕೀಲ ಹೇಳಿಕೆ ಕೊಟ್ಟದ್ದು ಕೇರಳ, ತಮಿಳನಾಡುಗಳೆರಡರಲ್ಲೂ ದೊಡ್ಡ ಸುದ್ದಿಯಾಗಿತ್ತು. ತನ್ನ ಬದುಕಿನಲ್ಲಿ ಆಟವಾಡಿದ ಯಾವ್ಯಾವ ಮಹನೀಯರನ್ನು ಶಕೀಲ ಬೆತ್ತಲೆಗೊಳಿಸಬಹುದೆಂಬುದೇ ಚರ್ಚೆಯ ವಸ್ತುವಾಗಿತ್ತು. ಕೇರಳದ ಟ್ಯಾಬ್ಲೋಲಾಯ್ಡ್ ಒಂದಂತೂ ಅಲ್ಲಿನ ಕಾಂಗ್ರೆಸ್ ಸರ್ಕಾರದ ರಸಿಕ ಮಂತ್ರಿಯೊಬ್ಬನ ಫೋಟೋ ಹಾಕಿ ಶಕೀಲ ಏನಾದರೂ ಸತ್ಯ ಬರೆದಳೆಂದರೆ ಆತನ ಮಂತ್ರಿಗಿರಿಗೆ ಕುತ್ತು ಗ್ಯಾರಂಟಿ ಎಂಬಂತೆ ವರದಿ ಪ್ರಕಟಿಸಿತ್ತು. ಮತ್ತೊಂದು ಪತ್ರಿಕೆ ಕೇರಳದ ಸೂಪರ್ ಸ್ಟಾರ್ ಒಬ್ಬನ ಜೊತೆ ಶಕೀಲ ಹೊಂದಿದ್ದ ಸಂಬಂಧವೇನಾದರೂ ಬಯಲಾಯಿತೆಂದರೆ ಆತನ ಪತ್ನಿಯಿಂದ ಡೈವೋರ್ಸ್ ಶತಸ್ಸಿದ್ಧ ಎಂದು ಗಾಸಿಪ್ ಮುದ್ರಿಸಿತ್ತು.

ಹಾಗೇ ತಮಿಳುನಾಡಿನಲ್ಲೂ ಶಕೀಲಳ ಆತ್ಮಚರಿತ್ರೆಯಿಂದಾಗಿ ಡಿಎಂಕೆಯ ಯುವ ನಾಯಕನೊಬ್ಬನ ಮಾನ ಬೀದಿಗೆ ಬರುತ್ತದೆಯೆಂದು ಪುಕಾರೆದ್ದಿತು. ಪ್ರಮುಖ ಸಿನಿಮಾ ನಿರ್ಮಾಪಕನೊಬ್ಬನ ಹೆಸರೂ ಕೇಳಿಬಂತು. ಆದರೆ ಇದೆಲ್ಲದರ ವ್ಯತಿರಿಕ್ತ ಪರಿಣಾಮವೆಂಬಂತೆ ಆತ್ಮಚರಿತ್ರೆ ಬರೆಯಬೇಕಿದ್ದ ಶಕೀಲಳ ಯೋಜನೆಯೇ ರದ್ದಾಯಿತು. ಯಾರು ಬಾಯಿ ಮುಚ್ಚಿಸಿದರೋ ಯಾವ ರಾಜಕೀಯ ನಾಯಕ ಕಾಲಿಗೆ ಬಿದ್ದನೋ ಗೊತ್ತಿಲ್ಲ. ಸಾಕಷ್ಟು ಸಿನಿಮಾಗಳಿದ್ದಾಗಲೂ ಟೈಮೇ ಇಲ್ಲದಿದ್ದರೂ ಸಟನೆಯನ್ನು ಕೈಬಿಟ್ಟು ವಿಕಾಏಕಿ ತನ್ನ ಆತ್ಮಚರಿತ್ರೆ ಬರೆಯುತ್ತೇನೆಂದು ಶಕೀಲ ಘೋಷಿಸಿದ್ದೇಕೆಂಬುದು ಇವತ್ತಿಗೂ ನಿಗೂಢ.

ಹಾಗೆ ಆತ್ಮಚರಿತ್ರೆ ಬರೆದು ತನ್ನನ್ನು ವಂಚಿಸಿದವರನ್ನೆಲ್ಲ ಬೆತ್ತಲೆ ಮಾಡಿಯೇ ಆತ್ಮಹತ್ಯೆ ಮಾಡಿಕೊಳ್ಳುವುದು ಆಕೆಯ ಉದ್ದೇಶವಾಗಿತ್ತೆ? ಅಥವಾ ಯೌವನದ ದಿನಗಳಲ್ಲಿ ತನ್ನನ್ನು ಶೋಷಿಸಿದ ಬಲಾಢ್ಯರ ಮೇಲೆ ಸೇಡು ತೀರಿಸಿಕೊಳ್ಳ ಹೊರಟಿದ್ದಳೆ? ಶಕೀಲ ಬದುಕಿನಲ್ಲಿ ಪ್ರವೇಶಿಸಿ ಕೈಕೊಟ್ಟವರ ಪಟ್ಟಿಯಲ್ಲಿ ಎಂತೆಂಥ ದೊಡ್ಡ ಹೆಸರುಗಳಿರಬಹುದು? ●



## ಭಜರಂಗಿ ಕೈವಾಡ

ಬಂಧಿತ ಯೋಗೇಶ ಭಜರಂಗದಳದವನಾಗಿದ್ದು ಬೈಕ್ ಕಳ್ಳತನ ನಡೆಸುತ್ತಿದ್ದ. ಮಣಿಪಾಲ ಠಾಣೆಯಲ್ಲಿ ಇವನ ವಿರುದ್ಧ ರೌಡಿ ಶೀಟ್ ಸಹ ಇದೆ. ರೇಪ್ ಮಾಡಿದ ಯೋಗೇಶ ಆರಾಮಾಗಿ ಮನೆಯಲ್ಲಿ ಇದ್ದಾಗ ಅವನ ಸೋದರ ಭಜರಂಗದಳದವರೊಂದಿಗೆ ಸೇರಿಕೊಂಡು ರೇಪಿಸ್ಟ್‌ರನ್ನು ಬಂಧಿಸುವಂತೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ.

ಭಜರಂಗಿ ಯೋಗೇಶ ಸೋದರನ ಚಿತ್ರ ಇಲ್ಲಿದೆ......

ಡಾ. ರಾಮದಾಸ್ ಪೈ




# ಮಣಿಪಾಲ ಪೈ ರಿಪಬ್ಲಿಕ್‌ನಲ್ಲಿ ಗ್ಯಾಂಗ್ ರೇಪ್!

ಮಣಿಪಾಲದ ಗ್ಯಾಂಗ್ ರೇಪ್ ಆರೋಪಿಗಳನ್ನು ಪೊಲೀಸರು ಹಿಡಿದಿದ್ದಾರೆ. ಬಂಧಿತ ಯೋಗೀಶ್, ಹರೀಶ್ ಹಾಗೂ ಎಸ್ಕೇಪಾದ ಆನಂದ ಎಂಬ ಹಿಂದೂ ಹೆಸರುಗಳು ಸಂಘ ಪರಿವಾರಕ್ಕೆ ಹಾಗೂ ಪೇಜಾವರ ಸ್ವಾಮಿಗೆ ನಿರಾಶೆ ತಂದಿರಬಹುದು. ಏಕೆಂದರೆ ದಾಳಿಗೀಡಾದ ವಿದ್ಯಾರ್ಥಿನಿ ನೀಡಿದ್ದ ವಿವರ ಹಾಗೂ ಪೊಲೀಸರು ತೋರಿಸಿದ್ದ ರೇಖಾಚಿತ್ರದಲ್ಲಿದ್ದ ಗಡ್ಡದಾರಿ ಯುವಕ ಓರ್ವ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಆಗಿರುತ್ತಾನೆಂದು ಈ ಚೆಡ್ಡಿ ಗ್ಯಾಂಗ್ ನಿರೀಕ್ಷಿಸುತ್ತಿತ್ತು.

ಮಣಿಪಾಲದ ಪೈ ರಿಪಬ್ಲಿಕ್‌ನಲ್ಲಾದ ಈ ಅತ್ಯಾಚಾರದ ಘಟನೆಗೆ ದೇಶಾದ್ಯಂತ ಪ್ರಚಾರ ಸಿಕ್ಕಿದೆ. ಆದರೆ ಬೆಳಕಿಗೇ ಬಾರದ ಇಂತ ಅದೆಷ್ಟೊ ದುರ್ಘಟನೆಗಳು ಪೈಗಳ ಶಿಕ್ಷಣ ಸಾಮ್ರಾಜ್ಯದಲ್ಲಿ ಈ ಹಿಂದೆ ನಡೆದಿವೆ. ಬಹಳ ಮುಖ್ಯವಾಗಿ 'ಮಾಹೆ'ಯಲ್ಲಿ ಕ್ರಿಮಿನಲ್‌ಗಳಿಗೆ ಉತ್ತೇಜನ ನೀಡುವಂತ ವಾತಾವರಣವೇ ಯಾವಾಗಲೂ ಇದ್ದೇ ಇದೆ.

ಪೈಗಳ ಶಿಕ್ಷಣ ವಸಾಹತುಸಲ್ಲಿ ವಿದ್ಯಾರ್ಥಿನಿಯರ ಅಪಹರಣ-ಅತ್ಯಾಚಾರ-ಲೈಂಗಿಕ ಕಿರುಕುಳ-ಒತ್ತೆಯಾಳಾಗಿಟ್ಟುಕೊಂಡು ಬಳಸುವುದು ತೀರಾ-ತೀರಾ ಸಾಮಾನ್ಯ ಅರೆಬೆತ್ತಲೆ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಬಹಿರಂಗ ಕಿಸ್ಸಿಂಗ್-ಹಗ್ಗಿಂಗ್-ತೆಕ್ಕೆ ಉರುಳಾಟದ ರತಿ-ಮನ್ಮಥ ಲೀಲೆಗಳೂ ಅಷ್ಟೇ ಮಾಮೂಲಿ. ಇದಕ್ಕೆಲ್ಲ ಮಾಹೆ ಆಡಳಿತಗಾರರೇ ಸ್ವಚ್ಛಂದ ಅವಕಾಶ ಕಲ್ಪಿಸಿದ್ದಾರೆ. ಪೈಗಳ ವಿದ್ಯಾದಂಧೆಯ ಮಾರ್ಕೆಟಿಂಗ್ ಟೆಕ್ನಿಕ್ ಇದೆಲ್ಲ. ಮಣಿಪಾಲ ಮತ್ತು ಮಾಹೆಯಲ್ಲಿ ಕಾನೂನು-ಕಟ್ಟಳೆ-ನಾಗರಿಕ ಶಿಷ್ಟಾಚಾರಗಳಿಗೆ ಒಂಚೂರೂ ನೆಲೆ-ಬೆಲೆಯಿಲ್ಲ. ಪೈಗಳು ಆಡಿದ್ದೇ ಆಡಳಿತ; ಮಾಡಿದ್ದೇ ನೀತಿ-ನಿಯಮ.

ಹೀಗಾಗಿ ಈ ಪೈ ರಿಪಬ್ಲಿಕ್‌ನಲ್ಲಿ ಆಗುವ ಯಾವ ಅತ್ಯಾಚಾರ ಕೊಲೆ-ಸುಲಿಗೆ-ಡ್ರಗ್ ಡೀಲಿಂಗ್-ಅಹೋರಾತ್ರಿಯ ನಂಗಾನಾಚ್, ಪಬ್-ಬಾರ್-ಡಿಸ್ಕೋಥೆಕ್, ಕಪಲ್ ಕುಣಿತದಂಥ ಪಾತಕಗಳು ಹೊರಜಗತ್ತಿಗೆ ಗೊತ್ತಾಗೋದೇ ಇಲ್ಲ. ಮೊನ್ನೆ ಆಗಿರುವಂಥ ಕಿಡ್ನ್ಯಾಪ್ ಮತ್ತು ರೇಪ್ ಮಾಹೆಯಲ್ಲಿ ಅದೆಷ್ಟೋ ಆಗಿ ಕಾಲಗರ್ಭದಲ್ಲಿ ಹೂತುಹೋಗಿದೆ. ಮೊನ್ನಿನ ರೇಪ್ ರಾದ್ಧಾಂತ ಮಾತ್ರ ಆದ್ಹೇಗೋ ಪೈ ಮಾಮಾಗಳ ಕಟ್ಟುನಿಟ್ಟಿನ ಮಜಬೂತ್ ಅಡೆತಡೆಗಳ ನಡುವೆಯೇ ನುಸುಳಿ ದೇಶ-ವಿದೇಶದಲ್ಲಿ ಗೌಜೆಯೆಬ್ಬಿಸಿದೆ. ಮಾಧ್ಯಮದವರ ಒತ್ತಡವಿಲ್ಲದಿದ್ದರೆ ಪೊಲೀಸ್ ಠಾಣೆ ತನಕ ಬಂದಿದ್ದ ಈ ಪ್ರಕರಣ ಅಲ್ಲೇ ಸಮಾಧಿ ಆಗುತ್ತಿತ್ತು.



ಪೊಲೀಸರ ರೇಖಾಚಿತ್ರ



ಯೋಗೇಶ್

### ಪಕ್ಕಾ ಬೇಟೆ

ಅದು ರಾತ್ರಿ 11.30ರ ಸಮಯ. ಜೂನ್ ತಿಂಗಳ 20ನೇ ತಾರೀಖಿನ ಇರುಳು. ಆದರೆ ಮಾಹೆ ಅಥವಾ ಮಣಿಪಾಲದಲ್ಲದು ಹಗಲೇ. ಝಗಮಗಿಸುವ ವಿದ್ಯುತ್ ದೀಪಗಳು-ಜನದಟ್ಟಣೆಯ ಓಡಾಟದ ಹೊತ್ತದು. ಅಷ್ಟು ಚಟುವಟಿಕೆ ನಡುರಾತ್ರಿಯೂ ಮಣಿಪಾಲ ಎಂಬ ಮಾಯಾನಗರಿಯಲ್ಲಿರುತ್ತದೆ. ಆ ವೇಳೆ ಎಂಬಿಬಿಎಸ್‌ನ ನಾಲ್ಕನೇ ವರ್ಷದಲ್ಲಿ ಕಲಿಯುತ್ತಿದ್ದ ಕೇರಳ ಕಡೆಯ ಶಿಸ್ತು-ಸಜ್ಜನಿಕೆಯ ಕ್ರಿಶ್ಚಿಯನ್ ಸಮುದಾಯದ ಹುಡುಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಲೈಬ್ರರಿಯಿಂದ ಹಾಸ್ಟೆಲ್ ಕಡೆಗೆ ಹೋಗಲೆಂದು ಹೊರಟದ್ದಾಳೆ. ಆಕೆ ಮಾಹೆ ಎಂಬ ಬೆತ್ತಲೆ ಲೋಕದಲ್ಲಿ ಮೈತುಂಬ ಬಟ್ಟೆ ಹಾಕಿಕೊಂಡು ಕಲಿಕೆಯ ಒಂದೇ ಒಂದು ಗುರಿಯಿಟ್ಟುಕೊಂಡಿದ್ದ ಶ್ರದ್ಧಾವಂತ ವಿದ್ಯಾರ್ಥಿನಿ.

ಆ ಹುಡುಗಿಯ ಹಾಸ್ಟೆಲ್- ವಿವಿ ಆಡಳಿತಕ್ಕೆ ಒಳಪಟ್ಟಿರುವ ಮಾಂಡವಿ ಪ್ಲಾಜಾ ಮತ್ತು ಲೈಬ್ರರಿ ನಡುವಿನ ಅಂತರ ಬರೀ ಒಂದು ಫರ್ಲಾಂಗ್. ನಾಳೆ (21-6-13) ಆಕೆಗಿದ್ದ ನಾಲ್ಕನೇ ವರ್ಷದ ಮೊದಲ ಸೆಮಿಸ್ಟರ್ ಪರೀಕ್ಷೆಯಿತ್ತು, ಅದಕ್ಕೆಂದೇ ಆಕೆ ತಡ ರಾತ್ರಿವರೆಗೂ ಗ್ರಂಥಾಲಯದಲ್ಲಿ ಕುಳಿತು ಪರೀಕ್ಷೆ ತಯಾರಿ ಮಾಡಿಕೊಂಡು ಹಾಸ್ಟೆಲ್‌ನತ್ತ ಹೊರಟದ್ದಳು. ಇನ್ನೇನು ನಾಲ್ಕೈದು ಹೆಜ್ಜೆ ಹಾಕಿದರೆ ಮಾಂಡವಿ ಪ್ಲಾಜಾ. ಅಷ್ಟರಲ್ಲೇ ಹಳೆ ಮಾಡಲಿನ ರಿಕ್ಷಾವೊಂದು ಸದ್ದು ಮಾಡುತ್ತ ಆಕೆಯ ಬಳಿ ಬಂದು ನಿಂತಿತು. ನೋಡು-ನೋಡುತ್ತಿದ್ದಂತೆಯೇ ಅದರಲ್ಲಿದ್ದ ಪಾತಕಿಗಳು ಬಲಾತ್ಕಾರದಿಂದ ಆ ಪಾಪದ ಹುಡುಗಿಯನ್ನು ರಿಕ್ಷಾಕ್ಕೆ ಎಳೆದು ತುಂಬಿಕೊಂಡರು.

ಆಕೆ ಅದೆಷ್ಟೆ ಕೊಸರಾಡಿದರೂ, ಪ್ರತಿರೋಧದಿಂದ ಕೂಗಾಡಿದರೂ ರಿಕ್ಷಾದಲ್ಲಿದ್ದ ಡ್ರೈವರ್ ಮತ್ತು ಇಬ್ಬರು ರಾಕ್ಷಸರು ರಣಹದ್ದು ಕೋಳಿ ಮರಿಯನ್ನು ಕರಾರುವಾಕ್ಕಾಗಿ ಬೇಟೆಯಾಡುವಂತೆ ಹೊತ್ತೊಯ್ದರು! ಆಗವಳು ಜನರಿಗೆ ತನ್ನನ್ನು ಅಪಹರಿಸಿದ್ದು ಗೊತ್ತಾಗಲೆಂದೇ ಇರಬೇಕು ಪರ್ಸ್, ಮೊಬೈಲ್, ಕೊಡೆಯನ್ನು ರಸ್ತೆಗೆ ಚೆಲ್ಲಿದಳು. ಈ ಅಪಹರಣವನ್ನು ದೂರದಿಂದ ಲೈಬ್ರರಿ ವಾಚ್‌ಮನ್ ಗಮನಿಸಿದ. ಅಷ್ಟೇ ಅಲ್ಲೇ ಅನತಿ ದೂರದಲ್ಲಿದ್ದ ಇಂಜಿನಿಯರಿಂಗ್ ವಿದ್ಯಾರ್ಥಿಯೂ ನೋಡಿದ. ಅಷ್ಟರಲ್ಲೇ ಎಂಕಾಫ್ ಎದುರಿಂದ ಆಕೆಯನ್ನು ತುಂಬಿಕೊಂಡ ರಿಕ್ಷಾ ಕೆಎಂಸಿಯ ಪ್ರಧಾನ ದ್ವಾರದ ಮೂಲಕ ಬಿಗ್‌ಬಾಸ್ ಹೋಟೇಲ್‌ನ ಎಡಭಾಗದ ರಸ್ತೆ ಮೂಲಕ ಉಡುಪಿ-ಕಾರ್ಕಳ ರಸ್ತೆಯಲ್ಲಿ ಶರವೇಗದಲ್ಲಿ ಓಡಿತು.

### ಎಚ್ಚೆತ್ತ ವಾಚ್‌ಮನ್

ಲೈಬ್ರರಿ ವಾಚ್‌ಮನ್ ಈ ಕಿಡ್ನ್ಯಾಪ್ ನೋಡಿ ಕಂಗಾಲಾದ. ಆತ ತಕ್ಷಣ ಮಾಂಡವಿ ಪ್ಲಾಜಾದ

## ಮಾಹೆ ಸುತ್ತ ಬೆತ್ತಲೆ ಲೋಕ!

ಮಣಿಪಾಲಕ್ಕೆ ಪೈಗಳ ಮಾಹೆ ಮತ್ತು ಕೆಎಂಸಿಯಿಂದ ಬಂದ ಖ್ಯಾತಿಗಿಂತ ಕುಖ್ಯಾತಿಯೇ ಹೆಚ್ಚು! ಮಣಿಪಾಲವೆಂದರೆ ಪೈಗಳ ಪಾಳೆಪಟ್ಟು. ಶಿಕ್ಷಣ, ಆರೋಗ್ಯ ಬ್ಯಾಂಕಿಂಗ್, ಮುದ್ರಣ, ಮಾಧ್ಯಮ, ಕೈಗಾರಿಕೆ... ಹೀಗೆ ಹಲವು ದಂಧೆಗಳ ದೊರೆಗಳು ಪೈ ಮಾಮಾಗಳು. ಮಣಿಪಾಲದ ಸಕಲ ಆಗು-ಹೋಗುಗಳನ್ನು ಅಷ್ಟೂ ಸರ್ಕಾರಿ ಏಜೆನ್ಸಿಗಳು ಪೈ ಮಾಮಾಗಳ ಮರ್ಜಿ-ಮುಲಾಜಿನಂತೇ ನಡೆಸುತ್ತವೆ. ಯಾವ ಪಕ್ಷವೇ ಅಧಿಕಾರಕ್ಕೆ ಬರಲಿ, ಪೈಗಳು ಅವರನ್ನು ಪಳಗಿಸುತ್ತಾರೆ. ಪೈಗಳು ಹೇಳಿಕೇಳಿ ವರ್ತಕ ಜಾಯಮಾನದವರು. ಬಿಸಿನೆಸ್ ಸಾಮ್ರಾಜ್ಯ ವೃದ್ಧಿಯ ಧೋರಣೆ ಮೇಲೆ ನಿಂತಿರುವ ಪೈಗಳ ಮಾಹೆ ಮತ್ತು ಕೆಎಂಸಿಗಳಲ್ಲಿ ಹಣ ಇದ್ದವರಿಗಷ್ಟೇ ಮಣೆ. ಆಯುಷ್ಯ- ಶಿಕ್ಷಣ ಮಣಿಪಾಲದಲ್ಲಿ ಧನಾಧಾರಿತ!!

ಡಾ. ರಾಮದಾಸ್ ಪೈಗಳ 'ಮಾಹೆ' ಎಂಬ ವಿಶ್ವವಿದ್ಯಾಲಯದಲ್ಲಿ ತರಹೇವಾರಿ ಶಿಕ್ಷಣ ಮಳಿಗೆಗಳಿವೆ. ಈ ಮಾಹೆಯಲ್ಲಿ ಸುಮಾರು 50 ದೇಶದ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳ ಸೀಟು ಖರೀದಿಸಿದ್ದಾರೆ. ಹಣವೆಂದ ಮೇಲೆ ಸಾವಿರಾರು ಕೋಟಿ ಹರಿದಾಡುತ್ತದೆ. ಬಹಳಷ್ಟು ಪೈಗಳ ತಿಜೋರಿಗೆ ಅಂತಿಮವಾಗಿ ಸೇರುತ್ತದೆ. ಪೈಗಳಿಗೆ ಗೊತ್ತಿದ್ದೋ-ಗೊತ್ತಿಲ್ಲದಂತೋ ಅಂತೂ ಅವರ ಧನದಾಹದಿಂದ ಮಾಹೆ ಎಂದರೆ ಹೈಟೆಕ್ ಮೋಜು-ಮಸ್ತಿಯ ಬೆತ್ತಲೆ ಲೋಕದಂತಾಗಿ ಅದ್ಯಾವದೋ ಕಾಲವಾಗಿದೆ. ಆದರೆ ಇದನ್ನು ಕಂಡೂಕಾಣದಂತಿದ್ದಾರೆ ಪೈಗಳು. ಮಾಹೆ ಪರಿಸರ ಅಕಾಡೆಮಿಕ್ ಆಗಿ, ಅಂದರೆ ರತಿ-ಮನ್ಮಥ ಲೋಕದಿಂದ ಪ್ರತ್ಯೇಕಿಸಬೇಕೆಂಬ ಇರಾದೆಯೇ ಪೈಗಳಿಗಿಲ್ಲ, ಹಾಗೆ ಮಾಡಿದರೆ ಅವರ ಎಜುಕೇಷನ್ ಬಿಸಿನೆಸ್‌ಗೆ ದೊಡ್ಡ ಧಕ್ಕೆ ಆಗುತ್ತದೆ.

ಇವತ್ತು ಮಾಹೆ ಎಂದರೆ ಪ್ಯಾರಿಸ್ ಪ್ರಣಯದ ಸ್ವಚ್ಛಂಧ ಕಾಮಲೋಕದಂತಾಗಿದೆ. ಹೊರರಾಜ್ಯ-ಹೊರದೇಶದ ಮತಲಬಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಡುಹಗಲೇ ತೆಕ್ಕೆಬಿದ್ದು-ತುಂಡುಡುಗೆ ಉಟ್ಟು ಬಿಂದಾಸ್ ಓಡಾಡುತ್ತಿರುತ್ತಾರೆ. ಇಲ್ಲಿ ಶೀಲ-ಶಿಸ್ತು-ಕಲಿಕೆಯ ಆಸಕ್ತಿ ಇರುವ ವಿದ್ಯಾರ್ಥಿಗಳು ಶೇಕಡಾ 40ರಷ್ಟು ಮಾತ್ರ. ಉಳಿದವರಿಗೆ ಮೋಜು-ಮಸ್ತಿಯೇ ಶಿಕ್ಷಣ. ಹೀಗಾಗಿ ಮಣಿಪಾಲ ಪರಿಸರದಲ್ಲಿ ಆರೆಂಟು ಪಬ್‌ಗಳು, ಎಂಟ್ಹತ್ತು ಬಾರ್, ಡಾನ್ಸ್ ಕ್ಲಬ್, ಡಿಸ್ಕೋಥೆಕ್‌ಗಳು, ಜೂಗಲು ಆಟದ ಅಪಾರ್ಟ್‌ಮೆಂಟ್‌ಗಳು, ಲಿವ್ ಟುಗೆದರ್‌ನ ಪಿಜಿ ಸೆಂಟರ್‌ಗಳು, ಕಂಬೈಂಡ್ ಸ್ಟಡಿಯ ಏಕಾಂತದ



ಹಾಲ್‌ಗಳು, ಹುಕ್ಕಾ ಬಾರ್‌ಗಳು, ಕಪಲ್ ಡಾನ್ಸ್, ಕ್ಲಬ್‌ಗಳು... ಹೀಗೆ ಬೆತ್ತಲಾಗಲು ಬೇರೆ-ಬೇರೆ ವ್ಯವಸ್ಥೆ ಇದೆ. ಡ್ರಗ್‌ಗಾಗಿ ಬೆತ್ತಲಾಗುವ ಹುಡುಗೀರು ಇದ್ದಾರೆ. ವಿದ್ಯಾರ್ಥಿನಿಯರನ್ನು ಬಳಸಿಕೊಂಡು ಹೈಟೆಕ್ ವೇಶ್ಯಾವಾಟಿಕೆ ನಡೆಸುವ ಪಿಂಪ್‌ಗಳ ದೊಡ್ಡ ಗ್ಯಾಂಗೇ ಮಾಹೆ ಸುತ್ತಲ್ಲಿದೆ.

ಗಾಂಜಾ-ಬ್ರೌನ್ ಶುಗರ್ ಮತ್ತಿತರ ನಶೆ ಪದಾರ್ಥ ಮಣಿಪಾಲದಲ್ಲಿ ಮುಕ್ತವಾಗಿ ಸಿಗುತ್ತದೆ. ಶಿಕ್ಷಣ ಸಂಸ್ಥೆಗಳ ಅಕ್ಕ-ಪಕ್ಕದ ಗೂಡಂಗಡಿಗಳಲ್ಲೂ ಈ ಮಾದಕ ವಸ್ತು ಲಭ್ಯ. ಇದನ್ನು ತಿಂದ ಮಾಹೆಯ ಹುಡುಗ-ಹುಡುಗಿಯರು ಮಲ್ಪೆ ಬೀಚ್, ಮಣ್ಣು ಪಳ್ಳ ಜಲಾಶಯ, ಎಂಡ್ ಪಾಯಿಂಟ್‌ಗಳಲ್ಲಿ ಬೆಳಗ್ಗೆ 10 ಗಂಟೆಗೆ ಬೆತ್ತಲಾಗಿ ಬಿದ್ದರೆ ಬೆಳಗಾನ ಉರುಳಾಡುವವರೂ ಇದ್ದಾರೆ. ಸಿಕ್ಕ-ಸಿಕ್ಕಲ್ಲಿ ಅರೆ-ಬರೆ ಬಟ್ಟೆಯ ರತಿ-ಮನ್ಮಥರು ಅಪ್ಪಿ ಮುದ್ದಾಡುತ್ತಾರೆ. ಪಪ್ಪಿ ಕೊಟ್ಟು ಮೈಮರೆಯುತ್ತಾರೆ. ವೀಕ್ ಎಂಡ್‌ಗಳಲ್ಲಿ ಆ್ಯಸಿಡ್ ಪಾರ್ಟಿಯಂಥ ನಂಗಾ-ನಶಾ ಲೋಕ ಅಲ್ಲಲ್ಲಿ ತೆರೆದುಕೊಳ್ಳುತ್ತದೆ. ಫ್ಲಾಟ್‌ಗಳನ್ನು ಬಾಡಿಗೆಗೆ ಪಡೆದು ವೀಕೆಂಡ್ ಪಾರ್ಟಿ ವ್ಯವಸ್ಥೆ ಮಾಡುವ ಗ್ಯಾಂಗ್‌ಗಳೇ ಇವೆ. ಡಿಸ್ಕೋಥೆಕ್‌ನ ಕಿವಿಗಡಚಿಕ್ಕುವ ಸಂಗೀತಕ್ಕೆ ಬಟ್ಟೆ ಬಿಚ್ಚಿ ಕುಣಿಯುವ, ತೆಕ್ಕೆಬಿದ್ದು ಉರುಳಾಡುವ 'ಕಪಲ್ ಡ್ಯಾನ್ಸ್'ಗಳು ಮಣಿಪಾಲದಲ್ಲಿ ತೀರಾ ಸಾಮಾನ್ಯ. ಇಲ್ಲಿ ಹೆಣ್ಣು-ಗಂಡು ಜೋಡಿಯಾಗಿ ಬಂದರಷ್ಟೇ ಪ್ರವೇಶ.

ಮಾಹೆ ಕ್ಯಾಂಪಸ್-ಗಾರ್ಡನ್-ಪೊದೆ-ಸಂದಿಗಳಿಗೆ ಹಗಲು-ರಾತ್ರಿಯ ಭೇದವೇ ಇಲ್ಲ. ಎಂಡ್ ಪಾಯಿಂಟ್-ಮಣ್ಣು ಪಳ್ಳದಲ್ಲಿ ತೆರೆದುಕೊಳ್ಳುವ ಬೆತ್ತಲೆ ಲೋಕದ 'ಎ' ಸೀನ್‌ಗಳನ್ನು ನೋಡಲೆಂದೇ ಅಲ್ಲಿಗೆ 'ಪ್ರವಾಸಿಗರು' ಬರುತ್ತಾರೆ. ಅಷ್ಟರ ಮಟ್ಟಿಗೆ ಮಾಹೆಯ ಮಹಿಮೆ ಹಬ್ಬಿದೆ! ದಾರಿ ತಪ್ಪಿದ ಶೇ. 60 ವಿದ್ಯಾರ್ಥಿಗಳು-ಅವರಿಗೆ ಪರೋಕ್ಷವಾಗಿ ಬೆಂಗಾವಲಾಗಿರುವ ಮಾಹೆ ಮಹಾಮಹಿಮರು-ಪೊಲೀಸರಿಂದಾಗಿ ಡೀಸೆಂಟ್ ವಿದ್ಯಾರ್ಥಿಗಳು ಸಂಕಷ್ಟದಲ್ಲಿ ಸಿಲುಕುತ್ತಿದ್ದಾರೆ. ಬ್ಯಾಂಕಿಂಗ್-ಶಿಕ್ಷಣ-ಮಾಧ್ಯಮ ಅಧ್ವರ್ಯರ 'ಸಾಧನೆ' ಸಾಲಿಗೆ ಹೈಟೆಕ್ ರಾಸಲೀಲಾ ವಿನೋದವೂ ಸೇರಿಕೊಂಡಿದೆ.

ಇದೆಲ್ಲದರ ಅಡ್ಡ ಪರಿಣಾಮದ ಸ್ಯಾಂಪಲ್‌ನಂತಿದೆ ತ್ರಿಶ್ಶೂರ್‌ನ ನಿಷ್ಪಾಪಿ-ನಿಷ್ಠಾವಂತ ಶಿಕ್ಷಣಾರ್ಥಿ ಹುಡುಗಿಯ ಮೇಲಾಗಿರುವ ಗ್ಯಾಂಗ್ ರೇಪ್! ಇನ್ನಾದರೂ 'ಮಾಹೆ' ಬಾಸ್‌ಗಳಿಗೆ, ಅವರ ಮರ್ಜಿ ಕಾಯುವ ಆಡಳಿತಗಾರರಿಗೆ, ಖಾಕಿ ಯೂನಿಫಾರ್ಮ್‌ಗೆ ಅಪಮಾನ ಮಾಡುತ್ತಿರುವ ಪೊಲೀಸರಿಗೆ ಪಾಪಪ್ರಜ್ಞೆ ಮೂಡೀತಾ? ರೇಪ್ ಮಾಫಿಯಾ-ಡ್ರಗ್ಸ್ ಮಾಫಿಯಾಕ್ಕೆ ಕಡಿವಾಣ ಬಿದ್ದೀತಾ? ಯುವ ಜನಾಂಗವನ್ನು ನೈತಿಕ ಅಧಃಪತನಕ್ಕೆ ತಳ್ಳುತ್ತಿರುವ 'ಗಣ್ಯ'ರಿಗೆ ಬುದ್ಧಿ ಬಂದೀತಾ? ಹಾಗಂತ ಇಡೀ ಜಗತ್ತೀಗ ಅಳಿವತ್ತುಕೊಳ್ಳುತ್ತಿದೆ.

ರೇಪ್ ವಿರುದ್ಧ ಆಗುತ್ತಿರುವ ಪ್ರತಿಭಟನೆಗಳು 'ಮಾಹೆ' ಮಾಮಾಗಳತ್ತ ತಿರುಗಿದರೆ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಬಹುದೇನೋ?

ವಲುಗಾರನಿಗೆ ಫೋನಾಯಿಸಿ 'ಇಂಥ' ಹುಡುಗಿಯನ್ನು ಾರೋ ಹೊತ್ತೊಯ್ದಿದ್ದಾರೆ. ಆಕೆ ಬಂದರೆ ತಕ್ಷಣ ತಿಳಿಸು ದ. ಆ ಕಾವಲುಗಾರ ಆಕೆಯ ರೂಮ್‌ಮೇಟ್‌ಗಳಿಗೆ ಸಿದ. ಇತ್ತ ಲೈಬ್ರರಿ ವಾಚ್‌ಮನ್ ಮಣಿಪಾಲ ಪೊಲೀಸ್ ಷನ್‌ಗೆ 'ಹಿಂದು-ಮುಂದು' ಯೋಚಿಸದೆ ಫೋನಾಯಿಸಿ ಹರಣದ ಕತೆ ಹೇಳಿದ. ಮಾಹೆ ಸಾಮ್ರಾಜ್ಯದಲ್ಲಾಗುವ ಥ ಅಪಹರಣ-ಮಾನಭಂಗ ಪೊಲೀಸರಿಗೆ ತಿಳಿಸಬಾರ ಬ 'ಸಂಪ್ರದಾಯ' ಆತ ತಿಳಿದೋ-ತಿಳಿಯದೆಯೋ ಪ್ಪೆಂಟು ಕೊಟ್ಟಿದ್ದ.

ಮಣಿಪಾಲ ಪೊಲೀಸರಿಗೂ ಮಾಹೆ ಮಾನಿನಿಯರನ್ನು ಹಪುರು ಹೊತ್ತೊಯ್ಯುವುದು-ಬಳಸಿ ಬಿಸಾಡುವುದು ಾಸವೇನೂ ಅಲ್ಲ. ಈ ಪೊಲೀಸರು ಮಾಹೆ ಂಮೆಯನ್ನು ಅಷ್ಟು ಸೀರಿಯಸ್ ಆಗಿ ಪರಿಗಣಿಸುವುದೂ ಲ್ಲ. ಪೈ ಮಾಮಾಗಳ ಮರ್ಜಿ-ಮುಲಾಜಲ್ಲಿರುವ ೊಲೀಸರು ಎಂದೂ ಮಾಹೆ ಮರ್ಯಾದೆಗೆ ಚ್ಯುತಿ ಎವವರಲ್ಲ. ಆದರೂ ಸ್ವತಃ ಮಾಹೆ ವಾಚ್‌ಮನ್ನನೇ ರು ಕೊಟ್ಟಿದ್ದಾನೆಂದು ಪೊಲೀಸರೂ ಗಡಿಬಡಿಗೆ ಬಿದ್ದರು. ದಯುಭಾಗದ ಮಣಿಪಾಲ್‌ನಿಂದ ಅಪಹೃತಳಾದ ಡುಗಿಗಾಗಿ ಸುತ್ತಲಿನ ನಾಲ್ಕೈದು ಕಿಲೋಮೀಟರ್ ಂತರದಲ್ಲಿ ನಾಕಾಬಂದಿ ಮಾಡಿದ್ದರು.

## ಎರಡೆರಡು ಕಡೆ ರೇಪ್

ಪೊಲೀಸರ ನಾಕಾಬಂದಿ ಸರಹದ್ದಿನ ಹೊರಗೆ ಡುಗಿಯನ್ನು ಹೊತ್ತೊಯ್ದ ರಿಕ್ಷಾ ಹೋಗಿರಲಿ. ಅದು ್ಯಲಿವ್ಯೂ' ಎಂಬ ಸುಪ್ರಸಿದ್ಧ 'ಇಂಟರ್‌ನ್ಯಾಷನಲ್ ರ್ಟ್‌ನ ಪಕ್ಕದ ರಸ್ತೆಯಲ್ಲಿ 'ಈಶ್ವರ ನಗರ' ಎಂಬಲ್ಲಿಗೆ ೋಗಿತ್ತು. ಅಲ್ಲಿರುವ ಪಾಳು ಬಿದ್ದ ಎರಡು ಮನೆಗಳ ಾಪೌಂಡ್‌ನ ಒಳಗೆ ಆ ರಿಕ್ಷಾ ಪ್ರವೇಶಿಸಿತು. ಒಂದು ನೆಯೊಳಗೆ ಹುಡುಗಿಯನ್ನು ಕರೆದೊಯ್ದ ಕಿರಾತಕರು ರಿಯಂತೆ ಆಕೆಯ ಮೇಲೆರಗಿದ್ದಾರೆ. ರಿಕ್ಷಾ ಡ್ರೈವರ್ ತ್ತಿಬ್ಬರು ಆಕೆಗೆ ಮನಬಂದಂತೆ ಹೊಡೆದು, ಬಲಾತ್ಕಾರ-ತ್ಯಾಚಾರ ಮಾಡಿದ್ದಾರೆ, ಬಯ್ದಿದ್ದಾರೆ.

ಆಕೆಯೊಂದಿಗೆ ಬೇಕಂತಲೆ ಹಿಂದಿಯಲ್ಲಿ ಮಾತಾಡುತ್ತಿದ್ದ ೋಗೀಶ್, ಹರೀಶ್ ಹಾಗೂ ಆನಂದ್ ಹೇಳುತ್ತಿದ್ದು ಂದೇ. "ನಮಗೆಲ್ಲಾ ಗೊತ್ತಿದೆ.. ಮಾಹೆ ಹುಡುಗೀರದು... ವ್ಮನೆ ಸಹಕರಿಸು... ಮಾಹೆ ಹುಡುಗೀರು




ಬೀದಿಗಳಿದ ಯುವಜನತೆ

ದಾರ್‍ಯರೊಂದಿಗೆ ಏನೇನು ಮಾಡ್ತಾರೆಂದು ಗೊತ್ತು... ನಾವು ಗೆ ಬಾಳ ಹುಡುಗೀರ ತಂದಿದ್ದೇವೆ... ನೀನು ಸುಮ್ಮನಿರ ಷ್ಟೆ ಮರ್ಡರ್ ಮಾಡಿ ಎಸೆದುಹೋಗ್ತೇವೆ..." ಎಂದಬ್ಬರಿ ಸುತ್ತಿದ್ದರು ಆದರೂ ಆಕೆ ತನ್ನ ಮಾನ ಕಾಪಾಡಿಕೊಳ್ಳಲು ಾಡಿದ್ದಳು.

ಆಗ ಗಾಬರಿಗೆ ಬಿದ್ದಿದ್ದಾರೆ ಅಪಹರಣಕಾರರು. ಸುತ್ತಲಿನ ನೆಗಳವರಿಗೆ ಆಕೆಯ ಬೊಬ್ಬೆ ಕೇಳುವ ಅಪಾಯ ಅರಿತು ಣ ಆ ಪಾಳು ಬಿದ್ದ ಮನೆ ಹಿಂದಿನ ನಿರ್ಜನ ಪ್ರದೇಶಕ್ಕೆ ಯ್ಯಲು ರೆಡಿಯಾಗಿದ್ದಾರೆ. ಆಗಾಕೆ ರಿಕ್ಷಾದಿಂದ ಹೊರಕ್ಕೆ ರಿ ಓಡಲು ಪ್ರಯತ್ನಿಸಿದ್ದಾಳೆ. ಆದರೆ ಹೊರಕ್ಕೆ ಹಾರಿದ ಸಕ್ಕೆ ಆ ಅಸಹಾಯಕ ಹೆಣ್ಣು ಮಗುವಿನ ಪಾದದ ಟು ಮುರಿದಿದೆ. ನೋವಿನಿಂದ ಆಕೆ ಬಿದ್ದಲ್ಲೇ ಕುಸಿದಿದ್ದಾಳೆ. ದರೂ ಆ ಪಾಪಿಗಳು ಬಿಡಲಿಲ್ಲ, ನಿರ್ಜನ ಪ್ರದೇಶಕ್ಕೆ ಯ್ದು ಎರಡನೇ ಬಾರಿ ಅತ್ಯಾಚಾರ ಸರದಿಯಂತೆ ಾಡಿದ್ದಾರೆ. ಆಕೆ ಜರ್ಜರಿತವಾಗಿ ಬದುಕೊಂಡಿದ್ದಾಳೆ!! ಾನಸಿಕ-ದೈಹಿಕ ಆಘಾತದಿಂದ ಹೈರಾಣಾಗಿ ಹೋಗಿದ್ದಾಳೆ.

## ಹಾಸ್ಟೆಲ್ ಬಳಿ ಬಿಟ್ರು

ಸತತ ಮೂರು ತಾಸು ನಡೆದ ದಾಳಿಯಿಂದ ಗ್ಗುಗೊಂಡಿದ್ದ ಆ ಹುಡುಗಿಯನ್ನು ರೇಪಿಸ್ಟ್‌ಗಳು ಮತ್ತೆ ಕ್ಷಕ್ಕೆ ತುಂಬಿಕೊಂಡಿದ್ದಾರೆ. ಆಕೆಯ ಹಾಸ್ಟೆಲ್ ಬಳಿ ಬಿಡುವ ನಿರ್ಧಾರ ಅವರದಾಗಿತ್ತು, ಈಶ್ವರನಗರದಿಂದ ಾಹೆ ಕ್ಯಾಂಪಸ್‌ಗೆ ಬರುವ ದಾರಿ ಮಧ್ಯದಲ್ಲಿ ಇಳಿದಿದ್ದಾರೆ. ಡ್ರೈವರ್ ಯೋಗೀಶ್ ಒಬ್ಬನೇ ಆ ಹುಡುಗಿಯನ್ನು ಂದುಸಿ ಪ್ಲಾಜಾ ಮತ್ತು ಮಾಹೆ ಮಧ್ಯದ ರಮೇಶ್ ಪ ಕಾಂಪ್ಲೆಕ್ಸ್ ಬಳಿ 21ರ ಟೈಗಿನ ಜಾವದ ಹಿ, ಬಿಟ್ಟು ಹೋಗಿದ್ದಾನೆ. ಆಗವಳು ಮಾತಾಡದ ೇಗೆಯು ಸ್ಥಿತಿಯಲ್ಲಿದ್ದಾಳೆ. ಆದರೂ ಅದ್ಹೇಗೋ ತೆವಳುತ್ತ ತನ್ನ ರೂಮು ಸೇರಿದಳು.

ಗೆಳತಿಯರು ಆಕೆ ರೂಮಿಗೆ ಬಂದಿರುವುದನ್ನು ವಾರ್ಡನ್‌ಗೆ ಹೇಳಿದರು. ತಕ್ಷಣ ಗೆಳತಿಯರು ಮತ್ತು ಪೊಲೀಸರು ಸಂತ್ರಸ್ತೆಯನ್ನು ಅದೇ ಮಣಿಪಾಲದ ಕೆಎಂಸಿಗೆ ಸೇರಿಸಿದರು. ಅಂದರೆ ಮಾಹೆ ಅಧಿಪತಿ ಡಾ. ರಾಮದಾಸ್ ಪೈಗಳ ಅಧಿಪತ್ಯದ ಆಸ್ಪತ್ರೆಗೇ ಆ ಹುಡುಗಿಯನ್ನು ಅಡ್ಮಿಟ್ ಮಾಡಿಕೊಂಡಿತು. ತನ್ನ ಮೇಲಾಗಿರುವ ಗ್ಯಾಂಗ್ ರೇಪ್ ಬಗ್ಗೆ ಹೇಳಿದ ಹುಡುಗಿ ಆ ಬಳಿಕ ಇನ್‌ಟೆನ್‌ಸಿವ್ ಕೇರ್ ಘಟಕ ಸೇರಿದಳು. ಆಕೆ ವೈದ್ಯರ ಬಿಟ್ಟು ಯಾರಿಗೂ ಸಿಗುತ್ತಿಲ್ಲ. ಪೊಲೀಸರು ಪೈ ಮಾಮಾನ ಅಡಿಯಾಳಂತಿರುವ ವೈದ್ಯರು ಹೇಳಿದ್ದನ್ನೇ ನಂಬಿ 'ತನಿಖೆ' ನಡೆಸಲಾರಂಭಿಸಿದರು.



ಐಜಿಪಿ ಪ್ರತಾಪ್ ರೆಡ್ಡಿ

ಮಾಹೆ ಕ್ಯಾಂಪಸ್ಸಿನಲ್ಲಿ ಆಗಿರುವ ಈ ಕಿಡ್‌ನ್ಯಾಪ್ ಅಂಡ್ ರೇಪ್ ಮೊದಲನೆಯದು ಅಲ್ಲವೇ ಅಲ್ಲ. ಹಾಗೆಂದು ಮಾಹೆ ಮಹಾಮಹಿಮರಿಂದ ಹಿಡಿದು ಪೊಲೀಸರ ತನಕ, ಅಲ್ಲಿಯ ವಿದ್ಯಾರ್ಥಿಗಳಿಂದ ಹಿಡಿದು ಇಡೀ ಮೆಡಿಕಲ್-ಇಂಜಿನಿಯರಿಂಗ್, ಇನ್ನಿತರ ವೃತ್ತಿ ಕೋರ್ಸ್‌ನ ಶಿಕ್ಷಣ ಪ್ರಪಂಚಕ್ಕೆ ಗೊತ್ತಿರುವ ಸತ್ಯ! ಹುಡುಗಿಯರಿಗೆ-ಪಾಲಕರಿಗೆ ಮಾನ-ಮರ್ಯಾದೆಯ ಅಂಜಿಕೆಯಾದರೆ, ಮಾಹೆಯ ಕ್ಯಾಪಿಟೇಶನ್ ಕಿಂಗ್ ಬಳಗಕ್ಕೆ ತಮ್ಮ ಬಿಸಿನೆಸ್‌ಗೆ ಧಕ್ಕೆ ಬರುವ ಭಯ. ಪೊಲೀಸರಿಗೋ ಮಾಹೆಯವರ, ಅಧಿಕಾರಸ್ಥ ಪುಢಾರಿಗಳ ಮುಲಾಜು. ಎಲ್ಲ ಪಕ್ಷಗಳ ಆಡಳಿತಗಾರರ ಪಳಗಿಸುವ ಕಲೆ ಪೈ ಮಾಮಾಗಳಿಗೆ ಕರಗತ. ಹೀಗಾಗಿ ಮಾಹೆಯ ಹೈಟೆಕ್ ವೇಶ್ಯಾವಾಟಿಕೆ, ರೇಪ್ ರಗಳೆಗಳೆಲ್ಲ ಯಾವ ಎಗ್ಗಿಲ್ಲದೇ ರಾಜಾರೋಷವಾಗೇ ನಡೆಯುತ್ತದೆ. ಕಾನೂನು ಕ್ರಮ ಕೈಗೊಳ್ಳುವ ದಮ್ ಯಾರಿಗೂ ಇಲ್ಲ.

ಮಣಿಪಾಲದಲ್ಲಿ ಮತ್ತು ಮಾಹೆ ಪರಿಸರದಲ್ಲಿ ರೇಪ್-ಡ್ರಗ್-ಸೆಕ್ಸ್ ಮಾಫಿಯಾ ಎಜುಕೇಷನ್ ಮಾಫಿಯಾದೊಂದಿಗೆ ಥಳುಕು ಹಾಕಿಕೊಂಡು ಕಾರ್ಯಾಚರಣೆ ನಾಜೂಕಾಗಿ ನಡೆಸುತ್ತಾ ಬಂದಿದೆ. ಅನಾದಿಕಾಲದಿಂದ ಮಾಹೆ ಕ್ಯಾಂಪಸ್‌ನಲ್ಲಿ ಬೇರುಬಿಟ್ಟಿರುವ ಗಾಂಜಾ-ಬ್ರೌನ್‌ಶುಗರ್ ಮಾಫಿಯಾ ಅಸಹಾಯಕ ಹುಡುಗಿಯರನ್ನು ಟಾರ್ಗೆಟ್ ಮಾಡಿಕೊಂಡು ಚಟ ಬೇಟೆಯಾಡುತ್ತಿದೆ. ಇದೊಂದು ವೃತ್ತಿನಿರತ ರೇಪಿಸ್ಟ್ ಗ್ಯಾಂಗ್. ಅಮಲುಕೋರ ಹುಡುಗಿಯರನ್ನು ಹೊತ್ತೊಯ್ಯುವ ಅಥವಾ ಅವರು ಪ್ರಜ್ಞೆ ಕಳಕೊಂಡಾಗ ಬಳಸಿಕೊಳ್ಳುವ ಹಿಕಮತ್ತುದಾರರಿವರು. ಒಮ್ಮೊಮ್ಮೆ ಈ ಹಿಂಸ್ರ ಮೃಗಗಳಿಗೆ ಪಾಪದ, ಕಲಿಕೆಯ ಧ್ಯೇಯೋದ್ದೇಶದ ಸಂಭಾವಿತ ಹುಡುಗಿಯರು ಬಲಿಯಾಗುತ್ತಾರೆ. ಮೊನ್ನೆ ಆಗಿದ್ದೂ ಹಾಗೇ ಎಂಬ ತರ್ಕ ಈಗ ನಡೆದಿದೆ.

ಕಿಡ್‌ನ್ಯಾಪ್ ಮಾಡಿದ ರಿಕ್ಷಾಕ್ಕೆ ಎರಡು ಹೆಡ್‌ಲೈಟ್‌ಗಳಿದ್ದವು. ಅದು ಬಜಾಜ್ ರಿಕ್ಷಾ ಎಂದು ಅಂದಾಜಿಸಬಹುದು. ಹಾಗೆಯೇ ರಿಕ್ಷಾದ ಒಳಗಿನ ಗಣಪತಿ ಫೋಟೋಕ್ಕೆ ಎಲ್‌ಸಿಡಿ ಲೈಟ್‌ನ ಶೃಂಗಾರ ಮಾಡಲಾಗಿತ್ತು. ಆದರೆ ನಂಬರ್ ಪ್ಲೇಟ್ ತುಂಬ ಅಸ್ಪಷ್ಟವಾಗಿತ್ತು. ರೇಪ್ ಮುಗಿಸಿದ ನಂತರ ಹುಡುಗಿಯನ್ನು ಆಕೆಯ ಹಾಸ್ಟೆಲ್ ಬಳಿ ತಂದು ಬಿಡುವ ಧೈರ್ಯ ಸ್ಥಳೀಯರಿಗೆ ಮಾತ್ರ ಇರಲು ಸಾಧ್ಯ ಮತ್ತು ಇಂಥ ಅತ್ಯಾಚಾರದಲ್ಲಿ ಪಳಗಿದವರು ಈ ಪಾಪಿಗಳು ಎಂಬುದು ನಿಸ್ಸಂದೇಹವಾಗಿ ದೃಢವಾಗುತ್ತದೆ.

ಕೆಎಂಸಿ ಅಂದರೆ ಮಾಹೆ ಆಡಳಿತಗಾರ ಡಾ. ರಾಮದಾಸ್ ಪೈಗಳ ಸುಪರ್ದಿಯಲ್ಲಿರುವ ಆಸ್ಪತ್ರೆ. ಇಲ್ಲಿರುವ ವೈದ್ಯರು-ನರ್ಸ್‌ಗಳು-ಆಯಾಗಳೆಲ್ಲ ಪೈ ಫ್ಯಾಮಿಲಿಯ ಗುಲಾಮರಂತೆಯೇ ಇರಬೇಕು. ಅದಿಲ್ಲದಿದ್ದರೆ ನೌಕರಿ ಸಿಗದು. ಈಗ ಆಗುವ ರೇಪ್ ಎಕ್ಸ್‌ಪೋಸ್‌ನಿಂದ ಮಾಹೆಯ ಮರ್ಯಾದೆ ಮುಕ್ಕಾಗಿದೆ. ಡಾ. ಪೈ ಮಾಮಾನ ಮಾಲಮ್ ಡ್ಯಾಮೇಜ್ ಕಂಟ್ರೋಲ್‌ಗೆ ತಿಪ್ಪರಲಾಗ ಹಾಕುತ್ತಿದೆ ಸುಮಾರು 50 ದೇಶದ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಅಷ್ಟು ವ್ಯವಸ್ಥಿತ ಮಾರ್ಕೆಟಿಂಗ್ ಮಾಡಿ ಶಿಕ್ಷಣ ದಂಧೆ ನಡೆಸುತ್ತಿರುವ ಪೈಗಳಿಗೆ ಇದು ಬೇಡದ ಭಾನಗಡಿ

● ನವೀನ

# ಡ್ರಗ್ಸ್-ಕುಡಿತ-ಕುಣಿತದ ಕೇಂದ್ರ

ಸುಮಾರು ಐವತ್ತು ದೇಶಗಳಿಂದ ಬಂದಿರುವ ಹನ್ನೊಂದು ಸಾವಿರದಷ್ಟು ವಿದ್ಯಾರ್ಥಿಗಳಿರುವ ಮಣಿಪಾಲದಲ್ಲಿ ನಾನಾ ರೀತಿಯ ಶೈಕ್ಷಣಿಕ ಕೋರ್ಸುಗಳು, ಹಾಸ್ಟೆಲುಗಳು, ಹೋಟೇಲುಗಳು, ಇಂಟರ್‌ನೆಟ್ ಸೆಂಟರ್‌ಗಳಿವೆ. ಇವೆಲ್ಲಾ ಓದುವವರಿಗೆ ಬೇಕಾದ ಸವಲತ್ತುಗಳು. ಆದರೆ ಪಬ್ಬು ಬಾರು, ಡಿಸ್ಕೊ ಥೆಕ್‌ಗಳು...!

ಮಣಿಪಾಲ ಮತ್ತು ಸುತ್ತಮುತ್ತ 25 ರೆಸಾರ್ಟ್‌ಗಳು, 75 ರೆಸ್ಟೊರೆಂಟ್‌ಗಳು ಡಜನ್‌ಗಟ್ಟಲೆ ಪಬ್ ಹಾಗೂ ಬಾರುಗಳಿವೆ. ಬ್ಲೂ ವಾಟರ್ಸ್, ಎಡ್ಜ್ ಸ್ಕೈಲಾಂಜ್, ಕಾಕ್ಸ್ ಅಂಡ್ ಮೊಕ್ಸ್, ಪ್ಲಾನೆಟ್ ಕೆಫೆ, ಕೆಫೆ 18... ಎಂಬಿತ್ಯಾದಿ ಮೋಜು ಮಸ್ತಿಗಳ ಸೆಂಟರ್‌ಗಳಲ್ಲಿ ಪ್ರತಿರಾತ್ರಿ ಭರ್ಜರಿ ಕುಡಿತ, ಕುಣಿತಗಳಿರುತ್ತವೆ. ಲಕ್ಷಾಂತರ ರೂಪಾಯಿ ಹರಿದಾಡುತ್ತದೆ.

ಇದಕ್ಕೆ ಕಿರೀಟವಿಟ್ಟಂತೆ ಡ್ರಗ್ಸ್ ದಂಧೆಯೂ ನಿರಾತಂಕವಾಗಿ ನಡೆಯುತ್ತಿದೆ. 2013ರ ಮೊದಲ ಆರು ತಿಂಗಳಲ್ಲೇ ಮಣಿಪಾಲ ಪೊಲೀಸರು ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಒಟ್ಟು ಹತ್ತು ಮಂದಿ ಡ್ರಗ್ಸ್ ಮಾರಾಟಗಾರರನ್ನು ಅರೆಸ್ಟ್ ಮಾಡಿದ್ದಾರೆ. ಇಲ್ಲಿ ವಶಪಡಿಸಿಕೊಂಡ ಗಾಂಜಾ ಪ್ರಮಾಣ 5 ಕೆ.ಜಿಗೂ ಹೆಚ್ಚಿದೆ..!

2013ರ ಫೆಬ್ರುವರಿಯಲ್ಲಿ ಮಣಿಪಾಲ್ ಲೇಕ್ ಹತ್ತಿರ ಗೋವಿಂದ ಸ್ವಾಮಿ, ಅಜ್ಜಣ್ಣ, ಧರ್ಮಪ್ಪ ಎಂಬ ಸಾಗರದ ವ್ಯಕ್ತಿಗಳಿಂದ 2, 3 ಕೆಜಿ ಗಾಂಜಾ ವಶವಾಗಿತ್ತು. ಅದೇ ತಿಂಗಳಲ್ಲಿ ವಿನಾಯಕ ಹಾಗೂ ಸಫೀನಾ ಎಂಬಾಕೆಯನ್ನು ಅರೆಸ್ಟ್ ಮಾಡಿ ಒಂದೂವರೆ ಕೆಜಿ ಗಾಂಜಾ ಸೀಜ್ ಮಾಡಲಾಗಿತ್ತು. 2013ರ ಜೂನ್ ತಿಂಗಳಲ್ಲಿ ಇಂದ್ರಾಳಿ ರೇಲ್ವೆ ಕ್ರಾಸ್ ಹತ್ತಿರ ಐವರು ವಿದ್ಯಾರ್ಥಿಗಳಾದ ಶಶಾಂಕ್, ತಂಗಳಾಯ, ಗಾಡ್ವಿನ್, ಶೆನಿನ್, ಆಕಾಶ್ ಸಾಲಿಯಾನರನ್ನು ಹೆರಾಯಿನ್ ಸಮೇತ ಪೊಲೀಸರು ಬಂಧಿಸಿದ್ದರು.






ಡ್ರಗ್ಸ್ ದಂಧೆಯವರ ಬಂಧನ

ಮಣಿಪಾಲದ ಪೈಗಳ ಶಿಕ್ಷಣ ಸಾಮ್ರಾಜ್ಯದಲ್ಲಿ ಇಂತಹ ಕಾನೂನುಬಾಹಿರ ಅನೈತಿಕ ಕೆಲಸಗಳಿಗೆ ನಿರ್ಬಂಧವಿಲ್ಲ. ಅಲ್ಲಿನ ಪೊಲೀಸರಂತೂ ಡ್ರಗ್ಸ್ ದಂಧೆ ಮಟ್ಟ ಹಾಕುವ ಯೋಚನೆಯನ್ನೂ ಮಾಡುತ್ತಿಲ್ಲ. ಮಣಿಪಾಲದ ಪಬ್-ಬಾರ್‌ಗಳಲ್ಲಿ ರಾಜಾರೋಷವಾಗಿಯೆ ಕಾನೂನುಬಾಹಿರ ಕೃತ್ಯಗಳಿಗೆ ಅವಕಾಶ ನೀಡಲಾಗುತ್ತಿದೆ.

ಇಂತಹ ವಿದ್ಯಮಾನಗಳೆಲ್ಲವೂ ಕ್ರಿಮಿನಲ್‌ಗಳಿಗೆ ಪ್ರಚೋದನೆ ನೀಡುವಂತದ್ದೇ ಆಗಿದೆ.

ಪೈಗಳಿಗೆ ದುಡ್ಡು ಮಾಡುವುದು ಬಿಟ್ಟರೆ ಬೇರೆ ಯೋಚನೆಗಳೇನೂ ಇಲ್ಲ ಹಾಗಾಗಿ

# ಈ ದುಷ್ಟಮೃಗಗಳು ಸಿಕ್ಕಿಬಿದ್ದಿದ್ದು ಹೇಗೆ?

ಉಡುಪಿ ಪೊಲೀಸರು ತಮ್ಮ ಹಳೆಯ ಜಾಯಮಾನವನ್ನು ಪಕ್ಕಕ್ಕಿಟ್ಟು ಆರೋಪಿಗಳನ್ನು ಜಾಲಾಡಲು ತೀವ್ರ ಕಾರ್ಯಾಚರಣೆಗಿಳಿದಿದ್ದರು. ಉಡುಪಿ ಎಸ್‌ಪಿ ನೇತೃತ್ವದಲ್ಲಿ ಸುಮಾರು 200 ಮಂದಿ ಪೊಲೀಸರನ್ನು ಆರು ತಂಡಗಳಲ್ಲಿ ನಿಯೋಜಿಸಲಾಗಿತ್ತು. ಆದರೂ ಆರೋಪಿಗಳ ಖಚಿತ ಸುಳಿವು ಸಿಕ್ಕಿರಲಿಲ್ಲ. ಸಿಸಿಟಿವಿಗಳಲ್ಲಿ ದಾಖಲಾಗಿದ್ದ ಚಿತ್ರಗಳಂತೂ ಬಹಳ ಕಳಪೆಯಾಗಿದ್ದವು. ಪ್ರತಿವರ್ಷ ನೂರಾರು ಕೋಟಿಗಳನ್ನು ಲೂಟಿ ಹೊಡೆಯುವ ಪೈಗಳು ತಮ್ಮ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಕನಿಷ್ಠ ಉತ್ತಮ ಗುಣಮಟ್ಟದ ಕ್ಯಾಮೆರಾಗಳಿಗಾದರೂ ಒಂದಷ್ಟು ಹಣ ವ್ಯಯಿಸುವಷ್ಟು ಉದಾರಿಗಳಾಗಿಲ್ಲ. ಇದೆಲ್ಲಾ ಒಂದು ಕಡೆ ಇರಲಿ.

ಮತ್ತೊಂದು ಕಡೆ ಪೊಲೀಸರು ಎಲ್ಲಾ ರೌಡಿ ಶೀಟರ್‌ಗಳನ್ನು ವಿಚಾರಣೆಗಾಗಿ ಠಾಣೆಗೆ ಹಾಜರಾಗುವಂತೆ ತಾಕೀತು ಮಾಡಿದ್ದರು. ಆದರೆ ಈಗ ಸಿಕ್ಕಿಬಿದ್ದಿರುವ ಆಟೋಚಾಲಕ ಯೋಗೀಶ್ ಠಾಣೆಗೆ ಹೋಗಿರಲಿಲ್ಲ. ಈ ವಿಷಯ ಆ ಏರಿಯಾದ ಕಾಂಗ್ರೆಸ್ ಮುಖಂಡ ಸುಖೇಶ್ ಕುಂದರ್ ಗಮನಕ್ಕೆ ಬಂತು. ಸುಖೇಶ್ ಕುಂದರ್ ಹೆರ್ಗಾ ವಾರ್ಡ್‌ನಿಂದ ಉಡುಪಿ ನಗರಸಭೆಗೆ ಸ್ಪರ್ಧಿಸಿದ್ದ ಅಭ್ಯರ್ಥಿ. ಹೀಗಾಗಿ ಅವರಿಗೆ ಏರಿಯಾದ ಜನರ ಬಗ್ಗೆ ಮಾಹಿತಿ ಇತ್ತು. ಯೋಗೀಶ್ ಚಲನವಲನದ ಬಗ್ಗೆ ಮೊದಲೇ ಗುಮಾನಿಯಿದ್ದಿದ್ದರಿಂದ ಆತನನ್ನು ಕರೆದು ವಿಚಾರಿಸಿದರು. ಆಗ ಆತ ಈ ಕುಕೃತ್ಯದಲ್ಲಿ ಪಾಲ್ಗೊಂಡಿರುವುದು ಖಚಿತವಾಯ್ತು. ಪೊಲೀಸರಿಗೆ ಶರಣಾಗುವಂತೆ ಎಚ್ಚರಿಕೆ ನೀಡಿದ ಸುಖೇಶ್ ಈ ಸಂಗತಿಯನ್ನು ಪೊಲೀಸರಿಗೆ ಮುಟ್ಟಿಸಿದರು.

ನಂತರ ಪೊಲೀಸರಿಂದ ಯೋಗೀಶ್‌ಗೆ ಒಂದು ಫೋನ್‌ಕಾಲ್ ಹೋಗಿದ್ದೇ ತಡ; ಇನ್ನು ತಾನು ಸಿಕ್ಕಿಬೀಳುವುದು ಖಚಿತ ಎಂಬುದು ಯಾವಾಗ ನಿಕ್ಕಿಯಾಯಿತೋ ಯೋಗೀಶ್ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ. ಕುಟುಂಬದವರು ಆತನನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಈಗ ಹಾಲಿ ಪೊಲೀಸರ ವಶದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಈ ಮೂವರೂ ಆರೋಪಿಗಳು ಸ್ಥಳೀಯರೇ. ಆನಂದ ಮತ್ತು ಹರೀಶ ಹರ್ಗಳದವರು, ಯೋಗೀಶ ಹಿರಿಯಡ್ಕದವನು. ಈಗ ತಲೆ ಮರೆಸಿಕೊಂಡಿರುವ ಆನಂದನಿಗೆ ತನ್ನ ಪತ್ನಿಯ ಮೂಲಕ ಈ ವಿದ್ಯಾರ್ಥಿನಿಯ ಪರಿಚಯವಿತ್ತೆಂದು ಹರೀಶ್ ತಿಳಿಸಿದ್ದಾನೆ. ಅಂದು ಮೂವರು ಕಂಠಪೂರ್ತಿ ಕುಡಿದಿದ್ದರು. ಕುಡಿದ ಅಮಲಿನಲ್ಲಿ ಈ ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ.

ಬಿಜೆಪಿ ಆಡಳಿತದ ಕಾಲದಲ್ಲಾಗಿದ್ದರೆ ಸಂಘ ಪರಿವಾರಿಗಳು "ತಡರಾತ್ರಿ ಮಹಿಳೆ ಮನೆಯಿಂದ ಹೊರಬರುವುದು ನಮ್ಮ ಸಂಸ್ಕೃತಿಯಲ್ಲ" ಎಂದು ಚೀರುತ್ತಿದ್ದುದು ಗ್ಯಾರಂಟಿ. ತಾಗೆ ಪೊಲೀಸರು "ಆ ಹುಡುಗಿಯ ದಿರಿಸ್ ಪ್ರಚೋದನಕಾರಿಯಾಗಿತ್ತು" ಎಂದು ಹೇಳಿಕೆ ನೀಡದೆ ಚುರುಕಾಗಿ ಕಾರ್ಯಪ್ರವೃತ್ತರಾಗಿದ್ದಕ್ಕೆ ಅವರಿಗೆ ಅಭಿನಂದನೆಗಳು.

# ಹಾಸನ: ಮುಂದುವರೆದ ರೇವಣ್ಣನ ದರ್ಬಾರು

ರಾಜ್ಯದಲ್ಲಿ ಜೆಡಿಎಸ್ ಸರ್ಕಾರವಿರಲಿ, ಬಿಜೆಪಿ ಸರ್ಕಾರವೇ ಇರಲಿ ಅಥವಾ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರಲಿ, ಹಾಸನ ಜಿಲ್ಲೆಯಲ್ಲಿ ಮಾತ್ರ ಹೆಚ್.ಡಿ.ರೇವಣ್ಣನೇ ದಳಪತಿ!

ಈ ಹಿಂದೆ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದಾಗ ಜಿಲ್ಲೆಯಲ್ಲಿ ರೇವಣ್ಣನ ದರ್ಬಾರು ಪ್ರಾರಂಭವಾಯಿತು. ಬಿಜೆಪಿ ಅಧಿಕಾರಕ್ಕೆ ಬಂದರೂ ಇಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಕಾರಣ ಹಾಸನ ಜಿಲ್ಲೆಯಲ್ಲಿ ಬಿಜೆಪಿಗೆ ತಳಮಟ್ಟದ ಕಾರ್ಯಕರ್ತರೇ ಇಲ್ಲ. ಆದರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪ್ರಬಲವಾಗಿದ್ದರೂ, ಈಗ ಆ ಪಕ್ಷ ಬೆಂಗಳೂರಿನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದರೂ ಹಾಸನದಲ್ಲಿ ರೇವಣ್ಣನ ದರ್ಬಾರೇ ಮುಂದುವರೆದಿದೆ.



ಇತ್ತೀಚಿನ ಚುನಾವಣೆಯಲ್ಲಿ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಪೈಕಿ ಬೇಲೂರು ಹಾಗೂ ಅರಕಲಗೂಡು ವಿಧಾನಸಭಾ ಕ್ಷೇತ್ರಗಳಲ್ಲಿ ಎರಡನೇ ಬಾರಿಗೆ ಕಾಂಗ್ರೆಸ್ ಜಯಭೇರಿ ಬಾರಿಸಿತು. ಜಿಲ್ಲೆಯ ಕೇಂದ್ರ ಸ್ಥಾನವಾದ ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಜೆಡಿಎಸ್‌ಗೆ ತೀವ್ರ ಪೈಪೋಟಿ ನೀಡಿ 4000 ಮತಗಳ ಅಂತರದಿಂದ ಪರಾಭವಗೊಂಡಿತು. ಉಳಿದ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲೂ ಕಾಂಗ್ರೆಸ್‌ನದ್ದು ಗಣನೀಯ ಸಾಧನೆಯೇ.

## ರೇವಣ್ಣನನ್ನು ಕಂಡ್ರೆ ಸಿದ್ದರಾಮಣ್ಣಂಗೆ ಪ್ರೀತಿ


ಅರಕಲಗೂಡು ಕ್ಷೇತ್ರದಿಂದ ಗೆದ್ದು ಕಾಂಗ್ರೆಸ್ ಶಾಸಕರಾಗಿರುವ ಎ.ಮಂಜು ಅವರಿಗೆ ಕೊನೆ ಕ್ಷಣದಲ್ಲಿ ಮಂತ್ರಿ ಸ್ಥಾನ ಕೈ ತಪ್ಪಿದ್ದು ಮತ್ತು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳು ಕಳೆಯುತ್ತಾ ಬರುತ್ತಿದ್ದರೂ ಜಿಲ್ಲೆಗೆ ಉಸ್ತುವಾರಿ ಸಚಿವರು ಆಗಮಿಸದೇ ಇರುವುದು ಇಲ್ಲಿ ವಿಚಿತ್ರ ರಾಜಕೀಯ ಲೆಕ್ಕಾಚಾರಗಳನ್ನು ಹುಟ್ಟುಹಾಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಆರಂಭದಲ್ಲಿ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ ಮಹದೇವಪ್ರಸಾದ್ ಅವರನ್ನು ನೇಮಿಸಿತ್ತು. ಆದರೆ ಮಹದೇವಪ್ರಸಾದ್‌ಗೆ ಹಾಸನ ಜಿಲ್ಲಾ ಉಸ್ತುವಾರಿ ಬಗ್ಗೆ ನಿರಾಸಕ್ತಿ ಇತ್ತೋ ಏನೋ, ಅವರು ಅಪ್ಪಿತಪ್ಪಿಯೂ ಹಾಸನದ ಹಾದಿ ತುಳಿಯಲಿಲ್ಲ.

ಇದಾಗಿ ಕೆಲವೇ ದಿನಗಳ ನಂತರ ಹಾಸನ ಜಿಲ್ಲಾ ಉಸ್ತುವಾರಿಯನ್ನು ಸಿದ್ದರಾಮಯ್ಯನವರಿಗೆ ಆಪ್ತರಾದ ಲೋಕೋಪಯೋಗಿ ಸಚಿವ ಮಹದೇವಪ್ಪನವರಿಗೆ ವಹಿಸಲಾಯಿತು. ಇದಾದ ಎರಡೇ ದಿನಗಳಲ್ಲಿ ವಿಧಾನ ಸಭೆಯ ಅಧಿವೇಶನ ಆರಂಭಗೊಂಡಿತು. ಅಧಿವೇಶನ ಮುಗಿದ ಬಳಿಕ ಮಹದೇವಪ್ಪನವರು ಜಿಲ್ಲೆಗೆ ಆಗಮಿಸುತ್ತಾರೆ ಎಂಬ ನಿರೀಕ್ಷೆ ಜಿಲ್ಲಾ ಕಾಂಗ್ರೆಸ್ಸಿಗರಲ್ಲಿತ್ತು. ಆದರೆ ಯಾಕೋ ಏನೋ ಅಧಿವೇಶನ ಮುಗಿದು ಹದಿನೈದು ದಿನ ಕಳೆದರೂ ಮಹದೇವಪ್ಪ ಹಾಸನ ಕಡೆ ತಲೆ ಹಾಕಿಲ್ಲ.

ನೆಪಕ್ಕೆ ಎಂಬಂತೆ ಬೆಂಗಳೂರಿನಲ್ಲೇ ಹಾಸನ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಭೆಯನ್ನು ಮಹದೇವಪ್ಪ ಮಾಡಿ ಮುಗಿಸಿದ್ದಾರೆ. ಅವರನ್ನು ಜಿಲ್ಲೆಗೆ ಕರೆಯಲು ಹೋದ ಕಾಂಗ್ರೆಸ್ಸಿಗರ ಮುಂದೆ ಮಹದೇವಪ್ಪ "ರೇವಣ್ಣ, ದೇವೇಗೌಡ" ಎಂದೆಲ್ಲ ಹೇಳಿ ಕಳುಹಿಸಿದ್ದಾರೆ. ಇದು ಸಹಜವಾಗಿಯೇ ಜಿಲ್ಲೆಯ ಜೆಡಿಎಸ್ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿದೆ. ಅವರೆಲ್ಲ ಈಗ "ರಾಜ್ಯಕ್ಕೆ ಸಿದ್ರಾಮಣ್ಣ ಮುಖ್ಯಮಂತ್ರಿಯಾದ್ರೇನು, ಹಾಸನ ಜಿಲ್ಲೆಗೆ ನಮ್ಮ ರೇವಣ್ಣನೇ ದಳಪತಿ" ಎಂದು ಕುಣಿದಾಡುತ್ತಿದ್ದಾರೆ.

ಬಲ್ಲ ಮೂಲಗಳ ಪ್ರಕಾರ ಹಿಂದಿನಿಂದಲೂ ಸಿದ್ದರಾಮಯ್ಯನವರ ಬಗ್ಗೆ ರೇವಣ್ಣನಿಗೆ ಇನ್ನಿಲ್ಲದ ಗೌರವ. ಹಾಗಾಗಿ ದೇವೇಗೌಡರು, ಕುಮಾರಸ್ವಾಮಿ ಜೊತೆಗೆ ಸಿದ್ದರಾಮಯ್ಯನವರ ಸಂಬಂಧ ಹದಗೆಟ್ಟರೂ ರೇವಣ್ಣ ಜೊತೆಗಿನ ಸಂಬಂಧ ಕೆಟ್ಟಿರಲಿಲ್ಲ. ದೇವೇಗೌಡರು ಮತ್ತು ಕುಮಾರಸ್ವಾಮಿ ಸಿದ್ದರಾಮಯ್ಯನವರ ವಿರುದ್ಧ ವಾಗ್ದಾಳಿ ನಡೆಸಿದಾಗಲೂ ರೇವಣ್ಣ ಮಾತ್ರ ಸಿದ್ದರಾಮಯ್ಯನವರ ವಿರುದ್ಧ ತುಟಿ ಬಿಚ್ಚಿರಲಿಲ್ಲ. 'ಯಾಕ್ ಸ್ವಾಮಿ ಹೀಗೆ?' ಎಂದು ಯಾರಾದರು ಕೇಳಿದರೆ "ಅದೆಲ್ಲಾ ದೊಡ್ಡೋರ್ ವಿಚಾರ ಬುಡಿ. ನಮ್ಮಂತಹ ಸಣ್ಣವರಿಗೆ ಅದೆಲ್ಲಾ ಯಾಕೆ ಅಲ್ಲವಾ?" ಎನ್ನುತ್ತ ರೇವಣ್ಣ ಮುಗ್ಧರಂತೆ ವರ್ತಿಸುತ್ತಿದ್ದರು! ಈ ರಾಜಕೀಯ ಮರ್ಮವೇ ಇವತ್ತು ಹಾಸನ ಜಿಲ್ಲೆಗೆ ಉಸ್ತುವಾರಿ ಸಚಿವರು ಆಗಮಿಸಲು ಹಿಂದೇಟು ಹಾಕುತ್ತಿರುವುದಕ್ಕೆ ಕಾರಣವೆನ್ನಲಾಗುತ್ತಿದೆ. ಇದೆಲ್ಲದರ ಪರಿಣಾಮವಾಗಿ ಜಿಲ್ಲಾಧಿಕಾರಿಗಳಿಂದ ಹಿಡಿದು ಇಲ್ಲಿಯ ಡಿ ದರ್ಜೆ ನೌಕರನವರೆಗೆ ಎಲ್ಲರೂ 'ರೇವಣ್ಣ ಉಫ್, ಉಫ್' ಎನ್ನುತ್ತಿದ್ದಾರೆ.



ಬಿಜೆಪಿ ಸರ್ಕಾರದ ಅವಧಿಯಲ್ಲಿ ಉಸ್ತುವಾರಿ ಸಚಿವರು ಹಾಸನದಲ್ಲಿ ಅಧಿಕಾರ ನಡೆಸುವುದಿರಲಿ, ಜಿಲ್ಲೆಗೆ ಹೆಜ್ಜೆ ಇಡಲೂ ಹಿಂದೇಟು ಹಾಕುವಂತೆ ರೇವಣ್ಣ ನೋಡಿಕೊಂಡಿದ್ದರು. ಅದು ಯಾವ ಮಟ್ಟಕ್ಕೆ ಹೋಗಿತ್ತೆಂದರೆ ರೇವಣ್ಣನವರ ಉಪಸ್ಥಿತಿಯನ್ನು ಕೇಳಿಕೊಂಡು ಜಿಲ್ಲಾ ಉಸ್ತುವಾರಿ ಸಚಿವರೊಬ್ಬರು ಹಾಸನಕ್ಕೆ ಬಂದು ರೇವಣ್ಣನ ಮನೆಗೆ ತೆರಳಿ ಕಾಫಿ ಕುಡಿದು ಹಾಗೆ ಸುಮ್ಮನೆ ಬೆಂಗಳೂರಿಗೆ ವಾಪಸ್ಸಾಗಿದ್ದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದನಂತರ ರೇವಣ್ಣನ ದರ್ಬಾರಿನಿಂದ ಮುಕ್ತಿ ಸಿಗುತ್ತದೆ ಎಂದು ಸ್ಥಳೀಯ ಕಾಂಗ್ರೆಸ್ಸಿಗರು ಆಶಿಸಿದ್ದರು. ಆದರೆ ಈಗಿನ ಉಸ್ತುವಾರಿ ಮಂತ್ರಿ ಕೂಡ ಹಾಸನಕ್ಕೆ ಕಾಲಿಡುವ ಬಗ್ಗೆ ಮೀನಮೇಷ ಎಣಿಸುತ್ತಿರುವುದನ್ನು ನೋಡಿ ಅವರು ಆಘಾತಗೊಂಡಿದ್ದಾರೆ. "ಕಾಂಗ್ರೆಸ್ ಸರ್ಕಾರದಲ್ಲೂ ನಮಗೆ ಇದೆಂತಾ ಸ್ಥಿತಿ ಬಂತು" ಎಂದು ಅವರೆಲ್ಲ ತಲೆ ತಲೆ ಚಚ್ಚಿಕೊಳ್ಳುತ್ತಿದ್ದಾರೆ.

ಇಲ್ಲಿನ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ರೇವಣ್ಣನ ನೆರಳು ಕಂಡರೆ ಥರಥರ ನಡುಗುತ್ತಾರೆ. ರೇವಣ್ಣನ ಸುಗ್ರೀವಾಜ್ಞೆಗಳನ್ನು ಚಾಚೂತಪ್ಪದೆ ಅನುಷ್ಠಾನಕ್ಕೆ ತರುತ್ತಾರೆ. ಹಿರಿಯ ಅಧಿಕಾರಿಗಳ ಭಯವನ್ನು ಕಂಡು ಕಿರಿಯ ಅಧಿಕಾರಿಗಳೂ ತೆಪ್ಪಗಾಗಿದ್ದಾರೆ.

## ರೇವಣ್ಣನ ಅಧಿಕಾರದ ಒಂದು ಸ್ಯಾಂಪಲ್

ಜಿಲ್ಲೆಯಲ್ಲಿ ಈ ಹಿಂದೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಅಂಜನ್ ಕುಮಾರ್ ಎಂಬ ಅಧಿಕಾರಿ ಇದ್ದರು. ಒಂದು ದಿನ ನಗರದ ಪ್ರವಾಸಿಮಂದಿರದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರೇವಣ್ಣನೊಂದಿಗೆ ಚರ್ಚಿಗಿಳಿದಿದ್ದರು. ಆ ಸಂದರ್ಭದಲ್ಲಿ ಬೇಲೂರು ತಾಲ್ಲೂಕಿನ ಹಗರೆ ಗ್ರಾಮದಲ್ಲಿದ್ದ ಮದ್ಯದಂಗಡಿಯನ್ನು ತೆರವು ಮಾಡುವಂತೆ ರೇವಣ್ಣ ಹೊರಡಿಸಿದ್ದ ಆಜ್ಞೆಯನ್ನು ಪಾಲಿಸದಿದ್ದಕ್ಕೆ ಅಂಜನ್ ಕುಮಾರ್ ವಿರುದ್ಧ ಕಿಡಿ ಕಾರಿದ ರೇವಣ್ಣ ಅಲ್ಲಿಯೇ ಇದ್ದ ಎಸ್ಪಿ ಅಮಿತ್ ಸಿಂಗ್ ಅವರಿಗೆ "ರೀ ಎಸ್.ಪಿ ಅವರೇ, ಇವರನ್ನ ಅರೆಸ್ಟ್ ಮಾಡ್ರಿ" ಎಂದು ಆದೇಶಿಸಿದ್ದರು!



ರೇವಣ್ಣನ ಈ ಅಬ್ಬರದ ಆಜ್ಞೆ ಕೇಳಿಸಿಕೊಂಡ ಎಸ್ಪಿ ಅಮಿತ್ ಸಿಂಗ್ ಅವರು ತಾವು ಕುಳಿತ ಜಾಗದಿಂದ ಎದ್ದು ಹೋಗಿ ಅಂಜನ್ ಕುಮಾರ್ ಅವರಿಗೆ ಇನ್ನೇನು ಬೇಡಿ ತೊಡಿಸಿಬಿಡುತ್ತೇನೆಂಬ ಭಂಗಿಯಲ್ಲಿ ನಿಂತು ಬಿಟ್ಟರು.

ಅಷ್ಟರಲ್ಲಿ ಅಂದು ಜೆಡಿಎಸ್ ಜಿಲ್ಲಾಧ್ಯಕ್ಷರಾಗಿದ್ದ - ಈಗ ಕಾಂಗ್ರೆಸ್‌ನಲ್ಲಿರುವ - ಮಾಜಿ ರಾಜ್ಯಸಭಾ ಸದಸ್ಯ ಹೆಚ್.ಕೆ.ಜವರೇಗೌಡರು ಮಧ್ಯೆ ಪ್ರವೇಶಿಸಿ "ಹೀಗೆಲ್ಲಾ ಮಾಡಬಾರದು" ಎಂದು ಹೇಳುವ ಮೂಲಕ ವಾತಾವರಣವನ್ನು ತಿಳಿಗೊಳಿಸಿದ್ದರು.

ವಿಪರ್ಯಾಸವೆಂದರೆ ಅಂದು ಆಡಳಿತದಲ್ಲಿದ್ದದ್ದು ಬಿಜೆಪಿ ಸರ್ಕಾರ. ಆಗ ಹೆಚ್.ಡಿ.ರೇವಣ್ಣ ಜೆಡಿಎಲ್‌ಪಿ ನಾಯಕರಾಗಿದ್ದರೆ ಹೊರತು ಜೆಡಿಎಸ್ ಅಧಿಕೃತ ವಿರೋಧ ಪಕ್ಷವೂ ಆಗಿರಲಿಲ್ಲ. ಆದರೂ ರೇವಣ್ಣ ಹೇಳಿದ ತಲೆಬುಡವಿಲ್ಲದ ಆದೇಶಕ್ಕೆ ಎಸ್ಪಿ ಅಮಿತ್ ಸಿಂಗ್ ಅಷ್ಟು ಮಹತ್ವ ನೀಡಿದ್ದರು.

ರೇವಣ್ಣನ ಇಂತಹ ದರ್ಬಾರು ಈಗಿನ ಕಾಂಗ್ರೆಸ್ ಸರ್ಕಾರದಲ್ಲೂ ವಿಜೃಂಭಿಸುತ್ತಿದೆ. ಹಾಸನ ಜಿಲ್ಲೆಗೆ ರೇವಣ್ಣನದ್ದೇ ಖಾಯಂ ಸರ್ಕಾರ ಎಂಬಂತಾಗಿ ಹೋಗಿದೆ. ಜಿಲ್ಲಾ ಕಾಂಗ್ರೆಸ್ಸಿಗರು ಲಬೋ ಲಬೋ ಬಾಯಿ ಬಡಿದುಕೊಳ್ಳದೆ ವಿಧಿ ಇಲ್ಲ ಎಂಬಂತಾಗಿದೆ!


• ವರದಿಗಾರ

# ಮಂಡ್ಯ: ಡಬ್ಲಿಂಗ್ ಜಟಾಪಟಿಗೆ ಕಿಡ್ನ್ಯಾಪ್ ಕಲರ್!


ಜೂನ್ 18ರ ರಾತ್ರಿ ಕೆ.ಆರ್.ಪೇಟೆ ತಾಲ್ಲೂಕಿನ ಮುರುಕನಹಳ್ಳಿ ಫಾರ್ಮ್‌ಹೌಸ್‌ನಲ್ಲಿ ನಡೆದ ಕಿಡ್ನ್ಯಾಪ್ ಪ್ರಕರಣವೆಂಬ ಪ್ರಹಸನದ ಜಾಡು ಕೆದಕುತ್ತಾ ಹೋದರೆ ಮಂಡ್ಯ ಜಿಲ್ಲೆಯಾದ್ಯಂತ ಪಸರಿಸಿಕೊಂಡಿರುವ ಡಬ್ಲಿಂಗ್ ದಂಧೆಯ ಕರಾಳ ಚರಿತ್ರೆ ಬಯಲಾಗುತ್ತಾ ಸಾಗುತ್ತೆ. ಅಪಹರಣ ಪ್ರಕರಣವನ್ನು ಇತ್ಯರ್ಥ ಮಾಡಿದ್ದಷ್ಟಕ್ಕೇ ಪೊಲೀಸರು ತೃಪ್ತರಾಗದೆ ಸರಿಯಾದ್ದೊಂದು ಕಾರ್ಯಾಚರಣೆ ನಡೆಸಿದರೆ ಹಣ ದುಪ್ಪಟ್ಟುಗೊಳಿಸುವ ಡಬ್ಲಿಂಗ್ ದಂಧೆಯ ಜೊತೆಜೊತೆಗೆ ಖೋಟಾನೋಟಿನ ಜಾಲವೂ ತಗುಲಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ಅಸಲಿಗೆ ಜೂನ್ 18ರಂದು ನಡೆದದ್ದು ಇಷ್ಟೇ, ರಾತ್ರಿ ಸುಮಾರು ಒಂಬತ್ತು ಗಂಟೆಯ ವೇಳೆಗೆ ಇನ್ನೋವಾ ಕಾರಿನಲ್ಲಿ ಬಂದ ಐವರು ಅನಾಮಿಕ ವ್ಯಕ್ತಿಗಳು ಫಾರ್ಮ್‌ಹೌಸ್‌ನ ಮಾಲೀಕ 45 ವರ್ಷ ವಯಸ್ಸಿನ ಸಂಪತ್‌ಕೃಷ್ಣ ಎಂಬಾತನನ್ನು ತಮ್ಮ ಜೊತೆ ಕರೆದೊಯ್ದಿದ್ದರು. ಆಮೇಲೆ ನಡೆದದ್ದೆಲ್ಲ ಪೊಲೀಸರು ಒಪ್ಪಿಸುವ ಕಿಡ್ನ್ಯಾಪ್ ವೃತ್ತಾಂತದ ಕಥೆ!


ಪೊಲೀಸರ ಪ್ರಕಾರ, ಹೀಗೆ ಸಂಪತ್‌ಕೃಷ್ಣನನ್ನು ಹೊತ್ತೊಯ್ದ ಅಪಹರಣಕಾರರ ಟೀಮು ಅವನ ಮನೆಗೆ ಫೋನಾಯಿಸಿ 20 ಲಕ್ಷ ರೂ.ಗೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಅಪಹರಣಕ್ಕೊಳಗಾದ ಸಂಪತ್‌ಕೃಷ್ಣನ ಸಹೋದರ ಜಗದೀಶ್ ಎಂಬಾತ ಪಟ್ಟಣ ಪೊಲೀಸರಿಗೆ ದೂರನ್ನು ನೀಡುತ್ತಾನೆ. ತಕ್ಷಣವೇ ಕಾರ್ಯಪ್ರವೃತ್ತರಾದ ಪಟ್ಟಣ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರಂಗಸ್ವಾಮಿ, ಸಿಪಿಐ ಸಂದೇಶ್‌ಕುಮಾರ್ ಮಾರ್ಗದರ್ಶನದಲ್ಲಿ, ಎಸ್ಪಿ ಭೂಷಣ್ ಬೊರಸೆ ನಿರ್ದೇಶನದಂತೆ ತಂಡ ರಚಿಸಿ ಅಖಾಡಕ್ಕಿಳಿದಿದ್ದರು. ಮೊಬೈಲ್ ಕರೆಯ ಟವರ್ ಜಾಡು ಹಿಡಿದ ತಂಡ ಅಪಹರಣಕಾರರಲ್ಲಿ ಪ್ರಮುಖನಾದ ರಂಗನಾಥ್ ಎಂಬಾತನನ್ನು ಬೆಂಗಳೂರಿನಲ್ಲಿ ಹಾಗೂ ಮತ್ತೊಬ್ಬ ಆರೋಪಿ ಯೋಗೇಶ್‌ನನ್ನು ಮಂಡ್ಯದಲ್ಲಿ ಕಾರಿನ ಸಮೇತ ಬಂಧಿಸಿ, ಫಾರಂಹೌಸ್ ಮಾಲೀಕ ಸಂಪತ್‌ಕೃಷ್ಣನನ್ನು ಅಪಹರಣಕಾರರಿಂದ ಬಿಡಿಸಿ ಕರೆತರುವಲ್ಲಿ ಯಶಸ್ವಿಯಾಗಿತ್ತು. ಇನ್ನುಳಿದ ಮೂವರು ಅಪಹರಣಕಾರರಾದ ಮಂಡ್ಯದ ನಾಗರಾಜ್, ಅಶೋಕ್, ದೊಡ್ಡಬಳ್ಳಾಪುರದ ಮಹದೇವ ಪತ್ತೆಗೆ ಬಲೆ ಬೀಸಿ ಕಾಯುತ್ತಿದ್ದಾರಂತೆ. ಅಲ್ಲಿಗೆ ಪೊಲೀಸ್ ಫೈಲಿನಲ್ಲಿ ಅಪಹರಣ ಪ್ರಕರಣವೊಂದು ಸುಖಾಂತ್ಯ ಕಂಡುದಾಗಿ ದಾಖಲಾಗಿ ಹೋಗುತ್ತದೆ. ಆದರೆ ಇಡೀ ಪ್ರಕರಣದ ಅಸಲಿಯತ್ತೇ ಬೇರೆ!



ಸಾರಕ್ಕಿ ರಂಗನಾಥ್




ಯೋಗೇಶ್



ಸಂಪತ್‌ಕೃಷ್ಣ

• ಪೊಲೀಸರು ಬಂಧಿಸಿದರೆನ್ನಲಾದ ಬೆಂಗಳೂರಿನ ಸಾರಕ್ಕಿ ಬಡಾವಣೆಯ ರಂಗನಾಥ್ ಯಾರು? ಅವನು ಉಳಿದ ನಾಲ್ವರ ಜೊತೆ ಸೇರಿ ಮುರುಕನಹಳ್ಳಿಯ ಫಾರಂಹೌಸ್ ಮಾಲೀಕ ಸಂಪತ್‌ಕೃಷ್ಣ ಎಂಬುವರನ್ನು ಏಕೆ ಕಿಡ್ನ್ಯಾಪ್ ಮಾಡಿದ? ಎಂಬ ಪ್ರಶ್ನೆಗಳನ್ನು ಕೆದಕುತ್ತಾ ಹೋದಂತೆ ಅಸಲಿ ಕಥೆ ಅನಾವರಣಗೊಳ್ಳುತ್ತದೆ. ಸುತ್ತಿಬಳಸಿ ಕಿಡ್ನ್ಯಾಪ್‌ನ ಕುಣಿಕೆ ಸುತ್ತಿಕೊಳ್ಳುವುದು ಅಪಹರಣಕ್ಕೊಳಗಾದ ಸಂಪತ್‌ಕೃಷ್ಣನ ತಮ್ಮ ಗೋಪಾಲ್‌ಕೃಷ್ಣ ಅವಧಾನಿ ಮತ್ತು ಅವನ ಡಬ್ಲಿಂಗ್ ದಂಧೆಯ ಕುತ್ತಿಗೆಯನ್ನು.

ಈ ಗೋಪಾಲ್‌ಕೃಷ್ಣ ಅವಧಾನಿ ಹಣವನ್ನು ದುಪ್ಪಟ್ಟು ಮಾಡಿಕೊಡುವುದಾಗಿ ಸಾರಕ್ಕಿಯ ರಂಗನಾಥ್‌ನನ್ನು ನಂಬಿಸಿ ಬರೋಬ್ಬರಿ 70 ಲಕ್ಷ ರೂಪಾಯಿಯನ್ನು ಪಡೆದಿರುತ್ತಾನೆ. ಡಬ್ಲಿಂಗ್ 'ಮ್ಯಾಜಿಕ್'ನಿಂದ ತನ್ನ ಹಣ ಮರಿಹಾಕುತ್ತದೆನ್ನುವ ನಂಬಿಕೆಯಲ್ಲೆ ರಂಗನಾಥ್ ಎಪ್ಪತ್ತು ಲಕ್ಷವನ್ನು ಅವಧಾನಿಯ ಜೋಳಿಗೆಗೆ ಹಾಕಿದ್ದ. ಆದರೆ ಹಣ ಪಡೆದು ತಿಂಗಳುಗಳೇ ಕಳೆದರೂ ಡಬ್ಬಲ್ ಮೊತ್ತದ ಧಮಾಕವಿರಲಿ ತನ್ನ ಅಸಲಿ ಹಣವೇ ವಾಪಸ್ಸು ಬಾರದ ಸೂಚನೆ ಸಿಗುತ್ತಿದ್ದಂತೆಯೇ ತನ್ನ ದುಡ್ಡು ವಾಪಸ್ಸು ಕೊಡುವಂತೆ ರಂಗನಾಥ್, ಅವಧಾನಿಗೆ ಗಂಟು ಬಿದ್ದಿದ್ದ. ಮೊದಮೊದಲು ಸಬೂಬು ಹೇಳಿಕೊಂಡು ಬಂದ ಅವಧಾನಿ ಕ್ರಮೇಣ ರಂಗನಾಥ್‌ನನ್ನು ಅವಾಯ್ಡ್ ಮಾಡಲು ಶುರು ಮಾಡಿದ. ಕೊನೆಕೊನೆಗೆ ಮೊಬೈಲ್ ನಂಬರನ್ನೇ ಬದಲಾಯಿಸಿ ಎಸ್ಕೇಪ್ ಆಗಲು ಹವಣಿಸಿದ್ದ.



ಎಸ್ಪಿ ಭೂಷಣ್ ಬೊರಸೆ

ಕೈಬಿಟ್ಟು ಹೋಗುತ್ತಿದ್ದ ಹಣವನ್ನು ವಸೂ[ಲಿ] ಮಾಡಲೆಂದೇ ರಂಗನಾಥ್ ಹೂಡಿದ ಬೆದರಿಕೆಯ ಐಡಿಯ ಹೀಗೆ ಕಿಡ್ನ್ಯಾಪ್ ರೂಪ ಪಡೆದು ನಿಂತಿದೆ. ಶತಾಯಗತಾಯ ಹಣವನ್ನು ಅವಧಾನಿಯಿಂದ ವಸೂಲಿ ಮಾಡಲೇಬೇಕೆಂ[ಬ] ಹಠಕ್ಕೆ ಬಿದ್ದ ರಂಗನಾಥ್ ಮದ್ದೂರು ತಾಲ್ಲೂಕಿ[ನ] ಚಿಕ್ಕರಸಿನಕೆರೆಯ ಸುವರ್ಣವಾಣಿ ಪತ್ರಿಕೆಯ ವರದಿಗಾ[ರ] ಯೋಗೇಶ್‌ನನ್ನು ಸಂಪರ್ಕಿಸಿ ಹಣ ಕೊಡಿಸಿದರೆ ನಿನಗ[ೆ] ಒಂದಿಷ್ಟು ಪಾಲು ನೀಡುವುದಾಗಿ ನಂಬಿಸಿದ. ಆದರ[ೆ] ಗೋಪಾಲಕೃಷ್ಣನ ಮನೆಗೆ ತಾವಿಬ್ಬರಲ್ಲದೆ ಇನ್ನೂ ಮೂವರ[ನ್ನು] ಜೊತೆ ಕರೆದುಕೊಂಡು ಜೂನ್ 18ರ ಸಂಜೆ ಹೋಗಿದ್ದಾ[ರೆ]

ನಾವಾಗಲೂ ಮಗಳೇ ಎನ್ನುತ್ತಿದ್ದ ವಿವೇಕಾನಂದನನ್ನು ಆಕೆಯೂ ತಂದೆಯಂತೆಯೇ ಕಾಣುತ್ತಿದ್ದಳು. ಪಿಯುಸಿ ತರುವಾಯ ಆಕೆ ಶಂಭುಲಿಂಗೇಶ್ವರ ಬಿಪಿಇಡಿ ಲೇಜಿಗೆ ಸೇರಿದ್ದಳು. ಆದರೂ ವಿವೇಕಾನಂದ ಕ್ರೀಡೆಯ ನೆಪದಲ್ಲಿ ಅವಳ ಸಂಪರ್ಕದಲ್ಲಿದ್ದ. ಗುರುವೆಂಬ ಕಾರಣಕ್ಕೆ ಹಾಗೂ ಟೆನಿಕಾಯ್ಟ್ ಕ್ರೀಡೆಯಲ್ಲಿ ಉತ್ತುಂಗಕ್ಕೇರುವ ಯಕೆಯ ಕಾರಣಕ್ಕೆ ಆಕೆಯೂ ವಿವೇಕಾನಂದನ ಮಾರ್ಗದರ್ಶನ ಪಡೆಯುತ್ತಿದ್ದಳು. ಆದರೆ ಕಾಮುಕ ವಿವೇಕಾನಂದನ ಮನದಲ್ಲಿ ಬೇರೆಯದೇ ಆಲೋಚನೆಗಳಿದ್ದವು.

# ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿದ ಕೀಚಕ ವಿವೇಕಾನಂದ

ಮಂಡ್ಯದ ಕೆ.ಆರ್.ಪೇಟೆಯ ಕ್ಷೇತ್ರ ಶಿಕ್ಷಣಾಧಿಕಾರಿ ಗಿದ್ದ ಪುಟ್ಟಸ್ವಾಮಿಗೌಡ ಅಪ್ರಾಪ್ತ ಬಾಲಕಿಯ ಮೇಲೆ ತರ ಅತ್ಯಾಚಾರವೆಸಗಿದ ಪ್ರಕರಣ ಮಾಸುವ ಮುನ್ನವೇ ಬ್ಬ ಕೀಚಕ ತನ್ನ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ರುವ ಘಟನೆ ಪಾಂಡವಪುರದಲ್ಲಿ ನಡೆದಿರೋದು ದುರದೃಷ್ಟಕರ!

ಪಾಂಡವಪುರದ ಕ್ಯಾತನಹಳ್ಳಿಯ ಶ್ರೀ ವಿಶ್ವೇಶ್ವರಯ್ಯ ಕೇಷನ್ ಟ್ರಸ್ಟ್ ನಡೆಸುತ್ತಿರುವ ಪದವಿ ಪೂರ್ವ ಲೇಜಿನಲ್ಲಿ ದೈಹಿಕ ಶಿಕ್ಷಕನಾಗಿರುವ ಕೀಚಕ ಎಸ್.ಎಸ್. ವೇಕಾನಂದನೇ ಆ ಕಾಮಪಿಪಾಸು. 52 ವರ್ಷದ ವಿಕತ್ತೆಯಾದರೂ ಇವನಲ್ಲಿಯ ಕೆಟ್ಟತನವಿನ್ನೂ ಕಡಿಮೆ ಗಿಲ್ಲ. ತನ್ನ ಮಗಳ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳ ಲೆ ಅತ್ಯಾಚಾರವೆಸಗುವ ಮೂಲಕ ಟೆನಿಕಾಯ್ಟ್ ಯಲ್ಲಿ ರಾಷ್ಟ್ರಮಟ್ಟದಲ್ಲಿ ಖ್ಯಾತಿಗಳಿಸುವ ಭರವಸೆ ಡಿಸಿದ್ದ 22 ವರ್ಷದ ಪ್ರತಿಭಾನ್ವಿತೆಯೊಬ್ಬಳ ಭವಿಷ್ಯವನ್ನೆ ವಾಗಿಸಿದ್ದಾನೆ.

ಕ್ಯಾತನಹಳ್ಳಿ ಗ್ರಾಮದವಳೇ ಆದ ಯುವತಿಯೊಬ್ಬಳು ನು ದೈಹಿಕ ಶಿಕ್ಷಕನಾಗಿದ್ದ ಕಾಲೇಜಿನಲ್ಲೆ ಓದುತ್ತಿದ್ದಳು. ಕಾಯ್ಟ್ ಕ್ರೀಡೆಯಲ್ಲಿ ಆಸಕ್ತಿ ಹೊಂದಿದ್ದ ಯುವತಿಗೆ ವಿವೇಕಾನಂದ ಮೊದಲ ಗುರು. ಕರ್ನಾಟಕ, ದಕ್ಷಿಣ ತು ಸೇರಿದಂತೆ ಪ್ರಮುಖ ತಂಡಗಳನ್ನು ಪ್ರತಿನಿಧಿಸಿ ಯ ಮಟ್ಟದಲ್ಲಿಯೂ ಗುರುತಿಸಿಕೊಂಡಿದ್ದಳು. ವಾಗಲೂ ಮಗಳೇ ಎನ್ನುತ್ತಿದ್ದ ವಿವೇಕಾನಂದನನ್ನು ಯೂ ತಂದೆಯಂತೆಯೇ ಕಾಣುತ್ತಿದ್ದಳು. ಪಿಯುಸಿ ವಾಯ ಆಕೆ ಶಂಭುಲಿಂಗೇಶ್ವರ ಬಿಪಿಇಡಿ ಕಾಲೇಜಿಗೆ ದ್ದಳು. ಆದರೂ ವಿವೇಕಾನಂದ ಕ್ರೀಡೆಯ ನೆಪದಲ್ಲಿ ಸಂಪರ್ಕದಲ್ಲಿದ್ದ. ಗುರುವೆಂಬ ಕಾರಣಕ್ಕೆ ಹಾಗೂ ಕಾಯ್ಟ್ ಕ್ರೀಡೆಯಲ್ಲಿ ಉತ್ತುಂಗಕ್ಕೇರುವ ಬಯಕೆಯ ಣಕ್ಕೆ ಆಕೆಯೂ ವಿವೇಕಾನಂದನ ಮಾರ್ಗದರ್ಶನ ಯುತ್ತಿದ್ದಳು. ಆದರೆ ಕಾಮುಕ ವಿವೇಕಾನಂದನ ಮನದಲ್ಲಿ ಯದೇ ಆಲೋಚನೆಗಳಿದ್ದವು. ಅವ್ಯಾವು ಆ ಯುವತಿಗೆ ರಲಿಲ್ಲ.

ಅಂತಿಮ ವರ್ಷದ ಬಿಪಿಎಡ್ ಪರೀಕ್ಷೆ ಬರೆದು ಾಂಶಕ್ಕಾಗಿ ಕಾಯುತ್ತಿದ್ದ ಆಕೆ ಫಲಿತಾಂಶ ಬಂದನಂತರ ತರಬೇತುದಾರಳಾಗುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದಳು.

ಇದನ್ನು ಅರಿತ ವಿವೇಕಾನಂದ ವಿದ್ಯಾರ್ಥಿನಿಯ ಮನೆಗೆ ತೆರಳಿ ಆಕೆಯ ತಾಯಿಯ ಸಮ್ಮುಖದಲ್ಲೆ ನಿಮ್ಮ ಮಗಳಿಗೆ ಕ್ರೀಡಾಕೋಟಾದಡಿ ಕೆಲಸ ಕೊಡಿಸುತ್ತೇನೆಂದು ನಂಬಿಸಿ ಯುವತಿಯನ್ನು ಜೂನ್ 15ರ ಶನಿವಾರ ಬೆಂಗಳೂರಿಗೆ ಕರೆದೊಯ್ದಿದ್ದ. ತಂದೆಯ ವಯಸ್ಸಿನ ವಿವೇಕಾನಂದನ ಜೊತೆ ಯುವತಿಯೂ ಯಾವ ಅನುಮಾನವಿಲ್ಲದೆ ತೆರಳಿದ್ದಳು. ಸಂಜೆ ವೇಳೆಗೆ ಬೆಂಗಳೂರು ತಲುಪಿದ ವಿವೇಕಾನಂದ ಆಕೆಯನ್ನು ಮೆಜೆಸ್ಟಿಕ್‌ನಲ್ಲಿ ಸುತ್ತಾಡಿಸಿ ಟೈಮ್‌ಪಾಸ್ ಮಾಡಿದ್ದಾನೆ. ರಾತ್ರಿ 10 ಗಂಟೆಯ ವೇಳೆಗೆ ಕೆಲಸದ ಸಂದರ್ಶನ ಮುಂದಕ್ಕೆ ಹೋಗಿದ್ದು ಈಗ ಬಹಳ ಹೊತ್ತಾಗಿರುವುದರಿಂದ ನಾಳೆ ಊರಿಗೆ ಹೋಗೋಣ ಎಂದು ಯುವತಿಯನ್ನು ನಂಬಿಸಿದ್ದ.

ಅವನ ಮಾತಿಗೆ ಒಪ್ಪಿಕೊಂಡ ಯುವತಿ ತನ್ನನ್ನು ಕ್ರೀಡಾ ಹಾಸ್ಟೆಲ್‌ಗೆ ಬಿಡುವಂತೆ ವಿವೇಕಾನಂದನಿಗೆ ಹೇಳಿದ್ದಳು. ಹಾಗಾದರೆ ತನ್ನ ಬಯಕೆ ಈಡೇರುವುದಿಲ್ಲ ಎಂದರಿತ ವಿವೇಕಾನಂದ 'ಈಗ ಹಾಸ್ಟೆಲ್‌ಗೆ ಹೋಗಲು ಬಹಳ ತಡವಾಗುತ್ತದೆ, ಪೊಲೀಸಿನವರು ಸಿಕ್ಕರೆ ಪ್ರಶ್ನೆ ಮಾಡ್ತಾರೆ, ಇಲ್ಲದ ತಾಪತ್ರಯ ಎದುರಾಗುತ್ತೆ' ಅಂತೆಲ್ಲ ಸಬೂಬು ಹೇಳಿ ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಕಮಲ ಲಾಡ್ಜ್‌ಗೆ ಕರೆದೊಯ್ದಿದ್ದ. ತನ್ನದೇ ಊರಿನವರು, ತಂದೆ ಸಮಾನರು ಅದಕ್ಕಿಂತಲೂ ಹೆಚ್ಚಾಗಿ ತನ್ನ ಗುರು ಎಂಬ ಗೌರವದಲ್ಲೆ ಸ್ವಲ್ಪವೂ ಅನುಮಾನಪಡದೆ ಆಕೆ ಲಾಡ್ಜ್‌ಗೆ ತೆರಳಿದ್ದಳು.

ರೂಮಿಗೆ ತೆರಳುತ್ತಿದ್ದಂತೆ ವಿದ್ಯಾರ್ಥಿನಿ ಮಂಚವನ್ನು ಬೇರೆ ಬೇರೆ ಮಾಡುವಂತೆ ಹೇಳಿದರೂ ವಿವೇಕಾನಂದ ಸಭ್ಯತೆಯ ಡೈಲಾಗ್ ಹೊಡೆದು ಆಕೆಯನ್ನು 'ಇಕ್ಕಟ್ಟಿ'ಗೆ ಸಿಲುಕಿಸಿ ಅದರಿಂದಲೂ ಎಸ್ಕೇಪ್ ಆಗಿದ್ದ. ಆಗಲೂ ವಿದ್ಯಾರ್ಥಿನಿ ಸುಮ್ಮನೆ ಮಲಗಿದ್ದಾಳೆ. ಸರಿಸುಮಾರು 11.30ರ ವೇಳೆಗೆ ಕೀಚಕ ವಿವೇಕಾನಂದ ತನ್ನ 'ಕಾಮ'ಗಾರಿ ಶುರುಮಾಡಿದ್ದ. ಮಗಳ ವಯಸ್ಸಿನ ತನ್ನದೇ ವಿದ್ಯಾರ್ಥಿನಿ ಮೇಲೆ ಕಾಮತೃಷೆ ತೀರಿಸಿಕೊಳ್ಳಲು ಮುಂದಾಗಿದ್ದ. ಎಷ್ಟೇ ವಿರೋಧ ವ್ಯಕ್ತಪಡಿಸಿ, ಕೂಗಾಡಿದರೂ ಪ್ರಯೋಜನವಾಗಿಲ್ಲ, ಕ್ರೀಡಾ'ಕೋಟಾ'ದ ವಿವೇಕಾನಂದನೇ ವಿಜೃಂಭಿಸಿದ್ದ ಇಷ್ಟಲ್ಲದೆ ಬೆಳಗಿನ ಜಾವ 5 ಗಂಟೆಯ ಸುಮಾರಿಗೆ ಮತ್ತೊಮ್ಮೆ ಆಕೆಯ ಮೇಲೆ ಅತ್ಯಾಚಾರವೆಸಗುವ ಮೂಲಕ ತಾನೊಬ್ಬ



ವಿವೇಕಾನಂದ

'ಪ್ರೊಫೆಷನಲ್ ರೇಪಿಸ್ಟ್' ಎಂಬುದನ್ನು ಸಾಬೀತುಪಡಿಸಿದ್ದ.

ವಿವೇಕಾನಂದನಿಂದ ಅತ್ಯಾಚಾರಕ್ಕೊಳಗಾದ ಯುವತಿ ಭಾನುವಾರ ತನ್ನ ತಾಯಿ ಹಾಗೂ ಕಾಲೇಜು ಸಹಪಾಠಿ ಆಂಧ್ರಪ್ರದೇಶದ ವಿಶಾಖಪಟ್ಟಣದ ರೊನಾಲ್ಡ್‌ಗೆ ಫೋನ್ ಮಾಡಿ ವಿಷಯವನ್ನೆಲ್ಲ ತಿಳಿಸಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದಳು. ಗೆಳೆಯ ರೊನಾಲ್ಡ್ ಆಕೆಗೆ ಸಮಾಧಾನ ಹೇಳಿ ವಿಶಾಖಪಟ್ಟಣಕ್ಕೆ ಬರುವಂತೆ ತಿಳಿಸಿದ್ದ. ರೊನಾಲ್ಡ್‌ನ ತಾಯಿ ಸ್ಟೆಲ್ಲಾ ಸ್ಟೀವನ್ ಸಹ ಅತ್ಯಾಚಾರಕ್ಕೀಡಾದ ಯುವತಿಯೊಂದಿಗೆ ಮಾತನಾಡಿ ಧೈರ್ಯ ತುಂಬಿದ್ದರಿಂದ ಯುವತಿ ಬೆಂಗಳೂರಿನಿಂದ ಸೀದಾ ವಿಶಾಖಪಟ್ಟಣಮ್‌ಗೆ ತೆರಳಿದ್ದಳು. ರೊನಾಲ್ಡ್ ಹಾಗೂ ಆತನ ತಾಯಿ ಅಲ್ಲಿಯ ಪೊಲೀಸರಿಗೆ ಯುವತಿಯಿಂದ ಅತ್ಯಾಚಾರದ ದೂರು ನೀಡಿಸಿದ್ದರು.

ಇತ್ತ ಮಗಳ ಫೋನಿನಿಂದ ಗಾಬರಿಯಾಗಿದ್ದ ಆಕೆಯ ಪೋಷಕರು ಮನೆಗೆ ಆಕೆ ವಾಪಾಸ್ಸು ಬಾರದಿದ್ದರಿಂದ ಮತ್ತಷ್ಟು ಆತಂಕಗೊಂಡಿದ್ದರು. ಮಗಳ ಮೂಲಕ ವಿವೇಕಾನಂದ ಮಾಡಿದ ಹಲ್ಕಾ ಕೆಲಸ ಅವರಿಗಾಗಲೇ ತಿಳಿದುಹೋಗಿತ್ತು, ಇದ್ಯಾವುದೂ ಗೊತ್ತೇ ಇಲ್ಲದಂತೆ ಮಾರನೆಯ ದಿನ ವಿವೇಕಾನಂದ ಯಥಾವತ್ ಕಾಲೇಜಿಗೆ ಕೆಲಸಕ್ಕೆ ಹಾಜರಾಗಿದ್ದ. ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಯುವತಿ ಹೇಳಿದ್ದರಿಂದ ಗಾಬರಿಯಾಗಿದ್ದ ಅವಳ ಅಣ್ಣ ನೇರವಾಗಿ ಕಾಲೇಜಿಗೆ ತೆರಳಿ ವಿವೇಕಾನಂದನನ್ನು ಪ್ರಶ್ನಿಸಿದಾಗ ಮೊದಮೊದಲು ತನಗೇನೂ ಗೊತ್ತೇ ಇಲ್ಲವೆಂಬ ರಾಗ ಎಳೆದಿದ್ದ. ಆಕೆ ಫೋನ್ ಮಾಡಿ ನಡೆದಿದ್ದೆಲ್ಲವನ್ನೂ ತಿಳಿಸಿದ್ದಾಳೆ ಎಂದು ಹೇಳುತ್ತಿದ್ದಂತೆಯೇ ಗಾಬರಿ ಬಿದ್ದ ವಿವೇಕಾನಂದ ಯುವತಿಯ ಮನೆಗೇ ಹೋಗಿ ಅವಳ ತಾಯಿಯ ಕಾಲಿಗೆ ಬಿದ್ದು ತಪ್ಪಾಯ್ತು ಎಂದು ಒಪ್ಪಿಕೊಂಡಿದ್ದ ಸ್ಥಳದಲ್ಲೇ ಗ್ರಾಮಸ್ಥರು ವಿವೇಕಾನಂದನಿಗೆ ಸಮಾ ಒದ್ದಿದ್ದರು. ವಿಷಯ ಶಾಸಕ ಕೆ.ಎಸ್.ಪುಟ್ಟಣ್ಣಯ್ಯನವರೆಗೂ ಹೋಗಿತ್ತು, ಶ್ರೀರಂಗಪಟ್ಟಣ ಠಾಣೆಯಲ್ಲಿ ದೂರೂ ದಾಖಲಾಗಿತ್ತು, ಕೂಡಲೇ ಮುದಿಕಾಮುಕ ವಿವೇಕಾನಂದನನ್ನು ಅರೆಸ್ಟ್ ಮಾಡಿ ಜೈಲಿಗೆ ತಳ್ಳಿದರು.

ಯುವತಿಯ ಮೊಬೈಲ್ ಸಿಗ್ನಲ್ ಜಾಡು ಹಿಡಿದು ಆಕೆ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿರುವುದನ್ನು ಪೊಲೀಸರು ಪತ್ತೆಹಚ್ಚಿದರು. ಆಕೆಯ ಸ್ನೇಹಿತ ರೊನಾಲ್ಡ್‌ನನ್ನು ಸಂಪರ್ಕಿಸಿದ ವಿದ್ಯಾರ್ಥಿನಿಯ ಪೋಷಕರೇ ಅಲ್ಲಿಗೆ ತೆರಳಿ ಜೂನ್ 19ರ ಬುಧವಾರ ಸಂಜೆ ಶ್ರೀರಂಗಪಟ್ಟಣಕ್ಕೆ ಕರೆತಂದು ವಿವೇಕಾನಂದನ ವಿರುದ್ಧ ಅತ್ಯಾಚಾರದ ದೂರು ದಾಖಲಿಸಿದ್ದಾರೆ.

ಈಗ್ಗೆ 15 ದಿನಗಳ ಹಿಂದೆ ಇದೇ ವಿವೇಕಾನಂದ ಕೆಲಸದ ನೆಪ ಹೇಳಿ ಬೆಂಗಳೂರಿನ ಕಮಲ ಲಾಡ್ಜ್‌ಗೆ ವಿದ್ಯಾರ್ಥಿನಿಯೊಬ್ಬಳನ್ನು ಕರೆದೊಯ್ದಿದ್ದ ಪ್ರಕರಣ ತನಿಖೆಯ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೂಷಣ್ ಬೊರಸೆಯವರು ಸರಿಯಾದ ತನಿಖೆ ನಡೆಸಿದರೆ ಕೀಚಕ ವಿವೇಕಾನಂದನ ಒಂದೊಂದೇ ಹುಳುಕುಗಳು ಹೊರಬರಬಹುದು. ಅಲ್ಲದೇ ಮತ್ತಷ್ಟು ವಿದ್ಯಾರ್ಥಿನಿಯರ ಬಾಳು ಹಾಳಾಗುವುದನ್ನು ತಪ್ಪಿಸಬಹುದು. ವಿವೇಕಾನಂದನಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಶಿಕ್ಷಣ ಇಲಾಖೆಯಲ್ಲಿರುವ ಇಂತಹ ಕಾಮುಕರಿಗೆ ಭೀತಿ ಹುಟ್ಟಿಸಿ, ಕನಿಷ್ಠಪಕ್ಷ ಶಾಲಾ-ಕಾಲೇಜುಗಳಲ್ಲಾದರೂ ಹೆಣ್ಣುಮಕ್ಕಳು 'ನಿರ್ಭಯ'ರಾಗಿ ಕಲಿಯುವ ವಾತಾವರಣ ಸೃಷ್ಟಿಸುವಂತೆ ಮಾಡಬೇಕಾದ ಹೊಣೆ ಪೊಲೀಸರ ಮೇಲಿದೆ. ಅದಕ್ಕೆ ಸಾರ್ವಜನಿಕರ 'ಸಾಥ್' ಕೂಡಾ ಬೇಕಾಗಿದೆ..

**● ವರದಿಗಾರ**

---

ಪಾಲಕೃಷ್ಣನಿಗೆ ಧಮಕಿ ಹಾಕಿ ಹಣ ವಸೂಲಿ ಕೊಳ್ಳುವುದು ಅವರ ಉದ್ದೇಶವಾಗಿತ್ತು. ಆದರೆ ಅವರ ದೃಷ್ಟಕ್ಕೆ ಅವತ್ತು ಗೋಪಾಲಕೃಷ್ಣ ಅವಧಾನಿ ಸುಲ್ಲಿರಲಿಲ್ಲ. ಆದ್ದರಿಂದ ಆತನ ಅಣ್ಣ ಸಂಪತ್‌ಕೃಷ್ಣನನ್ನು ಇನ್ನೋವಾ (ಕೆಎ-05 ಎಂಎಂ 5160) ಕಾರಿನಲ್ಲಿ ಸಿಕೊಂಡು ಗೋಪಾಲಕೃಷ್ಣನ ಬಗ್ಗೆ ಮಾಹಿತಿ ಕಲೆಹಾಕಿ ಗೇ ಒಂದಿಷ್ಟು ಬೆದರಿಕೆಯ ಬಿಸಿ ಮುಟ್ಟಿಸಲು ಯಿದ್ದಾರೆ. ಅಷ್ಟರಲ್ಲಾಗಲೇ ಕೆ.ಆರ್.ಪೇಟೆ ಠಾಣೆಯಲ್ಲಿ ಕೃಷ್ಣನ ಸಹೋದರ ಜಗದೀಶ ದೂರು ದಾಖಲಿಸಿ . ಹೆದರಿದ ರಂಗನಾಥನ ಟೀಮು ಸಂಪತ್‌ಕೃಷ್ಣನನ್ನು .ಪೇಟೆಗೆ ತಂದು ಬಿಟ್ಟು ಪರಾರಿಯಾಗಿದ್ದರು. ಕೃಷ್ಣ ಮೂಲಕ ಎಲ್ಲಾ ಮಾಹಿತಿಯನ್ನು ತಿಳಿದ ೀಸರು ಠಾಣೆಗೆ ಬರುವಂತೆ ರಂಗನಾಥ್, ಯೋಗೇಶ್‌ಗೆ ತಿ ರವಾನಿಸಿದ್ದರು. ಆದರಂತೆಯೇ ಅವರಿಬ್ಬರೂ ಬಂದಿದ್ದರು. ಆಗ ಪೊಲೀಸರು ರಂಗನಾಥ್ ಸೇರಿ ವಿರುದ್ಧ ಅಪಹರಣ ಪ್ರಕರಣ ದಾಖಲಿಸಿಕೊಂಡು ಪ್' ಪಶ್ಚಾತ್ತಕ್ಕೆ ಸುಖಾಂತ್ಯದ ಪರಾ ಬರೆದಿದ್ದಾರೆ.

## ಯಾರಿವನು ಗೋಪಾಲಕೃಷ್ಣ ಅವಧಾನಿ

ಮೂಲತಃ ಮಂಡ್ಯದ ನಹರು ನಗರದ ನಿವಾಸಿಯಾದ ಪಾಲಕೃಷ್ಣ ಹಾಗೂ ಆತನ ಅಣ್ಣಂದಿರು ಈಗ್ಗೆ 15-20 ಗಳ ಹಿಂದೆ ಕೆ.ಆರ್.ಪೇಟೆಯಿಂದ 5 ಕಿ.ಮೀ ದಲ್ಲಿರುವ ಮುರುಕನಹಳ್ಳಿಯಲ್ಲಿ ಫಾರಂಹೌಸ್ ಕೊಂಡು 50-60 ಹಸುಗಳನ್ನು ಸಾಕುವ ಮೂಲಕ .ಪೇಟೆ ಜನರ ಗಮನ ಸೆಳೆದಿದ್ದರು. ಕೇವಲ ಸಾಕಣಿಕೆಗಷ್ಟೇ ತಮ್ಮನ್ನು ಸೀಮಿತವಾಗಿಸಿಕೊಂಡಿದ್ದರೆ ೕಗೂ ಇರುತ್ತಿರಲಿಲ್ಲ, ಆದರೆ ಐನಾತಿ ಕೆಲಸಕ್ಕೆ ಇದತ್ತು ಜನರ ಅನುಮಾನಗಳಿಗೆ ತುತ್ತಾಗಿ ರೆ. ಕೆ.ಆರ್.ಪೇಟೆಗೆ ಬಂದಾಗ ಅಷ್ಟೇನು ಕಲಾಗಿರದಿದ್ದ ಈ ಕುಟುಂಬ ುಕೆಯುತ್ತಿದ್ದಂತೆಯೇ 40ರಿಂದ 50 ಎಕರೆ ಜಮೀನು ಿಸಿದ್ದು ಜನರಿಗೆ ಅನುಮಾನ ಮೂಡಿಸಿತ್ತು,

ಅವರು ಕೈತೋರಿಸುವ ಹಾಲಿನ ವ್ಯಾಪಾರ ಇಷ್ಟೆಲ್ಲಾ ಆಸ್ತಿ ಮಾಡಿಕೊಡಲು ಸಾಧ್ಯವಿಲ್ಲ ಎಂಬುದು ಎಂತವರಿಗೂ ಗೊತ್ತು, ಈ ಕುಟುಂಬದ ಕಿರಿಯವನಾದ ಗೋಪಾಲಕೃಷ್ಣ ಅವಧಾನಿಯ ಅಪರಾ-ತಪರಾ ವ್ಯವಹಾರಗಳೇ ಅವರ ದಿಢೀರ್ ಸಿರಿವಂತಿಕೆ ಹಿಂದಿನ ಕರಾಮತ್ತೆನ್ನುವುದು ಈಗ



ರಹಸ್ಯವಾಗೇನೂ ಉಳಿದಿಲ್ಲ.


ಗೋಪಾಲಕೃಷ್ಣ ಅವಧಾನಿ ಸಂಸ್ಕೃತದಲ್ಲಿ ಎಂ.ಎ ಮಾಡಿಕೊಂಡಿದ್ದು ವೇದಗಳನ್ನು ಓದಿಕೊಂಡಿದ್ದಾನೆ. ಇದನ್ನು ಬಳಸಿಕೊಂಡೇ ಆತ ದೊಡ್ಡ ದೊಡ್ಡ ಶ್ರೀಮಂತರ ಸ್ನೇಹವನ್ನೂ ಸಂಪಾದಿಸಿದ್ದಾನೆ. ವಿಶೇಷ ಹೋಮ-ಹವನಗಳನ್ನು ಮಾಡಿಸುವಂತೆ ಪುಸಲಾಯಿಸಿ ಹಣಕೀಳುವುದು ಅವನ ಕಾಯಂ ವೃತ್ತಿ, ತೀರಾ ಇತ್ತೀಚೆಗೆ ಕೆ.ಆರ್.ಪೇಟೆಯ ಹಾಲಿ ಶಾಸಕ ನಾರಾಯಣಗೌಡರು ಚುನಾವಣೆಯ ವೇಳೆಯಲ್ಲಿ ಈತನಿಂದ ವಿಶೇಷ ಹೋಮ ಮಾಡಿಸಿದ್ದರು. ಆ ಸಂದರ್ಭದಲ್ಲಿ ಚುನಾವಣೆಯಲ್ಲಿ ನೀವು ಗೆದ್ದೇ ಗೆಲ್ತೀರಿ ಎಂದು ಈ ಅವಧಾನಿ ಭವಿಷ್ಯ ಹೇಳಿದ್ದನಂತೆ. ಅದು ಸಾಮಾನ್ಯ ತಾನೆ, ಶ್ರೇಯಸ್ಸಾಗಲಿ ಎಂದು ತನ್ನಿಂದ ಪೂಜೆ ಮಾಡಿಸಿದ ಪ್ರತಿಯೊಬ್ಬರಿಗೂ ಪ್ರತಿಯೊಬ್ಬ ಪೂಜಾರಿ ಹೇಳುವುದೇ ಹೀಗೆ. ಕಾಕತಾಳೀಯ ಎಂಬಂತೆ ನಾರಾಯಣಗೌಡ ಗೆದ್ದು ಶಾಸಕರಾಗಿ ಆಯ್ಕೆಯಾದರು. ಇದಕ್ಕೆಲ್ಲ ಜನ ಮತಹಾಕಿದ್ದು ಕಾರಣವಾಗಿತ್ತೆ ವಿನಾಃ ಗೋಪಾಲಕೃಷ್ಣ ಅವಧಾನಿ 'ಮಾತು' ಹಾಕಿದ್ದು ಕಾರಣವಲ್ಲ. ಆದರೂ ಆದಾದನಂತರ ಗೋಪಾಲಕೃಷ್ಣ ಅವಧಾನಿಯ ಹೆಸರು ಮತ್ತಷ್ಟು ಪ್ರಚಾರ ಪಡೆದುಕೊಂಡಿತ್ತು.

ಈ ನಡುವೆ ಹಣವನ್ನು ದುಪ್ಪಟ್ಟು ಮಾಡಿಕೊಡುತ್ತೇನೆಂಬ ಡಬ್ಲಿಂಗ್ ದಂಧೆಯನ್ನೂ ಗೋಪಾಲಕೃಷ್ಣ ಶುರುಮಾಡಿದ್ದ. ಹೇಗೂ ಶ್ರೀಮಂತರ ಪರಿಚಯವಿತ್ತು, ಬಣ್ಣದ ಮಾತುಗಳ ಖಜಾನೆಯೂ ಇತ್ತು, ಜೊತೆಗೆ ಹೋಮ ಹವನ ಮಾಡಿಸಿದ ಅನುಭವವೂ ಇತ್ತು, ಇವೇ ಅವನ ಬಂಡವಾಳವಾಗಿದ್ದವು. ಸಂಪತ್ತು ವೃದ್ಧಿಗೆ ಹೋಮ ನಡೆಸುವ ಗೋಪಾಲಕೃಷ್ಣನ ಬಣ್ಣದ ಮಾತುಗಳನ್ನು ನಂಬಿಯೇ ಬೆಂಗಳೂರಿನ ಸಾರಕ್ಕಿ ನಿವಾಸಿ ರಂಗನಾಥ್ ಈತನ ಕೈಗೆ ಲಕ್ಷಾಂತರ ಹಣ ನೀಡಿದ್ದ.

ಇನ್ನು ಗೋಪಾಲಕೃಷ್ಣ ಅವಧಾನಿಯ ಕುಟುಂಬ ಕೆ.ಆರ್.ಪೇಟೆಯ ಜಕ್ಕನಹಳ್ಳಿ-ಅಗಸರಹಳ್ಳಿ ಹಾಗೂ ಮರಡಹಳ್ಳಿ ಗ್ರಾಮದ ಬಳಿ 30ರಿಂದ 40 ಎಕರೆ ದರ್ಖಾಸ್ತು ಭೂಮಿ ಮಾಡಿಕೊಂಡಿರುವ ಬಗ್ಗೆಯೂ ಹಲವು ಅನುಮಾನಗಳಿವೆ. ಈ ಮೂರು ಗ್ರಾಮಗಳಲ್ಲಿ ತುಂಡುಭೂಮಿಯಿಲ್ಲದ ನೂರಾರು ರೈತರಿದ್ದಾರೆ. ಜಮೀನಿಲ್ಲದ ಬಡವರಿಗೆ ಜಮೀನು ನೀಡಲೆಂದೇ ಸ್ಥಳೀಯ ಶಾಸಕರ ನೇತೃತ್ವದಲ್ಲಿ ದರ್ಖಾಸ್ತು ಸಮಿತಿ ಇರುತ್ತದೆ. ಜಮೀನಿಲ್ಲದ ಬಡವರನ್ನು ಗುರುತಿಸಿ ಅವರಿಗೆ ಜಮೀನು ನೀಡುವುದು ಈ ಸಮಿತಿಯ ಕರ್ತವ್ಯ. ಆದರೆ ಅವರನ್ನೆಲ್ಲ ಬಿಟ್ಟು ಗೋಪಾಲಕೃಷ್ಣ ಅವಧಾನಿಯ ಕುಟುಂಬಕ್ಕೆ ಕೋಟ್ಯಾಂತರ ಬೆಲೆಬಾಳುವ 30-40ರ ಎಕರೆ ದರ್ಖಾಸ್ತು ಭೂಮಿ ನೀಡಿರುವ ಹಿಂದಿನ ನಿಜವಾದ ಗುಟ್ಟೇನು? ಎಂಬ ಬಗ್ಗೆ ಜಿಲ್ಲಾಧಿಕಾರಿ ಕೃಷ್ಣಯ್ಯ ಕಂದಾಯ ಇಲಾಖೆ ಅಧಿಕಾರಿಗಳನ್ನು ತಡವಿಕೊಳ್ಳಬೇಕಿದೆ.

ಇನ್ನು ಈ ಅವಧಾನಿ ಹಣ ದುಪ್ಪಟ್ಟು ಮಾಡಿಕೊಡುತ್ತೇನೆಂದು ಹೇಳಿ ವಂಚನೆ ಮಾಡಿರುವ ಹಲವಾರು ಪ್ರಕರಣಗಳು ಕೇಳಿಬರುತ್ತಿವೆ. ಅವುಗಳಲ್ಲಿ ಬಹುಪಾಲು 'ಬ್ಲ್ಯಾಕ್‌ಮನಿ'ಯಾದ್ದರಿಂದ ಪೊಲೀಸ್ ಠಾಣೆವರೆಗೂ ಬಂದಿಲ್ಲವಷ್ಟೆ. ಹಣ ಡಬ್ಲಿಂಗ್ ದಂಧೆಯಲ್ಲಿ ಖೋಟಾನೋಟು ಚಲಾವಣೆಯೇ ಪ್ರಮುಖವಾಗಿದ್ದು ಆ ನಿಟ್ಟಿನಲ್ಲಿಯೂ ಎಸ್ಪಿ ಭೂಷಣ್ ಬೊರಸೆ ತನಿಖೆಗೆ ಆದೇಶಿಸಬೇಕಿದೆ. ಕೆ.ಆರ್.ಪೇಟೆ ಪೊಲೀಸರು ಇದುವರೆಗಿನ ಪರಿಕಥೆಯನ್ನು ಪಕ್ಕಕ್ಕಿಟ್ಟು ಗೋಪಾಲಕೃಷ್ಣ ಅವಧಾನಿಯ ನಿಗೂಢ ವ್ಯವಹಾರವನ್ನು ಜಾಲಾಡಿ ಅಸಲಿಯತ್ತನ್ನು ಹೊರತರುವ ಕೆಲಸ ಮಾಡಿದರೆ ಮುಂದಿನ ದಿನಗಳಲ್ಲಿ ನಡೆಯಬಹುದಾದ ಕ್ರೈಮ್‌ಗಳನ್ನು ಮೊಳಕೆಯಲ್ಲೇ ಚಿವುಟಿದಂತಾಗುತ್ತದೆ.

**● ವರದಿಗಾರ**






# ಮಾಡೆಲ್ ಟಿ ಫೋರ್ಡ್

ಖ್ಯಾತ ಬೇಟೆಗಾರ ಕೆನ್ನೆತ್ ಆಂಡರ್ಸನ್ ಅವರ 'ಗೆರ್ಹಟ್ಟಿಯ ನರಭಕ್ಷಕ ಚಿರತೆ' ಕತೆಯನ್ನು ಈ ವಾರದಿಂದ ಪ್ರಾರಂಭಿಸುತ್ತಿದ್ದೇವೆ.

ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಗೆರ್ಹಟ್ಟಿ ಅಂದಿನ ಮದ್ರಾಸ್ ರಾಜ್ಯದ ಸೇಲಂ ಜಿಲ್ಲೆಯಲ್ಲಿದ್ದು ಹತ್ತಾರು ಗುಡಿಸಲುಗಳಿದ್ದ ಚಿಕ್ಕ ಗ್ರಾಮ. ಮುಖ್ಯರಸ್ತೆಯಿಂದ ಕೇವಲ ಏಳು ಮೈಲು ದೂರವಿದ್ದರೂ ಗೆರ್ಹಟ್ಟಿಗೆ ತಲುಪಲು ಒಂದು ಕಡಿದಾದ ಗುಡ್ಡವನ್ನು ಇಳಿದು ಹತ್ತಬೇಕಾಗಿತ್ತು, ನಡುವೆ ಮಳೆಗಾಲದಲ್ಲಿ ಮಾತ್ರ ನೀರಿರುತ್ತಿದ್ದ ಕಲ್ಲಿನ ಬಂಡೆಗಳಿರುವ ಒಂದೆರಡು ಝರಿಗಳನ್ನು ದಾಟಬೇಕಿತ್ತು, ನನ್ನ ಯೌವ್ವನದಲ್ಲಿ ನನ್ನ ಬಳಿ ಇದ್ದ ಮಾಡೆಲ್ ಟಿ ಫೋರ್ಡ್ ಕಾರಿನಲ್ಲಿ ಕುಳಿತು, ಉಗಿಯ ಮೋಡವನ್ನು ಸೃಷ್ಟಿಸುತ್ತಾ ಗೆರ್ಹಟ್ಟಿಗೆ ಹೋಗುವುದು ನನಗೆ ಅತ್ಯಂತ ಸಂತೋಷವನ್ನು ನೀಡುತ್ತಿತ್ತು. ಆದರೆ ಹೋಗುವಷ್ಟರಲ್ಲಿ ಇಂಜಿನ್ ಕೆಂಪಗೆ ಕಾದು, ರೇಡಿಯೇಟರ್‌ನ ನೀರು ಕೊತಕೊತ ಕುದಿಯುತ್ತಿರುತ್ತಿತ್ತು.

ಒಮ್ಮೆ ಚಿನಾರ್ ನದಿಯ ದಡದಲ್ಲಿರುವ ಅರಣ್ಯ ಇಲಾಖೆಯ ಬಾವಿಯಲ್ಲಿ ದಾರಿ ತಪ್ಪಿ ಬಂದು ಕುಳಿತಿದ್ದ ಮೊಸಳೆಯೊಂದನ್ನು ಹಿಡಿಯಲು ಬರುವುದಾಗಿ ನನ್ನ ಕಾಯಂ ಶಿಷ್ಯ ಭೈರ ಪೂಜಾರಿಗೆ ಮಾತು ಕೊಟ್ಟಿದ್ದೆ. ಆದರೆ ನಾನು ಹೋಗಬೇಕಾಗಿದ್ದ ಮುತ್ತೂರಿನ ಅರಣ್ಯ ಇಲಾಖೆಯ ವಸತಿಗೃಹ ಇನ್ನೂ ಹನ್ನೆರಡು ಮೈಲುಗಳಿರುವಾಗ ಅರ್ಧ ಗುಡ್ಡವನ್ನೇರಿದ್ದ ಕಾರು ನಿಂತುಹೋಯಿತು. ಮಾಮೂಲಿನ ಗೇರ್‌ಗಳು ಕಾರನ್ನು ಮುಂದಿನ ಗುಡ್ಡವನ್ನೇರಿಸಲು ಅಸಮರ್ಥವಾದವು. ಆಗ ನಾನೇನು ಮಾಡಿರಬಹುದು ಹೇಳಿ? ಉತ್ಕೃಷ್ಟವಾದ ರಿವರ್ಸ್ ಗೇರ್‌ಗಳಿದ್ದ ನನ್ನ ಕಾರನ್ನು ತಿರುಗಿಸಿ ನಿಲ್ಲಿಸಿಕೊಂಡು ಸಂಪೂರ್ಣ ರಿವರ್ಸ್ ಗೇರಿನಲ್ಲಿ ಗುಡ್ಡವನ್ನು ಏರಿಬಿಟ್ಟಿದ್ದೆ! ಕಾರಿನ ಇಂಜಿನ್‌ಗೆ ಮತ್ತು ನನ್ನ ಕುತ್ತಿಗೆಗೆ ಸಾಕಷ್ಟು ಶ್ರಮವಾಗಿತ್ತು. ಆದರೇನು, ನಾನು ಸಮಯಕ್ಕೆ ಸರಿಯಾಗಿ ತಲುಪಿದ್ದೆ.

## ಗೆರ್ಹಟ್ಟಿ ವಸತಿಗೃಹದ ಮೇಟಿ

ಗುಡ್ಡದ ತುದಿಯಲ್ಲಿದ್ದ ಗೆರ್ಹಟ್ಟಿಯ ಅರಣ್ಯ ಇಲಾಖೆಯ ವಸತಿಗೃಹ ಕಾಡಿನ ವಿಹಂಗಮ ನೋಟವನ್ನು ನೀಡುತ್ತಿತ್ತು. ಇಲ್ಲಿದ್ದ ಒಂದೇ ತೊಂದರೆ ಎಂದರೆ ಅಲ್ಲಿನ ದೇಖರೇಖಿಗಾಗಿ ನೇಮಕಗೊಂಡಿದ್ದ ಮೇಟಿಯದ್ದು. ಈ ಬೇಜವಾಬ್ದಾರಿಯ ಮೇಟಿ ಹೆಚ್ಚಿನ ಸಮಯ ಹತ್ತಿರದ ಪೆನ್ನಾಗ್ರಾಮದಲ್ಲಿ ಕಳೆಯುತ್ತಿದ್ದ. ಅಲ್ಲಿನ ಹುಡುಗಿಯರು ಅವನ ಪ್ರಮುಖ ಆಕರ್ಷಣೆಯಾಗಿದ್ದರು! ಇದಕ್ಕೆ ಸಂಬಂಧಿಸಿದ ಒಂದು ಹಳೆಯ ಕಥೆಯನ್ನು ಹೇಳಲೇಬೇಕು.

ಸೇಲಂ ಜಿಲ್ಲೆಯ ಕಾಡಿನ ಉಸ್ತುವಾರಿಗೆ ನೇಮಕಗೊಂಡಿದ್ದ ಡಿಎಫ್‌ಓ ಬಹಳ ಕಟ್ಟುನಿಟ್ಟಿನ ಮನುಷ್ಯ. ನಾನು ಅಲ್ಲಿನ ಪೂರ್ಣ ಕಾಡು ನನ್ನದೇ ಎಂಬಂತೆ ಸ್ವೇಚ್ಛೆಯಿಂದ ಸುತ್ತುವುದು ಅವನಿಗೆ ಇಷ್ಟವಾಗಿರಲಾರದು. ಹಾಗಾಗಿ ನನ್ನ ಬಗೆಗಿನ ಅಸಡ್ಡೆ ಅವನ ನಡೆನುಡಿಗಳಲ್ಲಿ ವ್ಯಕ್ತವಾಗುತ್ತಿತ್ತು. ಒಮ್ಮೆ ನನಗೆ ಗೆರ್ಹಟ್ಟಿಯ ವಸತಿಗೃಹದಲ್ಲಿ ಉಳಿಯುವ ಅಗತ್ಯವಿತ್ತು. ನಿಯಮಗಳ ಪ್ರಕಾರ ನಾನು ಅರಣ್ಯ ಇಲಾಖೆಯ ವಸತಿಗೃಹಗಳಲ್ಲಿ ಇರಲು ಲಿಖಿತವಾಗಿ ಅರ್ಜಿ ಸಲ್ಲಿಸಿ ಅಪ್ಪಣೆ ಪಡೆಯಬೇಕಿತ್ತು. ಆದರೆ ಭಾರತದಲ್ಲಿ ನಿಯಮಗಳು ಇರುವುದೇ ಮುರಿಯಲು ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ನಿಯಮಗಳು ಕಠಿಣವಾಗಿದ್ದಷ್ಟೂ ಅದನ್ನು ಮುರಿಯುವವರ ಸಂಖ್ಯೆ ಹೆಚ್ಚೇ ಇರುತ್ತದೆ! ಹಾಗಾಗಿ ನಾನೂ ಏಕೆ ನಿಯಮಗಳನ್ನು ಮುರಿಯಬಾರದು ಎಂದುಕೊಂಡರೂ, ಅನಗತ್ಯ ಮನಸ್ತಾಪ ಬೇಡವೆಂದು ನಾನು ಒಂದು ತಿಂಗಳ ಮೊದಲೇ ಅರ್ಜಿ ಸಲ್ಲಿಸಿ ಗೆರ್ಹಟ್ಟಿ ವಸತಿಗೃಹದಲ್ಲಿ ಉಳಿದುಕೊಳ್ಳಲು ಒಪ್ಪಿಗೆ ಪಡೆದಿದ್ದೆ.

ಅವತ್ತು ನನ್ನ ಮಾಡೆಲ್ ಟಿ ಫೋರ್ಡ್‌ನಲ್ಲಿ ಗೆರ್ಹಟ್ಟಿಯನ್ನು ತಲುಪಿದಾಗ ಮಳೆ ಧಾರಾಕಾರವಾಗಿ ಸುರಿಯತೊಡಗಿತು. ಒದ್ದೆಮುದ್ದೆಯಾಗಿದ್ದ ನಾನು ವಸತಿ ಗೃಹವನ್ನು ತಲುಪಿದಾಗ ಕಂಡಿದ್ದು ದೊಡ್ಡ ಬೀಗವನ್ನು. ಮೇಟಿ ಮಾಮೂಲಿನಂತೆ ಮಜಾ ಉಡಾಯಿಸಲು ಪೆನ್ನಾಗ್ರಾಮಕ್ಕೆ ಹೋಗಿದ್ದ. ಮಳೆಯಲ್ಲಿ

ಆಂಡರ್ಸನ್ ಅವರ ಫೋರ್ಡ್ ಕಾರು



ನನ್ನ ವಸ್ತುಗಳು ಹಾಳಾಗುವುದನ್ನು ತಡೆಯಲೇಬೇಕಿತ್ತು. ಹಾಗಾಗಿ ನಾನು ಹಿಂದಿನ ಬಚ್ಚಲು ಕೋಣೆಯ ದುರ್ಬಲ ಬಾಗಿಲನ್ನು ಜೋರಾಗಿ ತಳ್ಳಿ ವಸತಿಗೃಹದಲ್ಲಿ ಸ್ಥಾಪನೆಗೊಂಡೆ! ಮುಂದಿನ ಒಂದು ವಾರ ನಾನು ಅಲ್ಲಿದ್ದರೂ ಮೇಟಿ ಅತ್ತ ಸುಳಿಯಲೇ ಇಲ್ಲ. ಬೆಂಗಳೂರಿಗೆ ಹಿಂತಿರುಗಿದ ನಾನು ವಸತಿಗೃಹದ ಬಾಡಿಗೆಯನ್ನು ಅಂಚೆಯಲ್ಲಿ ಕಳಿಸುವಾಗ ಅಲ್ಲಿನ ಪರಿಸ್ಥಿತಿಯ ಬಗೆಗೆ ನನ್ನ ಶಿಕಾಯಿತನ್ನೂ ಡಿಎಫ್‌ಓಗೆ ಬರೆದು ಕಳಿಸಿದ್ದೆ.

ಆದರೆ ನನಗೆ ಆಘಾತ ಕಾದಿತ್ತು. ಮೇಟಿ ಮತ್ತು ಡಿಎಫ್‌ಓ ಸೇರಿ ಮಸಲತ್ತು ಮಾಡಿದ್ದರು. ವಸತಿಗೃಹದ ಒಂದು ಸಾಗುವಾನಿ ಮರದ ಕುರ್ಚಿ ಮತ್ತು ಬಾತ್‌ಟಬ್‌ಗಳು ಕಾಣೆಯಾಗಿವೆಯೆಂದೂ ಮತ್ತು ಅದಕ್ಕಾಗಿ ಬಾಗಿಲನ್ನು ಮುರಿದು ಒಳಗೆಹೋಗಿದ್ದ ನಾನು ಕಾರಣವೆಂದೂ ಆಪಾದಿಸಿ, ಇದರ ಬಗೆಗೆ ಕಾನೂನು ಕ್ರಮ ಏಕೆ ಕೈಗೊಳ್ಳಬಾರದು ಎಂದು ಒಂದು ವಾರದೊಳಗೆ ಉತ್ತರಿಸಲು ನನಗೆ ನೋಟಿಸ್ ನೀಡಿದ್ದರು. ಮೇಟಿ ವಸತಿಗೃಹದಿಂದ ನಾಪತ್ತೆಯಾದ ಬಗೆಗೆ ಅದರಲ್ಲಿ ಚಕಾರವನ್ನೆತ್ತಿರಲಿಲ್ಲ!

## ಪತ್ತೇದಾರ ಆಂಡರ್ಸನ್!

ಮೇಟಿ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಡಿಎಫ್‌ಓಗೆ ನನ್ನ ಮೇಲಿದ್ದ ದ್ವೇಷವನ್ನು ಬಳಸಿಕೊಂಡಿದ್ದ. ಸಾಮಾನ್ಯ ಸಮಯದಲ್ಲಾಗಿದ್ದರೆ ನಾನು ಆ ವಸ್ತುಗಳ ಬೆಲೆಯನ್ನು ಕಟ್ಟಿ ಪ್ರಕರಣಕ್ಕೆ ಮಂಗಳ ಹಾಡುತ್ತಿದ್ದನೇನೋ. ಆದರೆ ನನ್ನಂತಹ ಕಾನೂನು ಪಾಲಕ ಪ್ರಜೆಗೆ ತೊಂದರೆ ಕೊಡುವ ಈ ಖದೀಮ... ಬಯಲಿಗೆಳೆಯಲೇಬೇಕಿತ್ತು.

ಕಳುವಾಗಿದೆಯೆಂದು ಹೇಳಲಾದ ವಸ್ತುಗಳನ್ನು ಮೇಟಿ ಮಾರಿರಲು ಸಾಧ್ಯ... ಹಾಗಾಗಿ ಅವುಗಳನ್ನು ಪೆನ್ನಾಗ್ರಾಮದ ತನ್ನ ರಖಾವಿನ ಮನೆಯ... ಅಡಗಿಸಿಟ್ಟಿರಬೇಕೆಂದು ಊಹಿಸಿದೆ. ದಿಢೀರನೆ ಒಂದು ಮಧ್ಯರಾತ್ರಿ ಪೆನ್ನಾಗ್ರಾ... ಬಂದಿಳಿದು, ನನ್ನ ನಂಬಿಕಸ್ಥ ಬಂಟ ರಂಗನಿಗೆ ವಿಷಯ ತಿಳಿಸಿದೆ. ಆ ವಸ್ತುಗಳ... ಮೇಟಿ ವಸತಿಗೃಹದಿಂದ ಹೇಗೆ ಮತ್ತು ಎಲ್ಲಿಗೆ ಕದ್ದು ಸಾಗಿಸಿದ್ದಾನೆಂದು ರ... ಪತ್ತೆ ಮಾಡಿದ!

ಸರಿ ಆ ಅಪರಾತ್ರಿಯಲ್ಲಿ ಪೊಲೀಸ್ ಠಾಣೆಗೆ ನುಗ್ಗಿ ಅಲ್ಲಿನ ಸೆಂಟ್ರಿಯ... ಎಬ್ಬಿಸಿದೆವು. ಅವನು ಯಾವುದೇ ಸಹಾಯ ಮಾಡುವ ಮೂಡಿನಲ್ಲಿರಲಿ... ಅವನಿಗೆ ಸ್ವಲ್ಪ ಕೈಬಿಸಿ ಮಾಡಿದನಂತರ ಓಡಿಹೋಗಿ ಮತ್ತೊಬ್ಬ ಪೇದೆಯ... ಕರೆತಂದು ನಮ್ಮೊಂದಿಗೆ ಕಳಿಸಿದ.

ನಾವು ಮೂವರೂ ಮೇಟಿಯ ಹೆಂಗಸಿನ ಮನೆಗೆ ಹೋದೆವು. ಚಿಕ್ಕದಾ... ಆ ಮನೆಯನ್ನು ಅವಳು ಅಚ್ಚುಕಟ್ಟಾಗಿ ಇರಿಸಿಕೊಂಡಿದ್ದಳು. ಮನೆಯ ಮೂಲೆಯ... ನಮಗೆ ಬೇಕಾದ ವಸ್ತುಗಳು ಕಣ್ಣಿಗೆ ಹೊಡೆಯುವಂತೆ ಕುಳಿತಿದ್ದವು! ... ಪಾಪದ ಮಹಿಳೆಯನ್ನು ದಸ್ತಗಿರಿ ಮಾಡಿ, ಆ ವಸ್ತುಗಳನ್ನು ಪೊಲೀಸ್ ಠಾ... ಸಾಗಿಸಲಾಯಿತು.

ಬೆಳಗ್ಗೆ ಬಂದ ಸಬ್‌ಇನ್ಸ್‌ಪೆಕ್ಟರ್‌ನನ್ನು ನಾನು ಸರಿಮಾಡಿಕೊಂಡು ಹಳೆ... ತಾರೀಖಿನಲ್ಲಿ ಕಳವಾದ ವಸ್ತುಗಳ ಬಗೆಗೆ ದೂರನ್ನು ದಾಖಲಿಸಿದೆ. ಅವ... ತಾರೀಖಿನಲ್ಲಿ ಆ ವಸ್ತುಗಳನ್ನು ಹುಡುಕಿ ಕೊಟ್ಟ ಅವನ ದಕ್ಷತೆಯನ್ನು ಹೊ... ಇನ್ನೊಂದು ಪತ್ರವನ್ನೂ ನೀಡಿದೆ! ಆ ಹೆಂಗಸನ್ನು ಸೆರೆಯಿಂದ ಬಿಡಿಸುವ ... ಪ್ರಯತ್ನ ಮಾತ್ರ ಫಲಿಸಲಿಲ್ಲ.

ನಂತರ ಡಿಎಫ್‌ಓಗೆ ನನ್ನ ವಕೀಲರ ಮೂಲಕ ಮಾನನಷ್ಟಕ್ಕಾಗಿ ನೋಟ... ಕಳಿಸಿದ್ದೆ. ಆದರೆ ನಿವೃತ್ತಿಯ ಅಂಚಿನಲ್ಲಿದ್ದ ಆತ ಎಲ್ಲಿ ಕಾಣೆಯಾದ ಎಂಬು... ನನಗೆ ಪತ್ತೆಯಾಗಲಿಲ್ಲ. ನನ್ನ ಪತ್ತೆದಾರಿ ಕೆಲಸ ಮಾತ್ರ ನನಗೆ ತುಂಬಾ ಖು... ನೀಡಿತು.

## ಕಥಾನಾಯಕನ ಪ್ರವೇಶ


ಭಾರತದಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಇಲ್ಲಿನ ನಾಗರಿಕರಿಗೆ ... ಬುದ್ಧಿ ಮತ್ತು ಹಾಸ್ಯಪ್ರಜ್ಞೆ ಇರಬೇಕೆಂಬುದನ್ನು ತಿಳಿಸಲು ಮೇಲಿನ ... ಹೇಳಬೇಕಾಯಿತು. ನಾನು ಹೇಳಬೇಕೆಂದಿರುವ ಚಿರತೆಯ ಕಥೆಗೆ ಇ... ಸಂಬಂಧವೇನಿಲ್ಲ. ವಿಷಯಾಂತರ ಮಾಡಿದ್ದಕ್ಕಾಗಿ ಕ್ಷಮಿಸಿ.

ಗೆರ್ಹಟ್ಟಿಯ ವಸತಿಗೃಹದ ಹಿಂದೆ ಊರಿನ ಗುಡಿಸಲುಗಳ ಸಮೂಹವಿ... ಅಲ್ಲಿನ ಜನರು ಮರ ಕಡಿಯುವ ಕೆಲಸವನ್ನಲ್ಲದೆ, ಕೂಲಿನಾಲಿ ಮಾಡು... ಹತ್ತಿರದ ಹಳ್ಳಕ್ಕೆ ನೀರು ಕುಡಿಯಲು ಬರುವ ಜಿಂಕೆಗಳನ್ನು ಕದ್ದು ಕೊಲ... ಮತ್ತು ಗಂಧದ ಕಳ್ಳಸಾಗಾಣಿಕೆ ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಕಾಡಿ... ಮೇಕೆ ಸಾಕಾಣಿಕೆ ನಿಷಿದ್ಧವಾಗಿದ್ದರಿಂದ ಕೆಲವರು ಕುರಿಯನ್ನು ಸಾಕಿಕೊಂಡಿದ್ದ... ಇದ್ದ ಜಾನುವಾರುಗಳನ್ನು ಹುಲಿ ಮತ್ತು ಚಿರತೆಗಳು ತಿಂದು ಮುಗಿಸಿದ್ದವು...

ನಮ್ಮ ಕಥಾನಾಯಕ ಚಿರತೆ ಸಾಮಾನ್ಯ ಗಾತ್ರದ್ದಾಗಿತ್ತು. ಆಹಾರಕ್ಕೆ... ಪ್ರಾಣಿಗಳನ್ನು ಬೇಟೆಯಾಡುವುದನ್ನು ನಿಲ್ಲಿಸಿರುವ ಪ್ರಥಮ ಸೂಚನೆಯ... ಅದು ಮೇಯುತ್ತಾ ದಾರಿ ತಪ್ಪುತ್ತಿದ್ದ ಸಾಕಿದ ಕೋಳಿಗಳನ್ನು ಕದ್ದು ತಿ... ಜೀವನ ಸಾಗಿಸಿಕೊಂಡಿತ್ತು. ಮುಂದಿನ ಹಂತದಲ್ಲಿ ಇದು ಕೋಳಿಗೂ... ನುಗ್ಗಿ ಸಾಕಾಗುವಷ್ಟು ತಿನ್ನುತಿತ್ತಲ್ಲದೆ, ಉಳಿದವನ್ನು ಸುಮ್ಮನೆ ಕೊಂದು ಇ... ಗಾಯಗೊಳಿಸಿ ಹೋಗುತ್ತಿತ್ತು. ತಿನ್ನಲು ಬೇರೇನೂ ಸಿಗದಿದ್ದಾಗ, ... ಒಂದೊಂದಾಗಿ ಗೆರ್ಹಟ್ಟಿ ಹಾದಿಯ ಜನಗಳು ಸಾಕಿಕೊಂಡಿದ್ದ ಕುರಿಗ... ಸ್ವಾಹಾ ಮಾಡತೊಡಗಿತ್ತು. ಈ ಚಿರತೆಯ ಬಗೆಗೆ ನನಗೆ ಆಗಾಗ ವರದಿ... ಬಂದಿದ್ದರೂ ಇದು ಸಂಪೂರ್ಣ ನಿರುಪಾಯಕಾರಿಯಾಗಿದ್ದುದರಿಂದ ನ... ಲಕ್ಷ್ಯ ವಹಿಸಿರಲಿಲ್ಲ.

(ಮುಂದುವರಿಯುವುದು)

# ಪ್ರಶ್ನಾನ್ವೇಷಣೆ



ಪ್ರೇಮ ಸಾಕ್ಷಾತ್ಕಾರದ ದಿವ್ಯ
ಸನ್ನಿಧಿಗೆ ನಿನ್ನ ಕರೆದೊಯ್ಯಲೆ
ತಲೆಮಾರುಗಳ ಅಪನಂಬಿಕೆಗಳಿಗೆ
ಹೊಸ ಬಾಷ್ಯ ಬರೆಯಲೇ?

ಕೋಳಿ ಕೂಗುವ ಮುನ್ನ
ಕನಸಿನ ಬೆನ್ನಟ್ಟಿ ಬನ್ನಿ
ನನ್ನ ಹಾದಿಗೆ ಹೆಜ್ಜೆ ಹಾಕಿ
ಎಂದು ಕೇಳಲೇ?

ನನ್ನ ಎದೆಯಾಳದಲ್ಲಿ
ಘೋಣಿ ಸತ್ಯವಿಲ್ಲದ ಹಾಡುಗಳಿವೆ
ಶಬ್ದ ಸೋಪಾನ ಮಾಡಿ
ಹಾಡಿಕೊಳ್ಳಿ ಎಂದು ಕರೆಯಲೇ?

ಮುನ್ಸೂಚನೆ ನೀಡದೆ ಬಂದು
ಬಾಗಿಲ ಬಡಿದ ಮಳೆಗಾಲಕೆ
ಕೊಂಕು ನುಡಿಗಳನಾಡಿ
ಮಣ್ಣ ನೆನಪಲಿ ಆಗಂತುಕನ
ಕರೆದುಕೊಂಡು ನಾಳೆ ಬಾ
ಎಂದು ಹೇಳಿ ಕಳಿಸಲೇ?

ಚಂದಿರನ ಶಾಲೆಯ ಆವರಣದಲ್ಲಿ
ಕೆಂಪು ಗುಲಾಬಿಯ ಮಧ್ಯಸ್ಥಿಕೆಯಲಿ
ಯಾರ ಅನ್ವೇಷಣೆ ಮಾಡಲಿ?



● ಡಾ.ಡಿ.ಸಿ.ರಾಜಪ್ಪ ಐಪಿಎಸ್

- ಕೀಟಲೆ, ಬೆಂಕಿಕೆರೆ

☛ ಅತ್ಯಾಚಾರ ಮಾಡಲು ಬಂದಾಗ ಹುಡುಗಿಯರು ಗಾಯತ್ರಿ ಮಂತ್ರ, ಸರಸ್ವತಿ ಮಂತ್ರವನ್ನು ಹೇಳಬೇಕು ಎಂದು ಓರ್ವ ಬಾಬಾ ಹೇಳಿದ್ದಾನಲ್ಲ ಯಾಕೆ?

☝ ಅದು ಸಂಘ ಪರಿವಾರದ ಪುಂಡರ ಬಗ್ಗೆ ನೀಡಿರುವ ಮುನ್ನೆಚ್ಚರಿಕೆ.

- ಬಸವರಾಜ್, ಧಾರವಾಡ

☛ ಉತ್ತಮ ಪ್ರಶ್ನೆಗೆ ಅಪ್ಪ ಬಹುಮಾನ ಕೊಡುತ್ತಿದ್ದರು. ಆದರೆ ಮಗಳು ಕೊಡುತ್ತಿಲ್ಲವಲ್ಲ ಯಾಕೆ?

☝ ನಮ್ಮ ಸಂಪಾದಕರು ಶ್ರೀಮಂತ ತಂದೆಯ ಬಡ ಮಗಳು ಅದಕ್ಕೆ.

- ಹೆಸರಿಲ್ಲ

☛ ಕನ್ನಡ ಸಿನಿಮಾಗಳಲ್ಲಿ ಮೊದಲ ರಾತ್ರಿಗೂ ಗ್ರೂಪ್ ಸಾಂಗ್ ತೋರಿಸುತ್ತಾರಲ್ಲಾ ಯಾಕೆ?

☝ ನಿಜಜೀವನದಲ್ಲಿ ಆ ಕೋಣೆಯ ಬಾಗಿಲ ಬಳಿ ಹೆಂಗೆಳೆಯರು ಗುಂಪೇ ಕಾದು ನಿಂತಿರುವುದೂ ಉಂಟು.


- ಶ್ರೀಧರ್ ಡಿ ರಾಮಚಂದ್ರಪ್ಪ, ಚಿತ್ರದುರ್ಗ

☛ ಗೌರಿ ಮೇಡಂ ಎಂದಾದರೂ ಸೀರೆ, ಸಿಂಧೂರ, ಬಳೆ, ಜಡೆ, ಮಲ್ಲಿಗೆ ಟ್ರೈ ಮಾಡಿದ್ದಾರಾ?

☝ ಪುಟ್ಟ ಬಾಲಕಿಯಾಗಿದ್ದಾಗ ಮೊಗ್ಗಿನ ಜಡೆ ಹಾಕಿದ್ದ ದಾಖಲೆಯೂ ಇಲ್ಲ ಅಂತಿದ್ದಾರೆ...!

- ಓಂಕಾರ್, ಸೂರಹೊನ್ನೆ

☛ ಯಾರ ಉಸಿರಲಿ ಯಾರ ಹೆಸರೋ, ಯಾರ ಪ್ರೀತಿ ಯಾರ ಹೃದಯದಲ್ಲೋ, ಬಲ್ಲವರು ಯಾರು...




☝ ಯಾರೋ ಕೈಕೊಟ್ಟಂತಿದೆ. ಮರಳಿ ಯತ್ನವ ಮ...

- ಪಿ. ಅಣ್ಣಪ್ಪ ಪ್ರಭು, ಬೆಂಗಳ...

☛ ಸಿದ್ದು ದಳದಲ್ಲೇ ಇದ್ದಿದ್ದರೆ ಸಿಎಂ ಆಗುತ್ತಿದ್ದರಾ...

☝ ಗ್ರಾಮ ಪಂಚಾಯತಿ ಅಧ್ಯಕ್ಷರೂ ಆಗುತ್ತಿರಲಿ...

- ಎನ್.ಸಿ.ಕವನ ಚೆನ್ನಬಸಪ್ಪ ಬಿ.ಆರ್.ಪ...

☛ ಪತ್ರಕರ್ತರೆಲ್ಲ ರಾಜಕಾರಣಿಗಳಾದರೆ ರಾಜಕಾರಣಿ... ಎಲ್ಲಿಗೆ ಹೋಗಬೇಕು?

☝ ಆ ಮಾಧ್ಯಮ ಸಂಸ್ಥೆ ಮಾಲೀಕರೇ ಆಗುತ್ತಿದ್ದಾ...

- ವರ್ಷಾ ವೆಂಕಟೇಶ್, ಅಜ್ಜ...

☛ ನಮ್ಮ ತರೀಕೆರೆಯಲ್ಲಿ ಇಬ್ಬರು ಎಮ್‌ಎ... ಗಳಿದ್ದಾರಲ್ಲಾ?

☝ ತರೀಕೆರೆಯೊಳಗೆ ನಿಮ್ಮನ್ನೆಲ್ಲಾ ಮುಳುಗಿಸದಿದ್ದರೆ ...


# ೂಪಾಂತರ'ದ ಕ್ರಿಯಾಶೀಲ ಜೀವಗಳು


## ಂಗ-ಅಂತರಂಗ


ಂಗ ಶಿಕ್ಷಣದ ಯಾವುದೇ ಹಿನ್ನೆಲೆ ಇಲ್ಲದೆಯೂ ನ್ನು ಕಟ್ಟಬೇಕು, ಕಾಣಬೇಕು ಎಂಬ ಹಂಬಲ ಗೆ ತಮ್ಮ ಅವಕಾಶಗಳನ್ನು ತಾವೇ ಸೃಷ್ಟಿಸಿಕೊಳ್ಳುವ ಲ ಸಮಾನ ಮನಸ್ಕರೆಲ್ಲರೂ ಸೇರಿ 1989 ಪಾಂತರ'ಕ್ಕೆ ಅಡಿಪಾಯ ಹಾಕಿದರು. 1.03.1989 ಸಾಮಾಜಿಕ ಹರಿಕಾರ ಹಾಗೂ ಆಧುನಿಕ ರರಾದ ಪಿ.ಲಂಕೇಶರ ಸಣ್ಣ ಕಥೆಯ ರಂಗ ರೂಪ ಪ್ರಯೋಗದ ಮೂಲಕ ರೂಪಾಂತರ ತನ್ನ ಯಣ ಆರಂಭಿಸಿತು. ಪ್ರಸಕ್ತ ಬೆಳ್ಳಿ ಹಬ್ಬದ ದಲ್ಲಿರುವ 'ರೂಪಾಂತರ' ವಿಶೇಷವಾಗಿ ಕಥೆ, ಕಾವ್ಯ


ಶಶಿಧರ್




ವಿಠ್ಠಲ್


ರವಿ



ಬರಿಯಂತಹ ಹತ್ತಾರು ಪ್ರಕಾರಗಳನ್ನು ದೃಶ್ಯ ಗಳಾಗಿ ಹಾಗೂ ದೃಶ್ಯ ಕಾವ್ಯಗಳನ್ನಾಗಿಸಿದ ಹೆಗ್ಗಳಿಕೆ ದೆ. ರಂಗಭೂಮಿಯ ಎಲ್ಲಾ ನೆಲೆಗಳಲ್ಲೂ ಅಂದರೆ ಯ, ರಂಗಸಜ್ಜಿಕೆ, ಪರಿಕರ, ವಸ್ತ್ರವಿನ್ಯಾಸ, ಬೆಳಕು, ಪ್ರಚಾರ, ದಾಖಲೀಕರಣ, ನಿರ್ದೇಶನ, ರಂಗಗೌರವ, ದ, ಪರಿಸರ ಜಾಗೃತಿ- ಹೀಗೆ ಸಮಷ್ಟಿಯಾಗಿ, ಗದ ಪರಿಣಾಮ ಹೆಚ್ಚಿಸಿ ಜನಾನುರಾಗಿಯಾಗಿದೆ. ಂತರ ಮುಖ್ಯವಾಗಿ ಕನಕದಾಸರ ರಾಮಧಾನ್ಯ, ಕೇಶ್ ಅವರ 'ರೊಟ್ಟಿ', ಪೂರ್ಣಚಂದ್ರ ತೇಜಸ್ವಿಯ ೂರಿನ ಪೋಸ್ಟ್ ಆಫೀಸ್, ಕರ್ವಾಲೋ, ಕಿರಗೂರಿನ ಳಿಗಳು, ಕುಂ.ವಿ, ಡಾ.ಶಾಂತರಸ (ಬಡೇಸಾಬು ಪುರಾಣ), ಡಾ.ಕೆ.ಶಿವರಾಮ ಕಾರಂತ, (ಮೈಮನಗಳ ಸುಳಿಯಲ್ಲಿ), ಡಾ.ಪ್ರಭಾಕರ, ಶಿಶಿಲ (ಪುಂಸ್ತ್ರೀ), ಎಂ.ಬಿ.ನಟರಾಜ (ಕೊಕ್ರೆ), ಖುಷ್ವಂತ್‌ಸಿಂಗ್ (ಟ್ರೈನ್ ಟು ಪಾಕಿಸ್ತಾನ್) ಮುಂತಾದ ಕೃತಿಗಳನ್ನು ರಂಗ ರೂಪಗೊಳಿಸಿ ಯಶಸ್ವಿಯಾಗಿ ಪ್ರಯೋಗಿಸಿದೆ. ಅಲ್ಲದೆ ರೂಪಾಂತರ ಸುಪ್ರಸಿದ್ಧ ನಾಟಕಕಾರರ ನಾಟಕಗಳನ್ನು ಪ್ರಯೋಗಿಸುತ್ತಾ ಸಾಗಿದೆ. ಪಿ.ಲಂಕೇಶ್ (ಮುಸ್ಸಂಜೆಯ ಕಥಾ ಪ್ರಸಂಗ), ಗಿರೀಶ್ ಕಾರ್ನಾಡ್ (ತಲೆದಂಡ), ಡಾ.ಹೆಚ್.ಎಸ್. ವೆಂಕಟೇಶಮೂರ್ತಿ (ಹೆಜ್ಜೆಗಳು), ಪ್ರೊ.ಚಂದ್ರಕಾಂತ ಕೂಸನೂರ (ದಿಂಡಿ), ಡಾ.ಡಿ.ವಿಜಯಭಾಸ್ಕರ್ (ಗಾಂಧಿಜಯಂತಿ), ಬಸವರಾಜ್ ಸೊಲೇರಿಪಾಳ್ಯ (ಮಳೆಬೀಜ), ಈಟಗಿ ಈರಣ್ಣ (ಯಹೂದಿ ಹುಡುಗಿ), ಕಾಫಿ ರಾಘವೇಂದ್ರ (ಗಲ್ಬಸಿ) ಮುಂತಾದವರ ಸಿದ್ಧ ನಾಟಕಗಳನ್ನು ಸಹ ಪ್ರಯೋಗಿಸಿದೆ. ಇತ್ತೀಚೆಗೆ ತಮ್ಮ ಪ್ರಯೋಗಗಳ ಮೂಲಕ ಗಮನ ಸೆಳೆದಿರುವ ಡಾ.ಕೆ.ವೈ ನಾರಾಯಣಸ್ವಾಮಿ ಅವರ 'ಚಕ್ರರತ್ನ' ನಾಟಕವನ್ನು ಸಹ ಪ್ರಯೋಗಿಸಿದೆ. ಮುಂದಿನ ವರ್ಷದ ಬೆಳ್ಳಿ ಹಬ್ಬದ ಸಡಗರದಲ್ಲಿರುವ ರೂಪಾಂತರ ರಂಗ ಸಂಸ್ಕೃತಿಯಿಂದ ಪುಸ್ತಕ ಸಂಸ್ಕೃತಿಯೆಡೆಗೂ ಸಾಗುತ್ತಿದೆ. ಕನ್ನಡ, ತೆಲುಗು ನಾಟಕೋತ್ಸವನ್ನು ಸಹ ಆಯೋಜಿಸಿದೆ.

ಇಂತಹ ಪ್ರತಿಷ್ಠಿತ ರೂಪಾಂತರ ತಂಡದ ರೂವಾರಿಗಳಲ್ಲಿ ಪ್ರಮುಖರೆಂದರೆ, ನಟ-ನಿರ್ದೇಶಕ ಅಮರ್, ನಿರ್ದೇಶಕ ಕೆಎಸ್‌ಡಿಎಲ್ ಚಂದ್ರು, ಕಲಾವಿದರಾದ ಸಿ.ವಿ.ಮಂಜುನಾಥ, ನಟರಾದ ಕರಿಬಸವಯ್ಯ, ಗೋಪಿ, ಕನಕರಾಜ್, ವೆಂಕಟಾಚಲ, ಆ.ನ.ರಾವ್ ಜಾದವ್, ಸಿ.ಗುರುಮೂರ್ತಿ, ಸುದರ್ಶನ್ ಮುಂತಾದವರು. ಸಂಘಟಿತ ರೂಪಾಂತರಕ್ಕೆ ಜೊತೆಯಾದವರು ಲಕ್ಷ್ಮೀನಾರಾಯಣಗೌಡ, ಗಂಗಾಧರ್ ಕಡಬೂರ್, ಎನ್.ಟಿ.ಪ್ರಸನ್ನಕುಮಾರ್, ಆ.ನರೇಂದ್ರಬಾಬು, ಅರುಣಾನಂದ (ಗೌ.ಅಧ್ಯಕ್ಷರು), ಸಿದ್ದೇಶ ಮುಂತಾದವರು. ಯುವ ಪ್ರತಿಭೆಗಳಲ್ಲಿ ಪ್ರಮುಖರೆಂದರೆ, ನಟ ಹರೀಶ್, ರಾಮಚಂದ್ರ, ವಾದಿರಾಜ್, ನಂಜುಂಡೇಗೌಡ, ನಿರ್ದೇಶಕ ಚೈತನ್ಯ, ರವಿಕಿರಣ್, ಸೀತಾರಾಮ ಕೊಪ್ಪದ್, ವೇಣು, ರಶ್ಮಿ, ಸಂತೋಷ ಮುಂತಾದವರು. ರೂಪಾಂತರದ ಪ್ರಮುಖ ಪ್ರಯೋಗಗಳಲ್ಲಿ ಕನಕದಾಸರ ರಚನೆಯ 'ರಾಮಧಾನ್ಯ'ವು ಪ್ರತಿಷ್ಠಿತರ ಹಾಗೂ ಜನಸಾಮಾನ್ಯರ (ಕನಿಷ್ಠರ) ಆ ಕಾಲದ ಹಾಗೂ ಈ ಕಾಲದ ಸಾಮಾಜಿಕ ತಾರತಮ್ಯವನ್ನು ಧಾನ್ಯಗಳ ರೂಪಕದ ಮೂಲಕ ಕಟ್ಟಿಕೊಡುತ್ತದೆ. ಈ ಪ್ರಯೋಗ ರೂಪಾಂತರಕ್ಕೆ ಐಕಾನ್ ಇದ್ದಂತೆ. ಡಾ. ರಾಮಕೃಷ್ಣಮರಾಠೆ ಇದಕ್ಕಾಗಿ ಕಾವ್ಯಾನಂದ ಪುರಸ್ಕಾರ ಪಡೆದಿದ್ದಾರೆ.

ಕಲಾವಿದ ದಿ|| ಕರಿಬಸವಯ್ಯ 'ರೂಪಾಂತರ'ದ ಯಶಸ್ವಿ ರಂಗಪ್ರಯೋಗ ಕುಂ.ವಿ.ಅವರ 'ಕತ್ತಲನು ತ್ರಿಶೂಲ ಹಿಡಿದ ಕಥೆ' ನಾಟಕದ ಮೂಲಕ ಕಿರುತೆರೆ ಮತ್ತು ಬೆಳ್ಳಿತೆರೆ ಪ್ರವೇಶಿಸಿದ ಪ್ರತಿಭಾನ್ವಿತ ಕಲಾವಿದ.

ದಿ|| ಕರಿಬಸವಯ್ಯ ನಾಡಿನ ಜನಪ್ರಿಯ ಕಲಾವಿದರಾಗಿದ್ದವರು. ಇತ್ತೀಚೆಗೆ ಅಪಘಾತದಲ್ಲಿ ನಿಧನರಾದರು. 'ರೂಪಾಂತರ' ಈ ಕಲಾವಿದನ ನೆನಪಿಗಾಗಿ ಪ್ರತಿವರ್ಷ 'ಕೆ.ಬಿ.ಹತ್ತು ಸಾವಿರ ನಗದು ಪುರಸ್ಕಾರ' ವನ್ನು ಕಲಾವಿದರೊಬ್ಬರಿಗೆ ನೀಡಿ ಗೌರವಿಸುತ್ತಾ ಬಂದಿದೆ. ರೂಪಾಂತರ ಕರಿಬಸವಯ್ಯನವರ ಐವತ್ತರ ಹುಟ್ಟುಹಬ್ಬ ಸಂಭ್ರಮದ ನೆನಪಿಗೆ 'ಕತ್ತಲನು ತ್ರಿಶೂಲ ಹಿಡಿದ ಕಥೆ' ಎಂಬ ಅಭಿನಂದನಾ ಗ್ರಂಥ ಹಾಗೂ ಈಟಗಿ ಈರಣ್ಣನವರ 'ಕನ್ನಡ ಶಾಯಿರಿಗಳು' ಕೃತಿಗಳನ್ನು ಪ್ರಕಟಿಸಿದೆ.


### ನಿರ್ದೇಶಕ ಕೆಎಸ್‌ಡಿಎಲ್ ಚಂದ್ರು

ರೂಪಾಂತರದ ಪ್ರಮುಖರಲ್ಲಿ ಒಬ್ಬರಾದ ಕೆಎಸ್‌ಡಿಎಲ್ ಚಂದ್ರು ಮೂರು ದಶಕಗಳಿಂದಲೂ ರಂಗ ಕಾಯಕದಲ್ಲಿ ತೊಡಗಿಕೊಂಡವರು. ಇವರು ನಟನೆ, ನಿರ್ದೇಶನ, ಸ್ಥಿರ ಛಾಯಾಗ್ರಹಣ, ಸಂಘಟನೆಯಲ್ಲಿ ಕ್ರಿಯಾಶೀಲರು. ಕೆಎಸ್‌ಡಿಎಲ್‌ನಲ್ಲಿ ನೌಕರಿ ಜೊತೆಗೆ ಇನ್ನೊಂದು ವೃತ್ತಿಯಂತೆ ರೂಪಾಂತರದ ಮೂಲಕ ರಂಗ ಕೃಷಿ ಮಾಡುತ್ತಿರುವ ನಿರ್ದೇಶಕರು.

### ಕಲಾವಿದ ವೆಂಕಟಾಚಲ

ಕಿರುತೆರೆ, ಬೆಳ್ಳಿತೆರೆಗಳಲ್ಲಿ ಗುರುತಿಸಿಕೊಂಡಿರುವ ಇವರು ರೂಪಾಂತರದ ಪ್ರಮುಖ ನಟ-ನಿರ್ದೇಶಕರು. ಇವರು ಸಹ ಎಂಎಸ್‌ಐಎಲ್‌ನ ಕೆಲಸದಿಂದ ಸ್ವಯಂ ನಿವೃತ್ತಿ ಪಡೆದು ರಂಗಕಾಯಕದಲ್ಲಿದ್ದಾರೆ. ಇವರಂತೆ ಕನಕರಾಜು, ಗುರುಮೂರ್ತಿ ಮುಂತಾದವರನ್ನು ಗುರುತಿಸಬಹುದು.

'ಅರಿವಿನ ಸಮಾಜ' ಕಟ್ಟುತ್ತಿರುವ ರೂಪಾಂತರ ಇನ್ನಷ್ಟು ಎತ್ತರಕ್ಕೆ ಬೆಳೆದು ರಂಗಚಳವಳಿಯನ್ನು ಮುನ್ನಡೆಸುವಂತಾಗಲಿ ಎಂದು ಹಾರೈಸೋಣ.



● ಡಾ.ಎ.ಆರ್.ಗೋವಿಂದಸ್ವಾಮಿ,
ರಂಗನಟ, ವಿಮರ್ಶಕ

## ಸಂದರ್ಶನ

# ಅತಂತ್ರ-ಅಸಹಾಯಕತೆಗಳ ನಡುವೆ ಆನೆ

ಹೆಸರಾಂತ ವನ್ಯಜೀವಿ ಸಂಶೋಧಕರಾದ ರ-ಸೇನಾನಿ ಕರ್ನಾಟಕದ ನಿಸರ್ಗಪ್ರಿಯರಿಗೆ ಪರಿಚಿತರು. ಆನೆಗಳ ಹಿಂಡೊಂದು ಬೆಂಗಳೂರಿಗೆ ಭೇಟಿ ನೀಡಿ ಕಾಡಿಗೆ ಹಿಂತಿರುಗಿಸುವ ಘಟನೆ ದೊಡ್ಡ ಸುದ್ದಿಯಾಗಿದೆ. ದರ ಬಗ್ಗೆ ಕೃಪಾಕರ 'ಲಂಕೇಶ್'ಗೆ ಹೇಳಿದ್ದು ಇಲ್ಲಿದೆ.

*ಲಂ: ಕಾಡಾನೆಗಳ ಈ ಚಲನವಲನಗಳು ನ್ನು ಹೇಳುತ್ತಿದೆ?*

ಕೃಪಾಕರ: ಆನೆ ಹಾಗೂ ಮನುಷ್ಯರ ನಡುವಿನ ರ್ಷ ಅತೀ ಗಂಭೀರ ಹಾಗೂ ಸೂಕ್ಷ್ಮ ಸ್ಥಿತಿ ಪ್ತಿರುವ ಸೂಚನೆ ಇದು.

*ಲಂ: ಈ ತರದ್ದು ಪದೇಪದೇ ನಡೆಯುತ್ತಿದೆ ಕೆ?*

ಕೃಪಾಕರ: ಆನೆ ಒಂದು **Social Animal** ಷ್ಯರಂತೆಯೇ ಕುಟುಂಬ ವ್ಯವಸ್ಥೆ ಹೊಂದಿರುವ ಪ್ರಾಣಿ. ಅದು ಹುಲಿ-ಚಿರತೆ ತರ ಒಂಟಿಯಾಗಿರಲ್ಲ, ಹಾಗಾಗಿ ಬಹುತೇಕ ಆನೆಗಳು ಗುಂಪಾಗಿ ಓಡಾಡಿಕೊಂಡಿರ್ತವೆ.

ಇಂಡಿಯಾದಲ್ಲಿ ಅಂದಾಜು ಮುನ್ನೂರರಿಂದ ನಾನೂರು ಏರಿಯಾಗಳಲ್ಲಿ ಆನೆಗಳ ಹಿಂಡು ಈ ರೀತಿ ಗುಂಪಾಗಿ ಓಡಾಡುತ್ತಿರುತ್ತವೆ.

*ಲಂ: ಬೆಂಗಳೂರಿನ ಹೊರವಲಯವು ಅಂತಾದ್ದರಲ್ಲಿ ಒಂದು ಎನ್ನುತ್ತೀರಾ?*

ಕೃ: ಹೌದು. ಇದು ಅನೇಕ ಶತಮಾನಗಳಿಂದ ಆನೆಗಳ ಓಡಾಟದ ಹಾದಿ. ನಾವದನ್ನ **home range** ಅಂದರೆ ಗೃಹವಲಯ ಎನ್ನುತ್ತೇವೆ. ಈ ಪಥಚಲನೆಯ ಅರಿವು ಗುಂಪಿನ ಹಿರಿಯ ಹೆಣ್ಣಾನೆಗಳ ಸ್ಮರಣೆಯಲ್ಲಿರುತ್ತವೆ. ಮಳೆಗಾಲ-ಬೇಸಿಗೆ-ಚಳಿಗಾಲದಲ್ಲಿ ಎಲ್ಲೆಲ್ಲಿ ಮೇವು, ನೀರು ಸಿಗುತ್ತದೆಂದು ತಿಳಿದಿರುವ ಗುಂಪಿನ ನಾಯಕಿ ತನ್ನ ಗುಂಪನ್ನು ಆಯಾ ಪ್ರದೇಶಗಳತ್ತ ಮುನ್ನಡೆಸುತ್ತಿರುತ್ತದೆ. ಈಗ ಜನಸಂಖ್ಯೆ ಬೆಳೆದಂತೆ ನಾವು ಆನೆಗಳ ಪಥಚಲನೆಯ ಏರಿಯಾವನ್ನು ಒತ್ತರಿಸುತ್ತಾ ಅವುಗಳ ಓಡಾಟಕ್ಕೆ ಅಡ್ಡಿಯಾಗಿದ್ದೇವೆ. ಅದರಿಂದಾಗಿ ಈ ಸಮಸ್ಯೆ ಬರುತ್ತಿದೆ.

*ಲಂ: ಆನೆಗಳ ಗೃಹವಲಯ ಅಂದಿರಲ್ಲ ಅದನ್ನ ಕೊಂಚ ವಿವರಿಸಿ...*

ಕೃ: ನೋಡಿ... ಪ್ರತಿಯೊಂದು ಆನೆಗಳ ಗುಂಪಿಗೆ ಸರಾಸರಿ **500-600** ಚದರ ಕಿ.ಮೀನಷ್ಟು ನಿರ್ದಿಷ್ಟ ಏರಿಯಾ ಇರುತ್ತೆ. ಅವು ಋತುಮಾನ ಆಧರಿಸಿ ಈ ಏರಿಯಾದಲ್ಲಿ ಪಥಚಲನೆ ನಡೆಸುತ್ತಿರುತ್ತವೆ. ನಾವೀಗ ಆನೆಗಳ ಈ **home range** ಅನ್ನೇ ಕಿರಿದಾಗಿಸುತ್ತಿದ್ದೇವೆ. ಅಭಿವೃದ್ಧಿಯ ಹೆಸರಲ್ಲಿ ಇದೆಲ್ಲಾ ನಡೆದಿದೆ.

*ಲಂ: ಈಗಿರುವ ಕಾಡುಗಳೊಳಗೆ ಏನಾಗುತ್ತಿದೆ?*

ಕೃ: ಮುಖ್ಯವಾಗಿ ಮೇವಿನ ಗುಣಮಟ್ಟ ಕಳಪೆಯಾಗಿದೆ. ಕಳೆ ಸಸ್ಯಗಳು ಹೆಚ್ಚಾಗಿ ಮೇವು ಹುಲ್ಲು ಕಡಿಮೆಯಾಗಿದೆ. ಜೊತೆಗೆ ಕಾಡಿನಂಚಿನ ರೈತರ ದನಗಳು, ಆಡುಗಳು ಕಾಡಿನಲ್ಲೇ ಮೇಯುವುದರಿಂದಾಗಿ ಆನೆಗಳಿಗೆ ಸಹಜವಾಗೇ ಮೇವಿನ ಕೊರತೆ ಉಂಟಾಗುತ್ತಿದೆ. ಇವೆಲ್ಲ ಆನೆಗಳ ಮೇಲಿನ ಒತ್ತಡ ಹೆಚ್ಚಿಸುತ್ತಿವೆ.

*ಲಂ: ಇದರ ಬಗ್ಗೆ ವ್ಯವಸ್ಥಿತ ಅಧ್ಯಯನಗಳಾಗಿವೆಯಾ?*

ಕೃ: ಅಜಯ್ ಎ. ದೇಸಾಯಿ ಅಂತ ಬೆಳಗಾಂನ ಒಬ್ಬ ವನ್ಯಜೀವಿ ಸಂಶೋಧಕರು ಮಧುಮಲೈ ಕಾಡಲ್ಲಿ ಒಂದು ಸ್ಟಡಿ ಮಾಡಿದ್ದಾರೆ. ಅಜಯ್‌ಗೆ ಈ ಕ್ಷೇತ್ರದಲ್ಲಿ ತುಂಬಾ ಪರಿಣಿತಿ ಇದೆ. ಅವರು ಶ್ರೀಲಂಕಾ, ವಿಯಟ್ನಾಂ, ಥಾಯ್‌ಲ್ಯಾಂಡ್ ದೇಶಗಳಲ್ಲೂ ಆನೆಗಳ ಬಗ್ಗೆ ಸ್ಟಡಿ ಮಾಡುವ **consultant** ಆಗಿದ್ದಾರೆ. ಬಹುಶಃ ಅಜಯ್ ತರದ ತಜ್ಞರ ನೆರವು- ಸಲಹೆ ಪಡೆಯುವುದಾದರೆ ಸ್ವಲ್ಪ ಸಾಧ್ಯವಾಗಬಹುದಾದ ಪರಿಹಾರ ಹುಡುಕಬಹುದೇನೊ!

*ಲಂ: ಆನೆಗಳು ಕಾಡಿನಿಂದ ಹೊರಬರದಂತೆ ತಡೆಯಲು ಟ್ರೆಂಚ್ ಹಾಗೂ ಸೋಲಾರ್ ಬೇಲಿ ತರದ ಯೋಜನೆಗಳಿವೆಯಲ್ಲ?*



ಕೃಪಾಕರ

ಕೃ: ಅವೆಲ್ಲ ಜಾಸ್ತಿ ದಿನ ಉಳಿಯುವುದಿಲ್ಲ ಎನ್ನುವುದು ಈಗಾಗಲೇ ಸಾಬೀತಾಗಿದೆ. ಬಿಹಾರದಲ್ಲಿ ದಾಲ್‌ಮಾ ಎಂಬ ಆನೆ ವಲಯದ ಕಾಡು ಇದೆ. ಅಂದಾಜು ನೂರು ಚ.ಕಿ.ಮೀನಷ್ಟು ಚಿಕ್ಕ ವಿಸ್ತೀರ್ಣದ ಆ ಕಾಡಿನಲ್ಲಿ ನಲವತ್ತು ಆನೆಗಳನ್ನು ಹೀಗೆ ನಿರ್ಬಂಧಿಸಿ ಇಟ್ಟಿದ್ದಾರೆ. ಇಂತದ್ದು ಆನೆಗಳ ಜಾಯಮಾನಕ್ಕೆ ಒಗ್ಗುವಂತಾದ್ದಲ್ಲ.

*ಲಂ: ಹಾಗಾದರೆ ಇದಕ್ಕೆಲ್ಲಾ ಪರಿಹಾರ ಏನು?*


ಕೃ: ನನಗೂ ಗೊತ್ತಿಲ್ಲ. ಆನೆಗಳಂತೆಯೇ ಮನುಷ್ಯ ಜೀವಿಯೂ ಮುಖ್ಯ ನಿಜ. ವನ್ಯಜೀವಿ ಹಾಗೂ ಕಾಡಿನ ಅಂತರ್ಯ ಅರಿತಿರುವ ಅಜಯ್ ದೇಸಾಯಿ ತರದವರ ನೆರವು ಪಡೆದು ಸರ್ಕಾರ ಯೋಚಿಸಬೇಕು ಅಂತ ಈ ತಕ್ಷಣಕ್ಕೆ ಅನಿಸುತ್ತದೆ.

● ಪಾರ್ವತೀಶ್



# ಮನುವಾದವು ಸಂಘ ಪರಿವಾರದ ಗರ್ಭದಲ್ಲಿದೆ

ತಮ್ಮದು ಸಾಂಸ್ಕೃತಿಕ ಸಂಘಟನೆ, ದೇಶ ಭಕ್ತ ಸಂಘಟನೆ ಎಂದು ಹೇಳಿಕೊಳ್ಳುವ ಆರ್.ಎಸ್.ಎಸ್. ಸಹಿತ ಅದರ ಮಿತ್ರ ಸಂಘಟನೆಗಳು ನಿಜವಾಗಿಯೂ ದೇಶ ಭಕ್ತ ಸಾಂಸ್ಕೃತಿಕ ಸಂಘಟನೆಗಳೇ? ಖಂಡಿತವಾಗಿಯೂ ಇಲ್ಲ. ಸಂಘ ಪರಿವಾರವು ಜಾತ್ಯತೀತ ಸಂವಿಧಾನ ಹೊಂದಿರುವ ಪ್ರಜಾಪ್ರಭುತ್ವವಾದಿ ದೇಶಕ್ಕೆ ಮತ್ತು ಮಾನವ ಸಮಾಜಕ್ಕೆ ಅಪಾಯಕಾರಿಯಾಗಿರುವ ಬ್ರಾಹ್ಮಣ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಮನುವಾದವನ್ನು ಹಾಗು ರಾಜಪ್ರಭುತ್ವದ ಆಡಳಿತವನ್ನು ತರುವ ಹಿಡನ್ ಅಜೆಂಡಾವನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ. ಆದರೂ ಸಾಮಾಜಿಕ ಸಾಂಸ್ಕೃತಿಕ ದೇಶಭಕ್ತಿಯ ಮುಖವಾಡವನ್ನು ಹಾಕಿಕೊಂಡು ಸ್ವಾತಂತ್ರ್ಯ ಪೂರ್ವದಿಂದಲೂ ತನ್ನ ಅಜೆಂಡಾವನ್ನು ಅನುಷ್ಠಾನಕ್ಕೆ ತರಲು ಹರಸಾಹಸ ಪಡುತ್ತಿದೆ.



ಗೋಳ್ವಾಲ್ಕರ್

ಮುಗ್ಧ ಜನರನ್ನು ಹಿಂದೂತ್ವವೆಂಬ ಕಾಲ್ಪನಿಕ ಭ್ರಮಾಲೋಕಕ್ಕೆ ತಳ್ಳಿ ಅವರಿಗೆ ಧರ್ಮದ ಅಮಲನ್ನು ಕುಡಿಸಿ ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಕಾರ್ಯೋನ್ಮುಖರಾಗಬೇಕೆಂದು ಶೂದ್ರಾದಿ ದಲಿತರನ್ನು ಅಲ್ಪಸಂಖ್ಯಾತ ಸಮುದಾಯದ ಜನರ ವಿರುದ್ಧ ಎತ್ತಿ ಕಟ್ಟಿ ತನ್ನ ಮನುವಾದಿ ರಾಷ್ಟ್ರ ಸ್ಥಾಪನೆಗೆ ಪ್ರಯತ್ನಿಸುತ್ತಿದೆ. ಇತ್ತೀಚೆಗಂತೂ ಸಂಘಪರಿವಾರವು ಮನುವಾದಿಯಲ್ಲವೆಂಬ ಮಾತನ್ನು ಹೇಳುತ್ತಲೇ ಅಲ್ಲಲ್ಲಿ ಜಾತಿ ಸಮಾವೇಶಗಳನ್ನು ನಡೆಸುತ್ತಾ ಜಾತ್ಯತೀತರಾಗಿದ್ದ ಬಹುಸಂಖ್ಯಾತ ಹಿಂದೂಗಳನ್ನು ಜಾತಿವ್ಯವಸ್ಥೆಯಲ್ಲೇ ಮುಂದುವರಿಯಲು ಯತ್ನಿಸುತ್ತಿದೆ. ತೊಂಭತ್ತರ ದಶಕದವರೆಗೂ ಜಾತ್ಯತೀತತೆಗೆ ರಾಷ್ಟ್ರದಲ್ಲೇ ಮಾದರಿಯಾಗಿದ್ದ ಕರ್ನಾಟಕದಲ್ಲಿ ಮರ್ಯಾದ ಹತ್ಯೆಯಂತಹ ಅನಿಷ್ಟ ಸಮಾಜಘಾತುಕ ಕೃತ್ಯಗಳು ನಡೆಯುತ್ತಿವೆ. ಜಾತಿ ಸಂಘರ್ಷಗಳು ತಾರಕಕ್ಕೇರುತ್ತಿವೆ. ಪ್ರತಿಯೊಬ್ಬರು ಜಾತಿ ಎಂಬ ಹಿಡುಗಿನಲ್ಲಿ ತಮ್ಮನ್ನು ತಾವು ಮಾನವರೆಂಬುದನ್ನು ಮರೆತು ಬಿಟ್ಟದ್ದಾರೆ.

ಇಷ್ಟಾಗಿಯೂ ಸಂಘ ಪರಿವಾರವು ತಾನು ಮನುವಾದಿಯಲ್ಲವೆಂದು ಸಾಧಿಸಲು ಹೊರಟಿದೆ. ಸಂಘ ಪರಿವಾರವನ್ನು ಮನುವಾದಿಯಲ್ಲವೆನ್ನುವುದು ಒಂದು ಮೂರ್ಖತನದ ಮಾತು. ಸಂಘ ಪರಿವಾರದ ಹಿಂದೂ ಮಹಾಸಭಾದ ಅಧ್ಯಕ್ಷರಾಗಿದ್ದ ವಿನಾಯಕ ದಾಮೋದರ್ ಸಾವರ್‌ಕರ್‌ರವರು ತಮ್ಮ 'ಹಿಂದೂಯಿಸಂ' ಕೃತಿಯಲ್ಲಿ ಮನುಸ್ಮೃತಿಯನ್ನು ಉಲ್ಲೇಖಿಸುತ್ತಾ "ವೇದಗಳ ನಂತರದಲ್ಲಿ ಅತ್ಯಂತ ಪೂಜನೀಯ ಗ್ರಂಥವಾಗಿದ್ದುದು ಮನುಸ್ಮೃತಿಯಾಗಿದೆ. ಆರ್ಯಾವರ್ತವು ಪ್ರಧಾನವಾಗಿ ಜಾತಿವ್ಯವಸ್ಥೆಯನ್ನು ಆಧರಿಸಿರುವುದರಿಂದಲೇ ಹಿಂದೂ ಜನಾಂಗವು ಪರಿಶುದ್ಧವಾಗಿ ಉಳಿದಿದೆ. ಭಾರತವನ್ನು ಒಂದು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಲು ವರ್ಣಾಶ್ರಮ ಧರ್ಮದಂತಹ ನೈಸರ್ಗಿಕ ನಿಯಮದ ಅವಶ್ಯಕತೆಯಿದೆ. ಜಾತಿಪದ್ಧತಿಯು ನಮ್ಮ ರಾಷ್ಟ್ರದ ಒಂದು ವಿಶಿಷ್ಟ ಗುರುತು. ಜಾತಿವ್ಯವಸ್ಥೆ ಇಲ್ಲದ ದೇಶವು ಮ್ಲೇಚ್ಛ (ಜಾತಿ ಭ್ರಷ್ಟ) ದೇಶವಾಗಿರುತ್ತದೆ. ಹಿಂದೆ ಬೌದ್ಧ ದರ್ಶಿಯರು ಜಾತಿಪದ್ಧತಿಯನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಆವಾಗ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಅಪಾಯ ಬಂದೊದಗಿತು. ಆದರೆ ಅದನ್ನು ಮರುಸ್ಥಾಪಿಸುವುದು ತಮ್ಮ ಪವಿತ್ರ ಕರ್ತವ್ಯವೆಂದು ಧರ್ಮ ರಕ್ಷಣೆಯೆಂದು ಭಾವಿಸಿದ ಕ್ಷತ್ರಿಯ ರಾಜಮಹಾರಾಜರುಗಳಿಂದಾಗಿ, ಬ್ರಾಹ್ಮಣರಿಂದಾಗಿ ಕೊನೆಯಲ್ಲಿ ಚಾತುರ್ವರ್ಣ ಪದ್ಧತಿಯೇ ಗೆದ್ದಿತು. ಮನುಸ್ಮೃತಿಯೇ ಸನಾತನ ಹಿಂದೂ ಧರ್ಮದ ಮೂಲ ಕಾನೂನು. ಅದನ್ನು ಅಳವಡಿಸಿಕೊಂಡು ಮುಂದುವರಿದಲ್ಲಿ ಹಿಂದೂ ರಾಷ್ಟ್ರವು ಅಜೇಯವಾಗುವುದು ಹಾಗೂ ವಿಜಯಿಯಾಗಲು ಶಕ್ತವಾಗುವುದು" ಎಂದಿದ್ದಾರೆ.

ಮಾತ್ರವಲ್ಲ 1937ರಲ್ಲಿ ಅಹಮದಾಬಾದ್‌ನಲ್ಲಿ ನಡೆದ ಹಿಂದೂ ಮಹಾಸಭಾದ ಅಧಿವೇಶನದ ವೇಳೆ ನೇಪಾಳದ ದೊರೆಯನ್ನು ಸ್ವತಂತ್ರ ಭಾರತದ ಭವಿಷ್ಯದ ಚಕ್ರವರ್ತಿಯೆಂದು ಸಾವರ್‌ಕರ್ ಬಣ್ಣಿಸಿದ್ದರು. ಅಧಿವೇಶನದ ಪ್ರಾರಂಭದಲ್ಲಿ ನೇಪಾಳದ ರಾಜನಿಗೆ ಶುಭಕೋರಿ ಗೀತೆಯೊಂದನ್ನು ಹಾಡಲಾಯಿತು. ಮತ್ತು ನೇಪಾಳದ ರಾಜನ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ನಮನವನ್ನು ಸಲ್ಲಿಸಲಾಗಿತ್ತು. ಇದರ ಮುಂದುವರಿದ ಭಾಗವಾಗಿ ಜನವರಿ 23, 2004ರಲ್ಲಿ ನೇಪಾಳದ ಕಾಠ್ಮಂಡುವಿನಲ್ಲಿ ನಡೆದ ವಿಶ್ವ ಹಿಂದೂ ಮಹಾಸಂಘದಲ್ಲಿ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷರಾಗಿದ್ದ ಅಶೋಕ್ ಸಿಂಘಾಲ್ ಅವರು "ನೇಪಾಳದ ದೊರೆ ಗ್ಯಾನೇಂದ್ರರು ವಿಶ್ವದಾದ್ಯಂತವಿರುವ ಹಿಂದೂಗಳ ಸಾಮ್ರಾಟ" ಎಂದು ಕೊಂಡಾಡಿದ್ದರು. ಮಾತ್ರವಲ್ಲ "ಧರ್ಮದ ರಕ್ಷಣೆಗಾಗಿ ಭಗವಂತನಿಂದ ಸೃಷ್ಟಿಸಲ್ಪಟ್ಟಿರುವ ಈ ಹಿಂದೂ ಸಾಮ್ರಾಟನನ್ನು ರಕ್ಷಿಸುವುದು ಜಗತ್ತಿನ 900 ಮಿಲಿಯ ಹಿಂದೂಗಳ ಕರ್ತವ್ಯ" ಎಂದಿದ್ದರು.

ಈಗ ಹಿಂದೂತ್ವವಾದಿ ಕೇಸರಿ ಭಯೋತ್ಪಾದನೆಯಲ್ಲಿ ಬಂಧಿತ ಆರೋಪಿಗಳಾಗಿರುವ ದಯಾನಂದ ಪಾಂಡೆ, ಕರ್ನಲ್ ಪ್ರಸಾದ್ ಪುರೋಹಿತ್, ಪ್ರಜ್ಞಾಸಿಂಗ್ ಠಾಕೋರ್, ಅಸೀಮಾನಂದ ಮೊದಲಾದವರು 2006 ಜೂನ್ 24ರಂದು ನೇಪಾಳದ ದೊರೆ ಗ್ಯಾನೇಂದ್ರನನ್ನು ಭೇಟಿಯಾಗಿದ್ದರು. ಮಾತ್ರವಲ್ಲ ಸಂಘಪರಿವಾರದ ಸದಸ್ಯರಿಗೆ ಸೈನಿಕ ತರಬೇತಿಯನ್ನು ಕೊಡಲು ಹಾಗೂ ಶಸ್ತ್ರಾಸ್ತ್ರಗಳನ್ನು ಪೂರೈಸಲು ಈ ಸಂದರ್ಭದಲ್ಲಿ ದೊರೆಯನ್ನು ಕೋರಿದ್ದರು. 2008 ಜನವರಿ 26ರಂದು ಕಾಠ್ಮಂಡುವಿನಲ್ಲಿ ನಡೆದ ಗುಪ್ತ ಸಭೆಯಲ್ಲಿ ಪ್ರಸಾದ್ ಪುರೋಹಿತ್ ಮಾತಾಡುತ್ತಾ ಹಿಂದೂ ಆರ್ಯಾವರ್ತ ಸರ್ಕಾರವನ್ನು ವಿರೋಧಿಸಿದ್ದಲ್ಲಿ ಅಂಥವರನ್ನು ಬಹಿಷ್ಕರಿಸಿ ಕೊಲ್ಲಲಾಗುವುದೆಂದು ಹೇಳಿದ್ದರು. ಇದೇ ಸಭೆಯಲ್ಲಿ ಮಾತನಾಡಿದ ದಯಾನಂದ ಪಾಂಡೆ "ಹಿಂದೂ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವಕ್ಕೆ ಜಾಗವಿಲ್ಲ; ಅಲ್ಲಿ ರಾಜಪ್ರಭುತ್ವವೇ ಆದ್ದರಿಂದ ಒಂದು ರಾಷ್ಟ್ರ, ಒಬ್ಬ ರಾಜ, ಒಂದು ಸಿದ್ಧಾಂತವೇ ನಿರ್ಣಾಯಕವಾಗಿರುತ್ತದೆ. ಇದಕ್ಕಾಗಿ ಮೊದಲು ವಿದೇಶದಲ್ಲಿ ದೇಶಭ್ರಷ್ಟ ಸರ್ಕಾರವೊಂದನ್ನು ಸ್ಥಾಪಿಸಬೇಕಾಗಿದೆ" ಎಂದಿದ್ದರು.


ಸಾವರ್‌ಕರ್

ಸಾವರ್‌ಕರ್‌ನ ಹಾಗೆಯೇ ಮನುಸ್ಮೃತಿಯನ್ನು ಆರ್.ಎಸ್.ಎಸ್‌ನ ಸರಸಂಘ ಸಂಚಾಲಕರಾಗಿದ್ದ ಮಾಧವ ಸದಾಶಿವ ಗೋಳ್ವಾಲ್ಕರ್ ಕೂಡಾ ಶ್ರೇಷ್ಠವೆಂದು ಪ್ರತಿಪಾದಿಸಿದ್ದಾರೆ. ಮತ್ತು ಸಾವರ್‌ಕರ್‌ರವರ ಚಿಂತನೆಗಳನ್ನು ಮುಂದುವರಿಸಿದ್ದರು. ಅವರು ತಮ್ಮ 'ಬಂಚ್ ಆಫ್ ಥಾಟ್ಸ್' ಎಂಬ ಕೃತಿಯಲ್ಲಿ "ಪ್ರಜಾಪ್ರಭುತ್ವದ ಪ್ರಜಾತಾಂತ್ರಿಕ ವ್ಯವಸ್ಥೆ ಪರಕೀಯವಾದುದು. ಆದುದರಿಂದ ಮನುವಿನ ಚಿಂತನೆಯಲ್ಲಿ ಸಾವಿರಾರು ವರ್ಷಗಳ ಕಾಲ ದಿವ್ಯ ಸಂಸ್ಕೃತಿ ಸಂಪ್ರದಾಯವನ್ನು ಹೊಂದಿದ ಭಾರತವು ವರ್ಣಾಶ್ರಮ ವ್ಯವಸ್ಥೆಯಲ್ಲಿಯೇ ಮುಂದುವರಿಯಬೇಕು. ಮನುವು ಅತ್ಯಂತ ವಿವೇಚನೆವುಳ್ಳ ವಿವೇಕವನ್ನು ಹೊಂದಿದಂತಹ ಶ್ರೇಷ್ಠ ಕಾನೂನಿನ ಜನಕ. ಹೀಗಾಗಿ ಮನುಸ್ಮೃತಿಯೇ ಹಿಂದೂ ರಾಷ್ಟ್ರದ ಸಂವಿಧಾನವಾಗಿರುತ್ತದೆ" ಎಂದು ಹೇಳಿದ್ದಾರೆ.


ಹೀಗೆ ಮನುಸ್ಮೃತಿಯನ್ನು ಸಮರ್ಥಿಸಿದ ಗೋಳ್ವಾಲ್ಕರ್ 1940ರಲ್ಲಿ ತಮಿಳುನಾಡಿನ ಮಧುರೆಯಲ್ಲಿ ನಡೆದ ಹಿಂದೂ ಮಹಾಸಭಾದ ಅಧಿವೇಶನದ ವೇಳೆ "ಮನುಸ್ಮೃತಿಯೇ ಹಿಂದೂಗಳ ಮೂಲ ಕಾನೂನು. ಅದನ್ನು ಹಿಂದು ರಾಷ್ಟ್ರದಲ್ಲಿ ಅಳವಡಿಸುವುದು ಬಹಳ ಮುಖ್ಯವಾಗಿದೆ. ಹಿಂದೂ ರಾಷ್ಟ್ರವು ಶಕ್ತಿಶಾಲಿ ಅಜೇಯ ರಾಷ್ಟ್ರವಾಗಬೇಕಿದ್ದರಿಂದ ಇದು ಅತೀಮುಖ್ಯವಾಗಿದೆ" ಎಂದೆಲ್ಲಾ ವಾದಿಸಿದ್ದರು.

ಈ ರೀತಿ ಮನುಸ್ಮೃತಿಯನ್ನು ಬಹಿರಂಗವಾಗಿ ಸಮರ್ಥಿಸಿದ್ದ ಮನುವಾದಿ ಸಂಘ ಪರಿವಾರವು ಆನಂತರದ ಕಾಲಘಟ್ಟದಲ್ಲಿ ದ್ರಾವಿಡ ಚಳವಳಿಯಿಂದ, ಎಡಪಕ್ಷಗಳ ಸಾಮಾಜಿಕ ಹೋರಾಟದಿಂದಾಗಿ ಅದನ್ನು ಹಿಡನ್ ಅಜೆಂಡಾವಾಗಿಸಿ ತನ್ನ ಗರ್ಭದಲ್ಲಿರಿಸಿಕೊಂಡರು. ಆದರೂ ಶೂದ್ರಾದಿ ದಲಿತರಿಗೆ ಧರ್ಮದ ಅಮಲೇರಿಸಿ, ಅವರಲ್ಲಿ ಅಲ್ಪಸಂಖ್ಯಾತ ವಿರೋಧಿ ದ್ವೇಷವನ್ನು ಹುಟ್ಟುಹಾಕಿ, ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರೈಸ್ತರ ವಿರುದ್ಧ ಮತ್ತು ಸಮಾನತೆಗಾಗಿ ರಾಜಕೀಯ, ಸಾಮಾಜಿಕ ಹೋರಾಟವನ್ನು ನಡೆಸುತ್ತಿರುವ ಕಮ್ಯೂನಿಸ್ಟರ ವಿರುದ್ಧವೂ ಎತ್ತಿಕಟ್ಟಿದರು. ಹಿಂದೂ ರಾಷ್ಟ್ರವೇನಾದರೂ ಈ ದೇಶದಲ್ಲಿ ಸ್ಥಾಪನೆಯಾದಲ್ಲಿ ಮುಂದೆ ಶೂದ್ರಾದಿ ದಲಿತರು ಆ ಮನುವಾದಿ ಬ್ರಾಹ್ಮಣಶಾಹಿಗಳಿಗೆ ಗುಲಾಮರಾಗಿ ಜೀತದಾಳುಗಳಾಗಿ ಜಾತ್ಯತೀತ ಪ್ರಜಾಪ್ರಭುತ್ವದಲ್ಲಿ ದೊರಕಿರುವ ತಮ್ಮ ಬದುಕಿನ ಹಕ್ಕನ್ನೆಲ್ಲ ಕಳೆದುಕೊಂಡು ಬದುಕಬೇಕಾದ ದುಸ್ಥಿತಿ ಬರುತ್ತದೆ. ಶೂದ್ರಾದಿ ದಲಿತರು ಮನುವಾದಿಗಳ ಹಿಂದೂ ರಾಷ್ಟ್ರದ ಕುತಂತ್ರಕ್ಕೆ ಬಲಿಯಾಗದಿರಲು ಅವರಲ್ಲಿ ಸಾಮಾಜಿಕ, ರಾಜಕೀಯ ಜಾಗೃತಿಯನ್ನು ಮೂಡಿಸಬೇಕಾಗಿದೆ. ಇಲ್ಲವಾದಲ್ಲಿ ಅವರು ಮತ್ತೊಮ್ಮೆ ಮನುವಾದಿಗಳ ಕುತಂತ್ರಕ್ಕೆ ಬಲಿಯಾಗಬಹುದು. ಇದಕ್ಕಾಗಿ ಜಾತ್ಯತೀತ ಸಂಘಟನೆಗಳು, ಜಾತ್ಯತೀತ ಪಕ್ಷಗಳು, ಪ್ರಗತಿಪರರು, ಸಮಾಜವಾದಿಗಳು, ಎಡಪಂಥೀಯರು ತಮ್ಮಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ತೊರೆದು ಶ್ರಮಿಸಬೇಕಾಗಿದೆ.

● ಬಿ. ದಾಮೋದರ ಭಟ್, ಬೆಳ್ತಂಗಡಿ

# ಶಿವಾಜಿಗೆ ಅವಮಾನ ಮಾಡಿದ್ದ 'ಹಿಂದೂ'ಗಳು

ಜೇಷ್ಠ ಶುದ್ಧ ತ್ರಯೋದಶಿಯಂದು ಛತ್ರಪತಿ ಶಿವಾಜಿಯ ಪಟ್ಟಾಭಿಷೇಕ ನಡೆದಿತ್ತು. ಆ ತಿಥಿಯು ಈ ವರ್ಷ ಜೂನ್ 21 ಕ್ಕೆ ಬಂದಿದ್ದು ಕೆಲವು ಹಿಂದೂ ಅಭಿಮಾನಿಗಳು ಇದನ್ನು 'ಹಿಂದೂಗಳ ಸ್ವಾಭಿಮಾನಿ ದಿನ ಅರ್ಥಾತ್ ಹಿಂದೂ ಸಾಮ್ರಾಜ್ಯ ದಿನ' ಎಂದು ಮೊದಲ ಬಾರಿಗೆ ಆಚರಿಸಿದ್ದಾರಂತೆ. ಇನ್ನು ಇದು ಪ್ರತಿ ವರ್ಷ ಆಚರಣೆಯಾಗಬಹುದು. ಇದರಲ್ಲಿ ತಪ್ಪೇನಿಲ್ಲ ಬಿಡಿ. ಕಾರಣ ಶಿವಾಜಿ ಇಲ್ಲದಿರುತ್ತಿದ್ದರೆ ಮಹಾರಾಷ್ಟ್ರ, ಗುಜರಾತ್ ಮತ್ತು ಉತ್ತರ ಕರ್ನಾಟಕದಲ್ಲಿ ಇಂದು ಹಿಂದೂಗಳು ಅಲ್ಪಸಂಖ್ಯಾತರಾಗಿರುತ್ತಿದ್ದರು ಎಂಬುದು ನಿಜ. ಆದರೆ ಶಿವಾಜಿಯ ಈ ಪಟ್ಟಾಭಿಷೇಕದ ಮೇಲೆ ಹಿಂದೂ ಧರ್ಮದ ಕರಾಳ ಜಾತಿ ಭೇದದ ಕರಿ ಛಾಯೆ ಬಿದ್ದಿತ್ತು ಮತ್ತು ಶಿವಾಜಿಯಾಗಿದ್ದರಿಂದ ಅದನ್ನು ನಿವಾರಿಸಿದ್ದ, ಬೇರೆಯವರಾಗಿದ್ದರೆ ಇದರಲ್ಲಿ ಯಶಸ್ವಿಯಾಗುತ್ತಿರಲಿಲ್ಲ ಎಂಬ ವಿಷಯ ಹೆಚ್ಚಿನ ಜನರಿಗೆ ಗೊತ್ತಿರಲಿಕ್ಕಿಲ್ಲ.



ವೀರ ಶಿವಾಜಿಯು ನಿರಂತರ ಹೋರಾಟದಿಂದ ಹಿಂದೂ ಸ್ವರಾಜ್ಯ ಸ್ಥಾಪಿಸಿದ ಮೇಲೆ ತನ್ನನ್ನು ಅಧಿಕೃತವಾಗಿ ರಾಜನೆಂದು ವಿಧಿಬದ್ಧವಾಗಿ ಪಟ್ಟಾಭಿಷೇಕ ಮಾಡಿಸಿಕೊಳ್ಳಲು ನಿಶ್ಚಯಿಸಿ ಮಹಾರಾಷ್ಟ್ರದ ಪುರೋಹಿತರಿಗೆ ಸಿದ್ಧತೆ ಮಾಡಲು ಆದೇಶ ಕೊಟ್ಟನು. ಆದರೆ ಮಹಾರಾಷ್ಟ್ರದ ಯಾವುದೇ ಪುರೋಹಿತನೂ ಇದಕ್ಕೆ ಒಪ್ಪಲಿಲ್ಲ, ಅದಕ್ಕೆ ಅವರು ಕೊಟ್ಟ ಕಾರಣ ಶಿವಾಜಿಯು ಕ್ಷತ್ರಿಯ ಜಾತಿಯವನಲ್ಲ, ಅವನು ಹಿಂದುಳಿದ ಶೂದ್ರ ಜಾತಿಯವನು ಎಂಬುದು. ಇದೇ ಶಿವಾಜಿ ತಮ್ಮ ಹಿಂದೂ ಧರ್ಮವನ್ನು ಕಾಪಾಡಿದ ಮಹಾಪುರುಷ ಎಂದು ಗೊತ್ತಿದ್ದೂ ಆ ಮರಾಠಿ ಚಿತ್ಪಾವನ ಮತ್ತು ದೇಶಸ್ಥ ಬ್ರಾಹ್ಮಣರಿಗೆ ಶೂದ್ರ ಶಿವಾಜಿಯನ್ನು ತಮ್ಮ ರಾಜ ಎಂದು ಒಪ್ಪಿಕೊಳ್ಳಲು ಅವರ ಸಂಕುಚಿತ ಜಾತಿಯತೆ ಅಡ್ಡ ಬಂದಿತ್ತು, ನಂತರ ಶಿವಾಜಿಯು ಕಾಶಿ-ವಾರಣಾಸಿಯ ಬ್ರಾಹ್ಮಣರನ್ನು ಈ ಕಾರ್ಯಕ್ಕಾಗಿ ಕರೆಸಲು ಪ್ರಯತ್ನಿಸಿದನು. ಆದರೆ ಅವರೂ ಇದೇ ಕಾರಣ ಕೊಟ್ಟು ನಿರಾಕರಿಸಿದರು. ಕೊನೆಗೆ ಶಿವಾಜಿಯು ಗೋಮಾಂತಕದಿಂದ (ಈಗಿನ ಗೋವಾದಿಂದ) ಗೋಪಾಲ ಭಟ್ಟನೆಂಬ ಬ್ರಾಹ್ಮಣನನ್ನು ಕರೆಸಿ ತನ್ನ ಪಟ್ಟಾಭಿಷೇಕವನ್ನು ವಿಧಿಬದ್ಧವಾಗಿ ಮಾಡಿಸಿಕೊಂಡನು. ಆಗ ನಮ್ಮ ಗೋಕರ್ಣ ಪ್ರದೇಶವು ಗೋಮಂತಕದ ಭಾಗವಾಗಿತ್ತಂತೆ. ಆದ್ದರಿಂದ ಆ ಗೋಪಾಲಭಟ್ಟ ನಮ್ಮ ಗೋಕರ್ಣದ ಕನ್ನಡಿಗ ಪುರೋಹಿತನಾಗಿರಬಹುದು ಎಂಬುದು ಕೆಲವು ಸಂಶೋಧಕರ ಅಭಿಪ್ರಾಯ.

ಅದೇನೇ ಇರಲಿ, ಇಲ್ಲಿ ಮಹಾರಾಷ್ಟ್ರದ ಮತ್ತು ಕಾಶಿಯ ವೈದಿಕರು ತೋರಿದ ಮನೆಮುರುಕತನ ಗಮನ ಸೆಳೆಯುವಂತಹದ್ದು. ಭಾರತದ ಇತಿಹಾಸವನ್ನೇ ಬದಲಿಸಿದ ಮತ್ತು ತಮ್ಮ ಧರ್ಮವನ್ನೇ ರಕ್ಷಿಸಿದ ಶಿವಾಜಿಯ ಬಗ್ಗೆಯೂ ಇವರು ಕೀಳು-ಶೂದ್ರ ಎಂದು ಜಾತಿಯ ಭೇದ-ಭಾವ ಮಾಡಿದ್ದು ಮೂರ್ಖತನದ ಪರಮಾವಧಿಯಾಗಿತ್ತು. ಹಿಂದೂ ಮೇಲ್ಜಾತಿಗಳ ಇಂತಹ ಅಲ್ಪಬುದ್ಧಿಯಿಂದಾಗಿಯೇ ಪರಕೀಯರು ನಮ್ಮನ್ನಾಳುವಂತೆ ಆಗಿದ್ದು ಎಂಬ ಸತ್ಯ ಈಗಲೂ ಪ್ರಜ್ಞಾವಂತರ ಮನಸ್ಸನ್ನು ಕಟುಕುತ್ತದೆ.

ಇಂತಹದ್ದೇ ಇನ್ನೆರಡು ಐತಿಹಾಸಿಕ ಘಟನೆಗಳನ್ನೂ ಇಲ್ಲಿ ಹೇಳುವುದು ಉಚಿತ.

ಮೊದಲನೆಯದು - ಟಿಪ್ಪುವಿನ ದಾಳಿಗೆ ಹೆದರಿ ಮಲಬಾರ್ ಪ್ರದೇಶದಿಂದ ಓಡಿ ಹೋಗಿದ್ದ ನಾಯರ್ ಮತ್ತು ನಂಬೂದ್ರಿ ಜಮೀನುದಾರರನ್ನು ಟಿಪ್ಪು ಸುಲ್ತಾನನ ಮರಣದ ನಂತರ ಬ್ರಿಟಿಷರು ಮರಳಿ ಮಲಬಾರಿಗೆ ಕರೆತಂದು ಅವರಿಗೆಲ್ಲ ಜಮೀನು ಕೊಟ್ಟು ನೆಲೆಗೊಳಿಸಿದರು. ಈ ಮಲಬಾರ್ ಪ್ರದೇಶದಲ್ಲಿ ಇದಕ್ಕೆ 10-12 ವರ್ಷಗಳ ಹಿಂದೆ ದೊಡ್ಡ ಸಂಖ್ಯೆಯಲ್ಲಿ ಹಿಂದೂಗಳನ್ನು ಟಿಪ್ಪುವಿನ ಸೈನಿಕರು ಬಲಾತ್ಕಾರದಿಂದ ಇಸ್ಲಾಂಗೆ ಮತಾಂತರ ಮಾಡಿದ್ದರು. ಟಿಪ್ಪು ಸತ್ತ ನಂತರ ಈ ಎಲ್ಲಾ ನವ-ಮುಸ್ಲಿಮರು ಮರಳಿ ಮಾತೃಧರ್ಮಕ್ಕೆ ಬರಲು ಹಾತೊರೆಯುತ್ತಿದ್ದರು. ಆದರೆ ಮೇಲ್ಜಾತಿ ನಾಯರ್‌ಗಳು ಮತ್ತು ನಂಬೂದ್ರಿಗಳು ತಾವು ಬ್ರಿಟಿಷರಿಂದ ಪಡೆದ ಜಮೀನಿನಲ್ಲಿ ಮರಳಿ ಹಿಂದೂ ಧರ್ಮಕ್ಕೆ ಬಂದ ಮುಸ್ಲಿಮರಿಗೂ ಪಾಲು ಕೊಡಬೇಕಾಗುತ್ತದೆ ಎಂಬ ಸ್ವಾರ್ಥ ಬುದ್ಧಿಯಿಂದ ಆ ನವ-ಮುಸ್ಲಿಮರೆಲ್ಲ ಮರಳಿ ಹಿಂದೂ ಧರ್ಮಕ್ಕೆ ಬಾರದಂತೆ ವೇದಶಾಸ್ತ್ರ ನೆಪವೊಡ್ಡಿ ತಡೆದರು. ಇಂಟರ್‌ನೆಟ್ಟಿನ ವಿಕಿಪೀಡಿಯಾದಲ್ಲಿ ಈ ವಿವರ ಲಭ್ಯವಿದೆ.

ಇದೇ ರೀತಿ 200 ವರ್ಷಗಳ ಹಿಂದೆ ಜಮ್ಮೂ-ಕಾಶ್ಮೀರದ ಹಿಂದೂ-ಡೋಗ್ರಾ ರಾಜ (ಈಗಿನ ಕರಣ್ ಸಿಂಗರ ಪೂರ್ವಜ) ಕಾಶ್ಮೀರ ಕಣಿವೆಯ ಹೆಚ್ಚಿನ ಮುಸ್ಲಿಮರನ್ನು ಹಿಂದೂ ಧರ್ಮಕ್ಕೆ ಮರಳಿ ಬರುವಂತೆ ಮನವೊಲಿಸಿ ಅವರಿಗೆ ಹಿಂದೂ ಧರ್ಮದ ದೀಕ್ಷೆ ಕೊಡಲು ಕಾಶಿ-ವಾರಣಾಸಿಯ ಪಂಡಿತರನ್ನು ಬರಲು ಹೇಳಿದನು, ಆದರೆ ಈ ಕಾಶಿಯ ಪಂಡಿತರು ಮ್ಲೇಚ್ಛರು ಹಿಂದುಗಳಾಗಲು ಸಾಧ್ಯವೇ ಇಲ್ಲ, ಹಿಂದೂ ಧರ್ಮ ಬಿಟ್ಟು ಹೋದವರು ಮರಳಿ ಹಿಂದೂ ಧರ್ಮಕ್ಕೆ ಬರಲು ವೇದ-ಶಾಸ್ತ್ರಗಳು ಆಸ್ಪದ ಕೊಡುವುದಿಲ್ಲ ಎಂದು ಸಾರಿ ಬಿಟ್ಟರು. ಹಾಗಾಗಿ ಜಮ್ಮುವಿನ ಆ ಡೋಗ್ರಾ ರಾಜ ತಮ್ಮ ಆ ಪ್ರಯತ್ನವನ್ನು ಅಲ್ಲಿಗೇ ಕೈ ಬಿಟ್ಟರು. ಒಂದು ವೇಳೆ ಅಂದು ಕಾಶಿಯ ಸೋ-ಕಾಲ್ಡ್ ಪಂಡಿತರು ಅಡ್ಡಗಾಲು ಹಾಕದೇ ಇದ್ದಿದರೆ ಇಂದು ಭಾರತದ ಮತ್ತು ಕಾಶ್ಮೀರದ ಚರಿತ್ರೆಯೇ ಬದಲಾಗುತ್ತಿರಲಿಲ್ಲವೇ? ಇಷ್ಟೆಲ್ಲ ಆತ್ಮಘಾತುಕ ಕೆಲಸವನ್ನು ನಮ್ಮ ಹಿರಿಯರೇ ಮಾಡಿರುವಾಗ, ಅನ್ಯ ಧರ್ಮದವರನ್ನು ಈಗ ದೂಷಿಸುತ್ತಾ ಕೂಡುವುದರಲ್ಲಿ ಯಾವ ಅರ್ಥವಿದೆ? ಈ ಹಿನ್ನೆಲೆಯಲ್ಲಿ ನೋಡಿದಾಗ ಬೇರೆ ಧರ್ಮಕ್ಕೆ ಮತಾಂತರ ಹೊಂದಿದ ದಲಿತರನ್ನು ಮರಳಿ ಮಾತೃ ಧರ್ಮಕ್ಕೆ ಕರೆ ತರುವ ನಾಟಕವನ್ನು ಕೆಲವು ಹಿಂದೂ ಸಂಘಟನೆಗಳು ಈಗ ಮಾಡುತ್ತಿರುವುದು ಯಾವ ಪುರುಷಾರ್ಥಕ್ಕೆ? ಹಿಂದೂ ಧರ್ಮಕ್ಕೆ ಮರಳಿ ಬಂದ ಮೇಲೆಯೂ ಇವರು ದಲಿತರಾಗಿಯೇ, ಅಸ್ಪೃಶ್ಯರಾಗಿಯೇ ಮುಂದುವರಿಯಬೇಕು ತಾನೇ!? ಇವರು ತಮ್ಮ ಮಾತೃಧರ್ಮಕ್ಕೆ ಮರಳಿ ಬಂದರೆಂದು ಭಯಂಕರ ಅಭಿಮಾನದಿಂದ ಬ್ರಾಹ್ಮಣರು ಇವರನ್ನು ಸವರ್ಣೀಯರೆಂದು ಪರಿಗಣಿಸುವುದಿಲ್ಲವಲ್ಲ?

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು


ಹಿಂದು ಪತ್ರ

# "ಅತ್ಯಾಚಾರಿಗಳಿಗೆ ಪೆಟ್ಟು ಕೊಡಬೇಕು"

ಮುಖ್ಯಮಂತ್ರಿಯಾದ ಉಮೇದಿನಲ್ಲಿದ್ದ ಸಿದ್ದು ...ಮುಂದು ನೋಡದೆ "ಬಡವರಿಗೆಲ್ಲಾ ರೂಪಾಯಿಗೆ ...ಅಕ್ಕಿಯಂತೆ ತಿಂಗಳಿಗೆ ಮುವ್ವತ್ತು ಕೆ.ಜಿ. ಕೊಡುತ್ತೇನೆ" ...ವಾಗ್ದಾನದ ವಿರುದ್ಧ ಹಲವಾರು ಪ್ರತಿಭಟನೆ ದನಿಗಳು ...ಹೊಮ್ಮುತ್ತಿವೆಯಲ್ಲಾ. "ಈ ಸರ್ಕಾರ ಒಂದು ರೂ.ಗೆ. ...ಅಕ್ಕಿ ಕೊಟ್ಟರೆ ಜನ ಸೋಮಾರಿಗಳಾಗಿ ಊರಮುಂದಿನ ...ಟ್ಟಿಲ್ಲಿ ಕುಳಿತು ಹರಟುತ್ತಾರೆ. ಅಗ್ಗದ ಮದ್ಯ ಕೊಟ್ಟರೆ ...ಅಕ್ಕಿಗೆ ಮಾರಿಕೊಳ್ಳುತ್ತಾರೆ. ಹೆಂಡದವರ ಲಾಬಿಗೆ ...ದ ಸರ್ಕಾರ ಮಾತ್ರ ಈ ತರ ಆಲೋಚಿಸಬಲ್ಲದು" ...ಲ್ಲಾ ಗುಡುಗಿದ ರಾಜಕಾರಣಿ ಯಾರು ಹೇಳಬಲ್ಲಿರಾ? ...ರ ರಾಜಕಾರಣಿಯೂ ಇದನ್ನು ಹೇಳಲು ಸಾಧ್ಯವಿಲ್ಲ. ...ದರೆ ಬಡವರ ಅಕ್ಕಿ ವಿಷಯದಲ್ಲಿ ಬಾಯಿಗೆ ಬಂದಂತೆ ...ಡಿದರೆ ಮುಂದೆ ಬರುವ ಓಟೂ ಬರಲಾರವೆಂಬ ...ಳಿಕೆ ಅವರಿಗಿದ್ದೇ ಇದೆ. ಆದರೆ ಸದರಿ ವಿರೋಧಿ ...ಯು ಸಾಣೆಹಳ್ಳಿ ಮಠದ ಗುರುಗಳಿಂದ ...ಗೊಂಡಿವೆಯಂತಲ್ಲಾ. ಸ್ವಾಮಿಗಳ ಕಾರವಾದ ನುಡಿ ...ನ ಅಕ್ಕಿ ಫಲಾನುಭವಿ ಬಡವರು "ಈ ಸ್ವಾಮಿಗಳು ...ದರೂ ಅಕ್ಕಿ ಕೊಂಡಿದ್ದರೆ ಇಂತಹ ಮಾತನಾಡು...ಲ್ಲ. ಸರಿಯಾದ ಸಮಯಕ್ಕೆ ಸರಿಯಾದ ಪ್ರಸಾದ ...ಕೊಳ್ಳುವ ಇವರು ಅದಕ್ಕೆ ದುಡ್ಡನ್ನು ತೆರುವುದಿಲ್ಲ, ... ಇಂತಹ ಮಾತು" ಎಂದು ಆಡಿಕೊಂಡರಂತಲ್ಲಾ. ...ಸಿದ್ದು ಗುಟುಕಾ ನಿಷೇಧಿಸಿದಕ್ಕೆ ಸ್ವಾಮೀಜಿಯವರ ...ಾಲಕರು ಇಷ್ಟು ದಿನಗಳ ನಂತರ ಕಂಡುಹಿಡಿದ ...ವನ್ನು ಆ ಪ್ರಾಂತ್ಯದ ಅಡಿಕೆ ಬೆಳೆಗಾರರು ಇಡಿಯಾಗಿ ...ಸಿ ಕೆಂಡಮಂಡಲವಾಗಿದ್ದಾರಂತಲ್ಲಾ. ಅದೇನೆಂದರೆ ...ಕೆ ತೋಟ ಹೊಂದಿರುವವರಾರೆಂದರೆ ಮಲೆನಾಡ ...ಣರು ಮತ್ತು ಬಯಲುನಾಡಿನ ಒಕ್ಕಲಿಗರು ಹಾಗು ...ಯತರು. ಅದಕ್ಕೆಂದೇ ಗುಟುಕಾ ನಿಷೇಧಿಸಿದ್ದಾನೆ. ...ತ್ ಕುರುಬರು ಅಡಿಕೆ ತೋಟದ ಮಾಲೀಕರಾಗಿದ್ದರೆ ... ಗುಟ್ಕಾ ನಿಷೇಧಿಸುತ್ತಿದ್ದನಾ?" ಎಂಬ ಪ್ರಶ್ನೆಯನ್ನು ... ಲಿಂಗಾಯತರು ಕೇಳುತ್ತಿದ್ದಾರಂತರ್ಲಾ, ಥೂತ್ತೇರಿ!

*****

...ಷಾತ್ತನೆ ಅತ್ಯಾಚಾರಗಳು ಹೆಚ್ಚಾಗಲು ಕಾರಣವೇನು? ...ಾಂಧರ ಮೊಬೈಲ್‌ಗಳಲ್ಲಿ ಹರಿದಾಡುತ್ತಿರುವ ನೀಲಿಚಿತ್ರಗಳೆ ಇರಬಹುದು. ಈ ನೀಲಿಚಿತ್ರದ ಹಾವಳಿ ಎಷ್ಟಾಗಿದೆಯೆಂದರೆ ಬರಗಾಲದ ಚರ್ಚೆಯ ವೇಳೆ ಮಂತ್ರಿಯೊಬ್ಬ ಸದನದಲ್ಲೇ ನೋಡುತ್ತ ಕುಳಿತಿದ್ದ. ಅದನ್ನು ಪೂರ್ತಿ ನೋಡಿದ ಮೇಲೆ ಒಂದು ಕಾರ್ಯಕ್ರಮ ಹಾಕಿಕೊಳ್ಳಲೇಬೇಕು. ಅವನೇನೊ ಮಂತ್ರಿ ಆದರೆ ಪುಂಡ ಜನರಿಗೆ ಅಮಾಯಕರೇ ಬಲಿಯಾಗಬೇಕಲ್ಲವೆ. ಅಂತಹ ಕಾಮಾಂಧರಿಗೆ ಬಲಿಯಾದ ವೈದ್ಯ ವಿದ್ಯಾರ್ಥಿನಿಯ ಪ್ರಕರಣ ಕೇಳಿದ ಪೇಜಾವರರಂತಹ ಪೇಜಾವರ ಸ್ವಾಮಿಗಳೇ ಸಿಟ್ಟಿನಿಂದ



ಕುದ್ದು ಹೋಗಿದ್ದಾರಂತಲ್ಲಾ. ಈ ಬಗ್ಗೆ ಮಾತನಾಡಿಸಲು ಫೋನ್ ಮಾಡಿದರೆ ಫೋನ್ ರಿಂಗಾಯ್ತು.

ರಿಂಗ್ ಟೋನ್: ಪಿಳ್ಳಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರೀ... ಪಿಳ್ಳಂ...."

"ಹಲೋ ಯಾರು?"

"ನಮಸ್ತೆ ಸ್ವಾಮೀಜಿ, ನಾನು ಯಾಹು ಅಂತ ಪತ್ರಕರ್ತ."

"ಹೇಳಿ."

"ನಾನು ನಮಸ್ತೆ ಅಂದೆ. ಅದಕ್ಕೆ ಪ್ರತಿಯಾಗಿ ಹೇಳಿ ಅಂತಿರಲ್ಲಾ?"

"ಸ್ವಾಮಿಯಾದವರು ನಮಸ್ಕಾರ ಸ್ವೀಕರಿಸುತ್ತಾರೆ, ಪ್ರತಿಯಾಗಿ ನಮಸ್ಕಾರ ಮಾಡುವುದಿಲ್ಲ."

"ಮಾಡಿದರೇನಾಯ್ತದೆ?"

"ಮಾಡುವ ಹಾಗಿಲ್ಲ."

"ಏನೇ ಆಗ್ಲಿ ಬ್ರಿಟಿಷರು ಜೆಂಟ್ಲು ಮ್ಯಾನ್‌ಗಳು ಸ್ವಾಮೀಜಿ."

"ಯಾಕೆ?"

"ಅವ್ರುರು ಬರೋವರಿಗೂ ನಮ್ಮ ದೇಶದಲ್ಲಿ ನಾವು ದೂರದಿಂದ್ಲೆ ನಮಸ್ಕಾರ ಮಾಡಿದ್ರೆ ನೀವು ಅಷ್ಟೇ ದೂರದಿಂದ ಕೈ ಎತ್ತಿ ಆಶೀರ್ವಾದ ಮಾಡತಿದ್ರಿ. ಅವರು ಬಂದ ಮೇಲೆ ಥ್ಯಾಂಕ್ಯೂ ಅಂತ ಕೈ ಕುಲುಕಿದ್ರು. ಮನುಷ್ಯ ಮನುಷ್ಯನ್ನು ಮುಟ್ಟಬವುದು ಅಂತ ತೋರಿಸಿಕೊಟ್ರು. ತಾವಂತೂ ಇನ್ನು ಮುಟ್ಟುಚಿಟ್ಟಲ್ಲೇ ಇದ್ದೀರಿ."

"ಫೋನು ಮಾಡಿದ್ದು ಯಂತಕ್ಕೆ ಹೇಳಿ."

## ಥೂತ್ತೇರಿ

► ಯಾಹೂ

"ಏನಿಲ್ಲ ನಿಮ್ಮ ಪವಿತ್ರ ಭೂಮಿಲಿ ಒಂದು ಅಮಾನುಷ ಅತ್ಯಾಚಾರ ನಡೆದಿದೆ. ಅಂತ ಅಪರಾಧಿಗಳ ತಡೆಗೆ ಏನು ಮಾಡಬೇಕು ಹೇಳಿ ಸ್ವಾಮಿ?"

"ಅಪರಾಧಿಗಳಿಗೆ ಅಪಮಾನವಾಗುವಂತಹ ಶಿಕ್ಷೆ ವಿಧಿಸಬೇಕು."

"ಅಪರಾಧ ಮಾಡುವಾಗಲೇ ಆತ ಅಪಮಾನಕ್ಕೆ ಅಂಜದವನಾಗಿರ್ತನೆ ಅಲ್ಲವ?"

"ಹೌದೌದು, ಆದರೆ ನೋವಾಗುವಂತಹ ಶಿಕ್ಷೆ ವಿಧಿಸಬೇಕು.".

"ನೋವಾಗೊ ಶಿಕ್ಷೆ ಅಂದ್ರೆ?"

"ಮರಕ್ಕೆ ಕಟ್ಟಿ ಪೆಟ್ಟು ಕೊಡಬೇಕು."

"ಹೊಡಿಸಿಗೊಳ್ತರೆ."

"ಅವರು ಹೊಡೆಸಿಕೊಳ್ಳುವುದನ್ನು ಸಾರ್ವಜನಿಕರು ನೋಡುವಂತಾಗಬೇಕು. ಆಗ ಮುಂದೆ ಅತ್ಯಾಚಾರ ಮಾಡುವವ ಹೆದರುವುದುಂಟು."

"ಅಯ್ಯೋ ಸ್ವಾಮಿ, ಈಗ ಸಮಾಜ ವಿಕೃತವಾಗಿದೆ. ಸಾರ್ವಜನಿಕವಾಗಿ ಗೂಸಾ ತಿಂದೋನ್ನ ಜನ ಹೀರೋ ತರ ನೋಡ್ತರೆ. ನರ್ಸ್‌ಗೆ ಕಿಸ್ ಕೊಟ್ಟು ಡ್ಯಾನ್ಸ್ ಮಾಡಿದೋನ್ನ ರಸಿಕ ಮಂತ್ರಿ ಅಂದ್ರು. ರೇಪ್ ಮಾಡಿ ಜೈಲಿಗೆ ಹೋಗಿ ಬಂದ ಮಂತ್ರಿಗಳನ್ನು ಹಾರ ಹಾಕಿ ಪಟಾಕಿ ಸಿಡಿಸಿ ಬರಮಾಡಿಕೊಂಡ್ರು. ಆದ್ರಿಂದ ಕೆಟ್ಟ ಜನಗಳಿಗೆ ಶಿಕ್ಷೆನೆ ಪ್ರಶಸ್ತಿ ತರ ಆಗ್ತಾಯಿದೆ. ಆದ್ರಿಂದ ನನ್ನತ್ರ ಒಂದು ಶಿಕ್ಷೆ ಇದೆ. ಅದನ್ನ ನೀವು ಹೇಳಿ ಜಾರಿಗೆ ತರಬೇಕು, ಹೇಳ್ತಿರಾ?"

"ಯಂತ ಹೇಳಿ?"


"ಅತ್ಯಾಚಾರಿಗಳ ವೃಷಣ ತಗದ್ರೆ ಸುಮ್ಮನೆ ಇರತರೆ."

"ಥೂತ್ತೇರಿ!!!"

●

# ...ನ್ನ ನೆಚ್ಚಿನ ಗೂಡು

...ವರ್ಷಗಳು ಕಳೆದಂತೆ ಹಳೆಯ ಗೆಳೆಯರು, ...ಯರು, ಪುಸ್ತಕಗಳು, ಹಾಡುಗಳು, ದೃಶ್ಯಗಳು, ...ಗಳು, ಹೋಟೆಲುಗಳು ನಮಗೆ ಹಿತವೆನ್ನಿಸುತ್ತದೆ. ...ಸಹೊಸ ದೇಶಗಳು, ಅರಿಯದ ವ್ಯಕ್ತಿಗಳು, ವಿಚಿತ್ರ ...ದಾಯಗಳು ನಾವು ಹತ್ತಲಾರದ ಹಿಮಾಲಯಗಳಂತೆ ...ತೊಡಗುತ್ತವೆ. ಆದ್ದರಿಂದ ನನಗೆ ಈ ನನ್ನ ಪುಟ್ಟ ...ಟೆಲ್ 'ಕುಡಿಮಲ್ಲಿಗೆ' ಇಷ್ಟ. ಈ ಹೆಸರು ಬಳ್ಳಾರಿ ...ಯುದು; ಆದರೆ 'ಕುಡಿಮಲ್ಲಿಗೆ'ಯ ಮಾಲೀಕ ...ಶಗಿನವನು. ಇವನು ಹೋಟೆಲ್ ರೂಪಿಸಲು ...ರುವ ಡಿಸೈನ್‌ಗಳು ಐರಿಶ್. ಹೆಂಡತಿ ಕಾಮಾಕ್ಷಿ ...ಷ್ ಶಿಕ್ಷಣ ಪಡೆದು ಭಾರತದ ಪರಂಪರೆಯನ್ನು ...ಧಿಸುವವಳು. ನಾನು ಈ ಕುಡಿಮಲ್ಲಿಗೆಯ ಚಿಣ್ಣಪ್ಪ ...ತ್ತಿ ಕಾಮಾಕ್ಷಿಗೆ ಕುತೂಹಲದ ವ್ಯಕ್ತಿ. ನಾನು ...ಯುತ್ತೇನೆನ್ನುವುದೇ ಅವರಿಗೆ ಸೋಜಿಗ. 'ಏನು ...ಶೀರಿ'? ಎಂದು ಮೊದಮೊದಲು ಕೇಳುತ್ತಿದ್ದರು. ...ಮ ಕೇಳಿದ ರೀತಿಯಿಂದ ನನಗೆ ಬರೆಯುವುದೊಂದು ...ರೆ ಕೆಲಸ ಅನ್ನಿಸುತ್ತಿತ್ತು; ಗುಮಾಸ್ತ ಶಾನುಭೋಗ,





...ಮಾಸ್ತರು ಬರೆಯುತ್ತಾರೆ. ಅವರು ಆ ಪುಸ್ತಕ ಕೇಳಿದಾಗಲೆಲ್ಲ ನಾನು ...ಸಿರುತ್ತಿದ್ದೆ, ನನ್ನ ಮೌನ ಅವರನ್ನು ಮೂರ್ಖರನ್ನಾಗಿ ಮಾಡಿದಂತಿತ್ತು, ...ಲೀ 'ಓದಿ' ಎಂದು ಕನ್ನಡದ [illegible] ಬೇರೆ ಪುಸ್ತಕ ಕೊಡುತ್ತಿದ್ದೆ, ... ಕಥೆಯ ಘಟನೆಗಳನ್ನು ನಡೆದ ಘಟನೆಗಳು ಎನ್ನುವಂತೆ ಮಾತಾಡುತ್ತಿದ್ದರು.

ಆದರೆ ಬರಬರುತ್ತ ಚಿಣ್ಣಪ್ಪ ಮತ್ತು ಕಾಮಾಕ್ಷಿ ನನ್ನ ಆತ್ಮೀಯರಾದರು.

'ಕುಡಿಮಲ್ಲಿಗೆ' ನನ್ನ ಪ್ರೀತಿಯ ಮನೆ, ಕ್ಲಬ್, ಹೋಟೆಲ್ ಮತ್ತು ಆಸ್ಪತ್ರೆ. ನನ್ನ ಗೆಳೆಯರೊಂದಿಗೆ ನಾನು ಅಸಾಧ್ಯ ವಸ್ತುಗಳನ್ನು ಚರ್ಚಿಸುವ ಜಾಗ; ಅರೆಸತ್ಯಗಳನ್ನು ಸತ್ಯ ಎಂದು ವಾದಿಸಿ ತಿಂದು, ಕುಡಿದು, ಹಾಡು ಕೇಳಿ ನಲಿಯುವ ಸ್ಥಳ.

ನಾನೆಂದೂ ಚಿಣ್ಣಪ್ಪನ ಬಿಲ್ ಕಣ್ಣೆತ್ತಿ ನೋಡಿಲ್ಲ. ಬಂದ ಸಂಬಳವನ್ನು ಅವನೆದುರು ಇಟ್ಟುಬಿಡುತ್ತೇನೆ. ಅದರಲ್ಲಿ ಆತ ಹೊಸ ನೋಟುಗಳನ್ನು ಆರಿಸಿಕೊಂಡು ಮಿಕ್ಕದ್ದು ಹಿಂದಿರುಗಿಸುತ್ತಾನೆ. ಕಾಮಾಕ್ಷಿ ಅವನಿಗಿಂತ ವಿಚಿತ್ರ ವ್ಯಕ್ತಿ; 'ಒಂದು ಪುಟ್ಟ ಕತೆ ಬರೆದು ಕೊಡಿ- ನೀವು ಇನ್ನೆರಡು ತಿಂಗಳು ಬಿಲ್ ಪಾವತಿ ಮಾಡುವುದು ಬೇಡ' ಎಂದು ಕಾಗದ, ಪೆನ್ನು ಇಡುತ್ತಾಳೆ. ಒಮ್ಮೆ ಬರೆದೆ: 'ಒಂದು ಊರಿನಲ್ಲಿ ಕಾಮಾಕ್ಷಿ, ಚಿನ್ನಪ್ಪ ಅಂತ ಇದ್ದರು, ಆದರ್ಶ ದಂಪತಿಗಳು, ಎಲ್ಲರೆದುರು ನಗುವ, ಪರಸ್ಪರ ಅಪ್ಪಿಕೊಳ್ಳುವ ಮುತ್ತಿಡುವ ಪ್ರೇಮಿಗಳು. ಆದರೆ ಒಬ್ಬರನ್ನೊಬ್ಬರು ಬಿಟ್ಟು ಒಂದು ವಾರ ಬೇರೆ ವ್ಯಕ್ತಿಗಳೊಂದಿಗೆ ದೇಶಾಂತರ ಹೊರಟುಹೋಗದಿದ್ದರೆ ಅವರಿಗೆ ಆಗುತ್ತಿರಲಿಲ್ಲ.'

'ಸುಳ್ಳು! ನಾವೆಂದೂ ಹಾಗೆ ಮಾಡಿಲ್ಲ' ಅಂದ ಚಿಣ್ಣಪ್ಪ.

'ಮಾಡದಿರುವುದು ತಪ್ಪು' ಅಂದೆ.

ಒಬ್ಬರನ್ನೊಬ್ಬರು ನೋಡಿ ಮುಗುಳ್ನಕ್ಕರು.

ಬೇಸಿಗೆಯ ತಂಗಾಳಿಯಲ್ಲಿ ಬರುವ ಸುಗಂಧ. ಕೆಲವೊಮ್ಮೆ ಗಾಳಿ ಇತ್ತ ಬೀಸುತ್ತಿದ್ದಾಗ ಸಂಪಿಗೆಯ ಪರಿಮಳ. 'ಕೇದಿಗೆಯ ವಾಸನೆ ಹೊಡೀತಿದೆ' ಅನ್ನುವೆ.

ಕಾಮಿ ತನ್ನ ತುರುಬಿನ ಕೇದಿಗೆಯ ಗರಿ ತೋರುವಳು.

"ಎಲ್ಲ ಗಂಧಕ್ಕಿಂತ ಕಾಮಾಕ್ಷಿಯ ಗಂಧ ಸ್ವರ್ಗೀಯ" ಅನ್ನುವೆ.

ಇಬ್ಬರೂ ನಗುವರು. ನನ್ನ ಪದ್ಯಕ್ಕಾಗಿ ಕಾಯುವರು, ಮುಗಿದಮೇಲೆ ನನ್ನನ್ನಪ್ಪಿ ಕೇಕೆ ಹಾಕುವರು.

ಕೇಕೆಗೆ ಎಚ್ಚರವಾಗುವೆ. ನಿದ್ರೆ ಹರಿಯುವುದು.

ಕನಸಿನ ಜಾಗ ಇಲ್ಲವಾಗುವುದು.

ಸುಮ್ಮನೇ ಚಿಂತಿಸುತ್ತ ಕೂರುವೆ.

# ಬೆಳೆಯುವ ಚಿತ್ರ

ಒಂದು ಸಾಹಿತ್ಯದ ಅಥವಾ ಕಲೆಯ ಕೃತಿ ನೋಡಲು ತಣ್ಣಗಿರುತ್ತದೆ; ಜೀವವೇ ಇಲ್ಲದ ಧಮ್ಮಿನಂತೆ ಕಾಣುತ್ತದೆ. ಆದರೆ ನಾವು ಅದಕ್ಕೆ ಸ್ಪಂದಿಸಿದಾಗ ಮಾತ್ರ ಅದರ ಜೀವಂತಿಕೆ ಅಥವಾ ನಿರ್ಜೀವಸ್ಥಿತಿ ತಿಳಿಯುತ್ತದೆ. ಮನುಷ್ಯ ನೂರಾರು ಕತೆ, ಲೇಖನ, ಕವನಗಳ ಮೂಲಕ ಸಮಕಾಲೀನರಿಗೆ ತಲುಪಲು ಯತ್ನಿಸುತ್ತಾನೆ. ಆತನ ಎಲ್ಲ ಬರವಣಿಗೆಗಳೂ ಕಾಲನ ತೆಕ್ಕೆಗೆ ಈಡಾಗಿರಬಹುದು. ಎಲ್ಲೋ ಕೆಲವು ಅಲ್ಲಲ್ಲಿ ಜೀವಂತವಾಗಿರಬಹುದು.

ಆದರೆ ನಾನಿಲ್ಲಿ ಹೇಳಬೇಕೆಂದಿರುವುದು, 'ಡಾ. ಜಿವಾಗೋ' ಎಂಬ ಸಿನಿಮಾ ಕುರಿತು. ಸಿನಿಮಾ ದಾಖಲೆಯ ಮಾಧ್ಯಮ; 'ಲೆನ್ಸ್' ಕಂಡದ್ದನ್ನು, ರಿಕಾರ್ಡಿಂಗ್ ಯಂತ್ರ ಗ್ರಹಿಸಿದ್ದನ್ನು ಅದು ದಾಖಲೆಗೊಳಿಸುತ್ತದೆ. ಸಂಭಾಷಣೆ ಸಿನಿಮಾದ ಸಣ್ಣ ಅಂಶ; ಮನುಷ್ಯನ ಮಾತು, ಹಾಡುಗಳನ್ನೊಳಗೊಂಡು ಪ್ರಪಂಚದ ಅನೇಕ ಸದ್ದುಗಳನ್ನು ರಿಕಾರ್ಡರ್ ಹಿಡಿದಿಡುತ್ತದೆ. ಇದು ದಾಖಲೆಯ ಮಾಧ್ಯಮವಾದ್ದರಿಂದಲೇ ಸುಮಾರು ಐವತ್ತು ವರ್ಷದ ಹಿಂದಿನ ಪ್ರೇಮದ ಘಟನೆಗಳು, ಸಾಹಸದ ವೃತ್ತಾಂತಗಳು ವಿಚಿತ್ರ ರೀತಿಯಲ್ಲಿ ಕೃತಕವಾಗಿ ಕಾಣುತ್ತವೆ. ಆದರೆ ಎಲ್ಲೋ ಕೆಲವು ಚಲನಚಿತ್ರಗಳು ಬದುಕಿ ಉಳಿದಿರುತ್ತವೆ. 'ಸಿಟಿಜನ್ ಕೇನ್' ಅವುಗಳಲ್ಲಿ ಒಂದು; 'ಡಾ. ಜಿವಾಗೋ' ಇನ್ನೊಂದು. 'ಡಾ. ಜಿವಾಗೋ' ಚಿತ್ರ ಮೂವತ್ತೆರಡು ವರ್ಷದ ಹಿಂದೆ ಚಿತ್ರಮಂದಿರಗಳಿಗೆ ಬಿಡುಗಡೆಗೊಂಡಾಗ ಅದೊಂದು ಸರ್ವೇಸಾಮಾನ್ಯ ಕಮ್ಯುನಿಸ್ಟ್ ವಿರೋಧಿ ಪ್ರೇಮಕತೆಯಂತೆ ಕಾಣುತ್ತಿತ್ತು, ಕ್ರಾಂತಿಗಾಗಿ ಸಾವಿರಾರು ಜನ ಪ್ರಾಣತ್ಯಾಗ ಮಾಡಿದ ಚಿತ್ರದಂತೆ ಕಾಣುತ್ತಿತ್ತು, ಸಿದ್ಧಾಂತ ಅಪಾಯಕಾರಿಯಾಗಿ ಕಾಣತೊಡಗಿತು. ಆದರೆ ಮನುಷ್ಯನ ಮುಗ್ಧತೆ, ಕ್ರಿಯಾಶೀಲತೆ ಕೊನೆಗೂ ಗೆದ್ದಿತು. 'ಡಾ. ಜಿವಾಗೋ' ಪ್ರತಿನಿಧಿಸಿದ ಕಾವ್ಯ, ಪ್ರೇಮ, ದುರಂತ ಎಲ್ಲ ಚಿತ್ರವಾಗಿ ಬೆಳೆಯುತ್ತಾ ಹೋದವು.



ಡೇವಿಡ್ ಲೀನ್ ತನ್ನ ಅದ್ಭುತ ದೃಶ್ಯಗಳು ಮತ್ತು ಕುಟಿಲ ಅರ್ಥಗಳ ಮೂಲಕ ರೂಪಿಸಿದ ಈ ಚಿತ್ರ ಕೇಳದನಿಯಲ್ಲಿ ಹಕ್ಕಿಯ ಮೃದು ಮಾತುಗಳಲ್ಲಿ ಮನುಕುಲದ ತಾಕಲಾಟಗಳನ್ನು ಬಗ್ಗೆಸುತ್ತದೆ. ಚಿತ್ರವಾಗಿ ಮೂರು ದಶಕಗಳ ಹಿಂದೆ ಯಶಸ್ವಿಯಾದ 'ಜಿವಾಗೋ' ಶಬ್ದ, ಸದ್ದು, ಅರ್ಥ ಎಲ್ಲವನ್ನೂ ಒಂದುಗೂಡಿಸಿ ಮಾಡಿದ ಕಲಾಕೃತಿ ಅನ್ನಿಸುತ್ತದೆ.

● ಜನವರಿ 13, 1999



# ಕುಣಿಗಲ್ ನಾಗಭೂಷಣ್

# ಯುಗ ಅಂತ್ಯ

ಕನ್ನಡ ಚಿತ್ರರಂಗ ಕಂಡ ಅಪರೂಪದ ಸಂಭಾಷಣಾಕಾರ ಕುಣಿಗಲ್ ನಾಗಭೂಷಣ್ ಇನ್ನು ನಮ್ಮೊಂದಿಗಿಲ್ಲ ಅನ್ನುವ ವಿಷಾದದ ನಡುವೆಯೇ ಈ ಮೇರುಪ್ರತಿಭೆಯ ಬಗ್ಗೆ ಒಂದಿಷ್ಟು ತಿಳಿದುಕೊಳ್ಳೋಣ ಬನ್ನಿ. 1942ರ ಡಿಸೆಂಬರ್ 6ರಂದು ಕುಣಿಗಲ್ಲಿನ ಶ್ರೀಕಂಠಯ್ಯ ಹಾಗೂ ಪುಟ್ಟಮ್ಮ ದಂಪತಿಗಳ ಮಗನಾಗಿ ಹುಟ್ಟಿದ ಇವರಿಗೆ ಬಾಲ್ಯದಿಂದಲೂ ಭಾವಗೀತೆ, ಜನಪದ ಗೀತೆ, ಸಿನಿಮಾ ಗೀತೆಗಳನ್ನು ಹಾಡುವ ಖಯಾಲಿ ಇತ್ತು. ರಾಮಮಂದಿರದಲ್ಲಿ ದೇವರನಾಮ ಹಾಡುವುದೆಂದರೆ ಇವರಿಗಿಷ್ಟ. ಇವರ ಹಾಡುಗಳನ್ನು ಕೇಳುವ ಮಿತ್ರ ಬಳಗವೂ ಇತ್ತು. ಅದಕ್ಕಾಗಿಯೇ ಕುಣಿಗಲ್ಲಿನ ಗೋವಿಂದ ಶೆಟ್ಟರು ಅನ್ನುವ ವ್ಯಕ್ತಿ ಇವರಿಗೆ ಹಣ ಕೊಟ್ಟು ಹೊಸಹೊಸದಾಗಿ ಬಿಡುಗಡೆಯಾದ ಕನ್ನಡ ಸಿನಿಮಾಗಳನ್ನು ನೋಡಿಕೊಂಡು ಬರುವಂತೆಯೂ, ಆ ಸಿನೆಮಾಗಳ ಹಾಡುಗಳನ್ನು ತಮ್ಮ ಮುಂದೆ ಹಾಡುವಂತೆಯೂ ಪ್ರೇರೇಪಿಸುತ್ತಿದ್ದರಂತೆ.

ಹೀಗೆ ಶುರುವಾದ ಇವರ ಸಿನಿಮಾ ಹುಚ್ಚಿಗೆ ಬೇರೆ ತೆರನಾದ ದಿಕ್ಕು ಒದಗಿಬಂದದ್ದು 'ವಿಜಯನಗರದ ವೀರಪುತ್ರ' ಚಿತ್ರ ಬಿಡುಗಡೆಯಾದ ಸಂದರ್ಭದಲ್ಲಿ. ಆ ಚಿತ್ರ ಕುಣಿಗಲ್ಲಿನ ಚಿತ್ರಮಂದಿರವೊಂದರಲ್ಲಿ ಬಿಡುಗಡೆಯಾದಾಗ ಮೊದಲ ದಿನದ ಮೊದಲ ಪ್ರದರ್ಶನದ ಮೊದಲ ಟಿಕೆಟು ಕೊಂಡುಕೊಂಡದ್ದು ನಾಗಭೂಷಣ್ ಅವರೇ. ಅದನ್ನು ಗಮನಿಸಿದ ಆರ್.ನಾಗೇಂದ್ರರಾಯರು 'ಮೊದಲ ಟಿಕೆಟು ನೀನೆ ತಗೊಂಡಿದೀಯ, ನೋಡೋಣ ಸಿನಿಮಾ ಏನಾಗುತ್ತೋ!' ಅಂತ ಗಾಬರಿಪಡಿಸಿದಾಗ ತಕ್ಷಣ ಟಿಕೇಟಿನ ಹಿಂದೆ ಅವರ ಆಟೋಗ್ರಾಫ್ ಹಾಕಿಸಿಕೊಂಡರಂತೆ. ಮುಂದೆ ಆ ಸಿನಿಮಾ ಭರ್ಜರಿ ನೂರು ದಿನದ ಪ್ರದರ್ಶನ ಕಂಡಾಗ ಅದೇ ನಾಗೇಂದ್ರರಾಯರನ್ನು ಭೇಟಿ ಮಾಡಿ ಜೋಪಾನವಾಗಿಟ್ಟುಕೊಂಡಿದ್ದ ಟಿಕೆಟನ್ನೂ, ಅದರ ಹಿಂದೆ ಇದ್ದ ಆಟೋಗ್ರಾಫನ್ನೂ ತೋರಿಸಿದರಂತೆ. ಅಲ್ಲಿಂದ ಶುರುವಾದ ಅವರ ಒಡನಾಟ ಚಿತ್ರರಂಗ ಸೇರಬೇಕೆಂಬ ಕನಸಿಗೆ ಗರಿ ಮೂಡಿಸಿತು.

ಮುಂದೆ ಬೆಂಗಳೂರಿನ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಸಿನಿಮಾಟೋಗ್ರಫಿ ಡಿಪ್ಲೊಮಾ ಕೋರ್ಸಿಗೆ ಸೇರಿಕೊಂಡಾಗ ಸಿನಿಮಾ ವಾತಾವರಣಕ್ಕೆ ಸಮೀಪವಾದರು. ನಟ ಶ್ರೀನಾಥ್, ಬೆಂಗಳೂರು ನಾಗೇಶ್, ಗೋವಿಂದ ನಿಹಲಾನಿಯರು ಇವರ ಕ್ಲಾಸ್‌ಮೇಟುಗಳಾಗಿದ್ದರು. ಅಲ್ಲಿಯೂ ಹಾಡಿ, ಸಂಸ್ಥೆಯಿಂದ ಸ್ಕಾಲರ್‌ಶಿಪ್ ಪಡೆದು ಫೀಸು ಕಟ್ಟುತ್ತಿದ್ದದ್ದು ಇವರಿಗಿದ್ದ ಹಾಡುಗಾರಿಕೆಗೆ ಸಂದ ಗೌರವ.

ಕೋರ್ಸು ಮುಗಿಯಿತು. ಮುಂದೇನು ಮಾಡಬೇಕೆಂದು ತೋಚದಿದ್ದಾಗ ಮದ್ರಾಸಿನಿಂದ ಗೆಳೆಯ ಬೆಂಗಳೂರು ನಾಗೇಶ್ ಬರೆದ ಕಾಗದ ಬಂತು. ಛಾಯಾಗ್ರಾಹಕನಾಗುವ ಅವಕಾಶವಿರುವುದಾಗಿಯೂ, ಐದು ಸಾವಿರ ಸಂಭಾವನೆ ಸಿಕ್ಕುವುದಾಗಿಯೂ, ತಕ್ಷಣ ಮದ್ರಾಸಿಗೆ ಬರಬೇಕಾಗಿಯೂ ಅದರಲ್ಲಿ ಬರೆದಿತ್ತು. ಪರಿಣಾಮವಾಗಿ 1961ರ ಮೇ 21ರ ಬೆಳಗ್ಗೆ ನಾಗಭೂಷಣ್ ಮದ್ರಾಸು ತಲುಪಿದರು. ಅಲ್ಲಿ ಯಾವ ಅವಕಾಶವಾಗಲೀ, ಐದು ಸಾವಿರ ಸಂಭಾವನೆಯಾಗಲೀ ಇರಲಿಲ್ಲ. ಬದಲಿಗೆ ನಾಗಭೂಷಣ್‌ರನ್ನು ಮದ್ರಾಸಿಗೆ ಕಳಿಸಿಕೊಡಲು ಶ್ರೀಕಂಠಯ್ಯನವರು ನಿರಾಕರಿಸದಿರಲಿ ಅಂತ ಬೆಂಗಳೂರು ನಾಗೇಶ್ ಹೂಡಿದ ತಂತ್ರವಷ್ಟೇ ಆಗಿತ್ತದು.

ಬಂದದ್ದಾಯಿತು. ಹೊಟ್ಟೆಪಾಡಿಗೆ ಏನಾದರೂ ಮಾಡಲೇಬೇಕಾದ ಪ್ರಸಂಗ ಎದುರಾಗಿ ತಮ್ಮ ಹಳೆಯ ಅಸ್ತ್ರವಾದ ಹಾಡುಗಾರಿಕೆಗೆ ಜೀವ ಬರಬಹುದೆಂಬ ಆಶೆ ಹೊತ್ತು ಅನೇಕ ಸಂಗೀತ ನಿರ್ದೇಶಕರ ಮನೆಗಳಿಗೆ ಹೋಗಿ ಹಾಡಲು ಅವಕಾಶ ಕೇಳಲಾರಂಭಿಸಿದರು. ಜಿ.ಕೆ.ವೆಂಕಟೇಶ್, ವಿಜಯ್ ಭಾಸ್ಕರ್ ಮುಂತಾದ ಸಂಗೀತ ನಿರ್ದೇಶಕರಡಿ ಟ್ರ್ಯಾಕ್ ಸಿಂಗರ್ ಆಗಿ ಕೆಲಸ ಮಾಡುವ ಸುಯೋಗ ಒದಗಿಬಂತು. ಅದೇ ಸಂದರ್ಭದಲ್ಲಿ ರಾಜಾಶಂಕರ್ ಅನ್ನುವ ನಟ ಪರಿಚಯವಾಗಿ ವಾದಿರಾಜರ ಬಳಿ ಕರೆದುಕೊಂಡು ಹೋದರು. ಆ ಮೂಲಕ 'ನಾಂದಿ' ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗುವ ಅವಕಾಶ ಸಿಕ್ಕಿ ಆಯ ತಪ್ಪಿದ ಬದುಕಿಗೊಂದು ದಿಕ್ಕು ದೊರಕಿದಂತಾಯಿತು. ಮುಖ್ಯವಾಗಿ ಡಾ.ರಾಜಕುಮಾರ್ ಅವರ ಸಖ್ಯ ಲಭಿಸಿದ್ದು ಕುಣಿಗಲ್ ನಾಗಭೂಷಣ್ ಅನ್ನುವ ಹೆಸರು ಕನ್ನಡ ಚಿತ್ರರಂಗದಲ್ಲಿ ಮುಂದೊಂದು ದಿನ ಅನರ್ಘ್ಯರತ್ನದಂತೆ ಹೊಳೆಯಲು ನಾಂದಿಯಾಯಿತೆಂದರೆ ತಪ್ಪಾಗಲಾರದೇನೋ. ಮುಂದೆ ಅಣ್ಣಾವ್ರು ನಟಿಸಿದ 'ಸಿಪಾಯಿ ರಾಮು', 'ಬಾಳಬಂಧನ', 'ಚಕ್ರತೀರ್ಥ', 'ಕುಲಗೌರವ', 'ಮೂರೂವರೆ ವಜ್ರ', 'ನಂದಗೋಕುಲ', 'ಸ್ವಯಂವರ', 'ಶ್ರೀನಿವಾಸ ಕಲ್ಯಾಣ', 'ದಾರಿ ತಪ್ಪಿದ ಮಗ' ಸೇರಿದಂತೆ ಸುಮಾರು ನಲವತ್ತೈದು ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತು.

ಹೀಗೆ ಪಳಗಿದ ನಾಗಭೂಷಣ್ ಅವರೊಳಗೆ ಸ್ವತಂತ್ರ ನಿರ್ದೇಶಕನಾಗುವ ಕನಸು ಚಿಗಿತದ್ದರಲ್ಲಿ ಅಚ್ಚರಿ ಪಡಬೇಕಿಲ್ಲ. ಆ ದೆಸೆಯಲ್ಲಿ ಉದಯ್ ಕುಮಾರ್, ರಾಜೇಶ್ ಪ್ರಮುಖ ತಾರಾಗಣದಲ್ಲಿದ್ದ 'ಆಶೀರ್ವಾದ' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದರು. ಚಿತ್ರ ಬಾಕ್ಸಾಫೀಸಿನಲ್ಲಿ ಸೋತಿತು. ಆದರೂ ಛಲಬಿಡದೆ ಎರಡನೇ ಚಿತ್ರಕ್ಕೆ ಕೈ ಹಾಕಿ 'ಬಾಳು ಜೇನು' ಅಂತ ಹೆಸರಿಟ್ಟರು. ಈ ಚಿತ್ರದ ವಿಶೇಷವೆಂದರೆ ಸೂಪರ್ ಸ್ಟಾರ್ ರಜನಿಕಾಂತ್ ಮೊಟ್ಟಮೊದಲಬಾರಿಗೆ ಬಣ್ಣ ಹಚ್ಚಿ 1116 ರೂಪಾಯಿಗಳ ಸಂಭಾವನೆ ಪಡೆದದ್ದು. ರಜನಿ ಮಾಡಿದ್ದ ಪಾತ್ರವನ್ನು ಅಂಬರೀಶ್ ಮಾಡಬೇಕಾದ ಸ್ಥಿತಿ ಇತ್ತಾದರೂ ರಜನಿಯವರ ಸ್ಟೈಲ್‌ಗೆ ಮಾರುಹೋಗಿದ್ದ ನಾಗಭೂಷಣ್ ಆ ಚಿತ್ರದ ನಿರ್ಮಾಪಕ ಬಾಲನ್ ಮುಂದೆ ರಜನಿಯವರನ್ನು ನಿಲ್ಲಿಸಿ ಒಂದು ಡೈಲಾಗ್ ಕೊಟ್ಟು ಸ್ಟೈಲಿಶ್ ಆಗಿ ಅಭಿನಯಿಸುವ ಹುರಿದುಂಬಿಸಿ ಪಾತ್ರ ಕೊಡಿಸಿದ್ದು ಈಗ ಇತಿಹಾಸ. ಆದರೆ ಈ ಚಿತ್ರವೂ ಗೆಲ್ಲಲಿಲ್ಲ.

ನಿರ್ದೇಶಕರಾಗಿ ಅಷ್ಟೇನೂ ಫಲ ಸಿಕ್ಕದೆ ಕಂಗಾಲಾಗಿದ್ದ ಕುಣಿಗಲ್ ನಾಗಭೂಷಣ್‌ರಿಗೆ ಮರುಜೀವ ಕೊಟ್ಟದ್ದು ಸಂಭಾಷಣಾಕಾರನಾಗುವ ಯೋಗ. ವೈ.ಆರ್.ಸ್ವಾಮಿ ನಿರ್ದೇಶನದ 'ಮಮತೆ' ಸಂಭಾಷಣಾಕಾರನಾಗಿ ಪ್ರಥಮ ಚಿತ್ರ. ಚಿತ್ರ ನೂರು ದಿನ ಓಡಿತಾದರೂ ನಾಗಭೂಷಣ್ ಸತತ ಐದು ವರ್ಷಗಳ ಕಾಲ ಕೆಲಸವಿಲ್ಲದೇ ಮನೆಯಲ್ಲಿ ಕೂರಬೇಕಾಗಿ ಬಂದದ್ದು ವಿಪರ್ಯಾಸ. ಆರ್ಥಿಕ ಮುಗ್ಗಟ್ಟಿನಿಂದಾಗಿ ಕುಟುಂಬ ನಿರ್ವಹಣೆ ಕಷ್ಟವಾಗಿ 1979ರಲ್ಲಿ ಮದ್ರಾಸು ಬಿಟ್ಟು ಬೆಂಗಳೂರಿಗೆ ಶಿಫ್ಟ್ ಆಗಬೇಕಾಯಿತು.

ಸಂಭಾಷಣಾಕಾರನಾಗಿ ಅವರ ಎರಡನೇ ಇನ್ನಿಂಗ್ಸ್ ಆರಂಭವಾದದ್ದು ವಿಷ್ಣುವರ್ಧನ್ ಅಭಿನಯದ 'ಸಿಂಹಜೋಡಿ' ಚಿತ್ರದ ಮೂಲಕ. ಚಿತ್ರ ಭರ್ಜರಿಯಾಗಿ ಓಡಿತು. ನಾಗಭೂಷಣ್ ಸಂಭಾಷಣಾಕಾರನಾಗಿ ಬ್ಯುಸಿಯಾದರು. ವಿಷ್ಣು ನಟಿಸಿದ 'ಸಾಹಸಸಿಂಹ', 'ಸಿಂಹಗರ್ಜನೆ', 'ಹೃದಯಗೀತೆ', 'ಚಿನ್ನದಂತ ಮಗ', 'ನಾಗಕಾಳಭೈರವ', 'ರುದ್ರನಾಗ'; 'ಊರಿಗೆ ಉಪಕಾರಿ', 'ಮಹಾಪ್ರಚಂಡರು' ಒಳಗೊಂಡಂತೆ ಸರಿಸುಮಾರು ನಲವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಡೈಲಾಗ್ಸ್ ಬರೆದರು.


ಶಂಕರನಾಗ್ ಅವರ 'ಸಾಂಗ್ಲಿಯಾನ', 'ಸಿ.ಬಿ.ಐ.ಶಂಕರ್', 'ಹೊಸಜೋಡಿ', ಅಂಬರೀಶ್ ಅಭಿನಯದ 'ಸೋಲಿಲ್ಲದ ಸರದಾರ', 'ಹಸಿದ ಹೆಬ್ಬುಲಿ', 'ನ್ಯಾಯಕ್ಕಾಗಿ ನಾನು' ತರಹದ ಆಕ್ಷನ್ ಚಿತ್ರಗಳಿಂದ ಹಿಡಿದು ಜಗ್ಗೇಶ್ ನಟಿಸಿದ 'ಭಂಡ ನನ್ನ ಗಂಡ', 'ಸೂಪರ್ ನನ್ಮಗ', 'ಬಲ್ ನನ್ಮಗ', 'ಬೇಡ ಕೃಷ್ಣ ರಂಗಿನಾಟ'ದಂಥ ಕಾಮಿಡಿ ಚಿತ್ರಗಳವರೆಗೆ ವಿಭಿನ್ನತೆ ಮೆರೆದ ಇವರೊಳಗಿನ ಸಂಭಾಷಣಾಕಾರ ನಿಜಕ್ಕೂ ಬೆರಗು ಮೂಡಿಸುತ್ತಾನೆ. 'ಇಬ್ಬರ ಹೆಂಡಿರ ಮುದ್ದಿನ ಪೊಲೀಸ್', 'ಪೊಲೀಸನ ಹೆಂಡತಿ', 'ಕೊಲ್ಲೂರ ಕಾಳ', 'ಕಿತ್ತೂರಿನ ಹುಲಿ' ಚಿತ್ರಗಳಿಗೆ ಇವರು ಬರೆದ ಮಾತುಗಳಿಂದ ಶಶಿಕುಮಾರ್ ಇಮೇಜೇ ಬದಲಾದದ್ದು ಗಮನಿಸಬೇಕಾದ ಅಂಶ. ಈ ನಿಟ್ಟಿನಲ್ಲಿ 'ಟೈಗರ್', 'ಮುತ್ತಿನಂಥ ಮನುಷ್ಯ', 'ಅಗ್ನಿಪರೀಕ್ಷೆ', 'ಟೈಗರ್ ಗಂಗು', 'ಕಲಿಯುಗ ಭೀಮ' ಚಿತ್ರಗಳ ಮೂಲಕ ಪ್ರಭಾಕರ್ ಇಮೇಜಿಗೆ ಒಗ್ಗುವಂಥ ಡೈಲಾಗ್ಸ್ ಬರೆದು ಜನಮೆಚ್ಚುಗೆ ಪಡೆದದ್ದೂ ವಿಶೇಷ.

ಹೀಗೆ ಸರಿಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಸಂಭಾಷಣೆ ಬರೆದಿರುವ ಕುಣಿಗಲ್ ನಾಗಭೂಷಣರಿಗೆ 'ಗೌರಿ ಗಣೇಶ' (1991-92) ಹಾಗೂ 'ಯಾರಿಗೂ ಹೇಳ್ಬೇಡಿ' (1994-95) ಚಿತ್ರಗಳಿಗೆ ಕರ್ನಾಟಕ ಸರ್ಕಾರ 'ಅತ್ಯುತ್ತಮ ಸಂಭಾಷಣಾಕಾರ' ರಾಜ್ಯಪ್ರಶಸ್ತಿ ನೀಡಿ ಗೌರವಿಸಿದೆ. ಇವರ-ಅನಂತ ನಾಗ್ ಕಾಂಬಿನೇಶನ್ನಿನಲ್ಲಿ ಬಂದ 'ಗಣೇಶ' ಸೀರೀಸ್ ಸಿನಿಮಾಗಳು ಜನಮಾನಸದಲ್ಲಿ ಹಾಸುಹೊಕ್ಕಾಗಿರುವುದು ವಿಶಿಷ್ಟ ಸಂಗತಿ. ತಾವು ಕೆಲಸ ಮಾಡಿದ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನೂ ಮಾಡುವ ಮೂಲಕ ಪ್ರಸಿದ್ಧ ನಟರ ಪಟ್ಟಿಯಲ್ಲೂ ಇವರು ಸೇರಲ್ಪಡುತ್ತಾರೆ.

ಕಳೆದ ನಾಲ್ಕು ದಶಕಗಳಿಂದ ಕನ್ನಡ ಚಿತ್ರರಂಗಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಾ ಬಂದ ಬಹುಮುಖ ಪ್ರತಿಭೆಯಾದ ಕುಣಿಗಲ್ ನಾಗಭೂಷಣ್ ಇದೀಗ ನಾಡಿನ ಜನತೆಯನ್ನು ಅಗಲಿದ್ದರೂ ಅವರ ಅದ್ಭುತ ಕೃತಿಗಳು ಸದಾ ಜೀವಂತ. ಹೊಸ ತಲೆಮಾರಿನ ಸಿನಿ ಬರಹಗಾರರಿಗೆ ಅದಮ್ಯ ಸ್ಫೂರ್ತಿಯ ಸೆಲೆಯಾಗಿರುವ ಇವರಿಗೊಂದು ಸಲಾಂ.


● ಹೃದಯಶಿವ

# ಪೇಜಾವರರು ಬದಲಾಗಬೇಕೋ, ಮಾಂಸಾಹಾರಿಗಳು ಉಡುಪಿಗೆ ಹೋಗುವುದನ್ನು ಬಿಡಬೇಕೋ...




ಪೇಜಾವರ ಶ್ರೀಗಳು ಕೃಷ್ಣ ಮಠದಲ್ಲಿ ಬ್ರಾಹ್ಮಣರ ಪ್ರತ್ಯೇಕ ಭೋಜನ ಪಂಕ್ತಿ ಕುರಿತು ಮತ್ತೊಮ್ಮೆ ಸಮರ್ಥನೆ ನೀಡಿದ್ದಾರೆ. ಇದು ಎಷ್ಟರಮಟ್ಟಿಗೆ ಸಮರ್ಥನೀಯ? ಸಸ್ಯಾಹಾರ ಮತ್ತು ಮಾಂಸಾಹಾರ ಸೇವಿಸುವವರು ಪ್ರತ್ಯೇಕವಾಗಿ ಊಟ ಮಾಡುವುದು, ಸುಬ್ರಮಣ್ಯ ದೇವಸ್ಥಾನದಲ್ಲಿ ಮಡೆ ಸ್ನಾನ ಮಾಡುವುದು, ಬ್ರಾಹ್ಮಣರು ಕತ್ತರಿಸಿದ ಉಗುರು-ಕೂದಲುಗಳನ್ನು ಮತ್ತೊಂದು ಸಮುದಾಯ ಅನ್ನದೊಂದಿಗೆ ತಿನ್ನುವುದು, ದೇವರ ಹೆಸರಿನಲ್ಲಿ ಬೆತ್ತಲೆ ಪೂಜೆ ಮಾಡುವುದು, ದೇವದಾಸಿ ಪದ್ಧತಿ ಅನುಸರಿಸುವುದು ಇವುಗಳು ಎಷ್ಟು ಅಮಾನುಷವೋ ಇವುಗಳನ್ನು ಸಮರ್ಥಿಸುವುದೂ, ಮಾಡುವಂತೆ ಪ್ರೇರೇಪಿಸುವುದೂ ಅಷ್ಟೇ ಅಮಾನುಷ. ಇದು ಮನುಷ್ಯ ಜಗತ್ತು, ಇಲ್ಲಿ ಪ್ರತಿಯೊಬ್ಬರೂ ಮುಖ್ಯ ಆದ್ದರಿಂದ ಪ್ರತಿಯೊಂದು ಪ್ರಗತಿಪರ ಮನಸ್ಸುಗಳು ಇಂತಹ ಹೇಯಕೃತ್ಯಗಳನ್ನು ಖಂಡಿಸಿ ಇಲ್ಲವಾಗಿಸುವ ಪ್ರಯತ್ನದೆಡೆಗೆ ಸಾಗಬೇಕು. ಸಸ್ಯಾಹಾರಿಗಳೊಂದಿಗೆ ಮಾಂಸಾಹಾರಿಗಳು ಊಟ ಮಾಡಿದರೆ ಸ್ವರ್ಗವೇನೂ ತಟಕ್ಕನೆ ಪಕ್ಕಕ್ಕೆ ಬಂದು ನಿಲ್ಲುವುದಿಲ್ಲ, ಹಾಗೆಯೇ ಬ್ರಾಹ್ಮಣ ಸಸ್ಯಾಹಾರಿಗಳು ಮಾಂಸಾಹಾರಿಗಳನ್ನು ಉದ್ಧಾರ ಮಾಡಲೆಂದೇ ಹುಟ್ಟಿದ ಅವತಾರ ಪುರುಷರೂ ಅಲ್ಲ. ಇಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ವ್ಯಕ್ತಿತ್ವವಿದೆ. ಆ ವ್ಯಕ್ತಿತ್ವ ಮನುಷ್ಯಪರವಾಗಿದ್ದರೆ ಮಾತ್ರ ಈ ಜಗತ್ತು ಸಮಾನತೆಯೆಡೆಗೆ ಸಾಗಲು ಸಾಧ್ಯ.

ಮಾಂಸಾಹಾರಿಗಳ ಜೊತೆ ಕುಳಿತು ಊಟ ಮಾಡಿದರೆ ಮಹಾನರಕ ಬರುತ್ತದೆ ಎಂದು ಬಸವಣ್ಣ ಹೇಳಿದ್ದಾರೆ ಎನ್ನುವ ಪೇಜಾವರರಿಗೆ (ಈ ರೀತಿ ಹೇಳಿಕೆ ಇರುವ ವಚನವನ್ನು ಉಲ್ಲೇಖ ಮಾಡಿದ್ದರೆ ಚೆನ್ನಾಗಿತ್ತು) 'ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ' ಎನ್ನುವ ವಚನವಾಗಲೀ, 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ' ಎನ್ನುವ ವಚನವಾಗಲೀ, 'ಆವನಾದರೇನು? ಶ್ರೀ ಮಹಾದೇವನ ನೆನೆವವನ ಬಾಯ ತಂಬುಲ ಮೆಲುವೆ, ಬೀಳುಡಿಗೆಯ ಹೊದೆವೆ, ಪಾದರಕ್ಷೆಯ ಕಾಯ್ದು ಬದುಕುವೆ' ಎನ್ನುವ ವಚನವಾಗಲೀ, 'ಚೆನ್ನಯ್ಯನ ಮನೆಯ ಮಗನ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು, ಇವರಿಬ್ಬರಿಗೆ ಹುಟ್ಟಿದ ಮಗ ನಾನು



ಕೂಡಲಸಂಗನ ಸಾಕ್ಷಿಯಾಗಿ' ಎನ್ನುವ ವಚನವಾಗಲೀ ಪೇಜಾವರ ಶ್ರೀಗಳ ಗಮನಕ್ಕೆ ಬರುವುದೇ ಇಲ್ಲ, ಬಂದಿದ್ದರೆ ಇಷ್ಟೊತ್ತಿಗೆ ಪೇಜಾವರರು ಇಂತಹ ಅನಿಷ್ಟಗಳ ಪರ ನಿಲ್ಲುತ್ತಲೇ ಇರಲಿಲ್ಲ, ಅಷ್ಟಕ್ಕೂ ಬಸವಣ್ಣನ ವಚನಗಳು ಅಷ್ಟಮಠಗಳನ್ನು ಮತ್ತು ದೇವಸ್ಥಾನಗಳನ್ನು ನಿಜವಾಗಲೂ ತಲುಪಿದ್ದರೆ ಇಷ್ಟೊತ್ತಿಗೆ ಇವುಗಳೊಳಗಿನ ಜಾತಿಯೆಂಬ ವಿಷವಾದರೂ ಇಲ್ಲಿಂದ ತೊಲಗುತ್ತಿತ್ತು, ಹಿಂದೆ ಕುಕ್ಕೆಯಲ್ಲಿ ಮಡೆಸ್ನಾನದ ವಿರುದ್ಧ ಕನಿಷ್ಟ ಹೇಳಿಕೆಯನ್ನು ನೀಡಲು ಹಿಂಜರಿದ ಪೇಜಾವರ ಶ್ರೀಗಳಿಂದ ಹೆಚ್ಚಿನದೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ.

ಸಹಪಂಕ್ತಿ ಭೋಜನವೆಂಬುದು ಕನಿಷ್ಠಮಟ್ಟದಲ್ಲಾದರೂ ಜಾತಿಯ ಬೇರುಗಳನ್ನು ಅಲುಗಾಡಿಸಲು ಸಹಕರಿಸುತ್ತದೆ. ಇದಕ್ಕೆ ವಿರೋಧಿಸುವುದೆಂದರೆ ಇಲ್ಲಿನ ಜಾತಿ ವ್ಯವಸ್ಥೆಯನ್ನು ನಿರಂತರವಾಗಿ ಪೋಷಿಸಿಕೊಂಡು ಹೋಗುವಂತೆಯೇ ಸರಿ. ಸಸ್ಯಾಹಾರಿಗಳಾದ ಕೆಲವು ಬ್ರಾಹ್ಮಣರು ಸಾರ್ವಜನಿಕ ಪಂಕ್ತಿಯಲ್ಲಿ ಕುಳಿತು ಊಟ ಮಾಡಲು ಒಪ್ಪದಿರುವುದು ಈ ದೇಶದ ಜಾತಿವ್ಯವಸ್ಥೆಯನ್ನು ನಿರಂತರವಾಗಿ ಪೋಷಿಸಿಕೊಂಡು ಹೋಗಲು ನಾವಿದ್ದೇವೆ ಎನ್ನುವುದನ್ನು ತೋರಿಸಿದಂತೆಯೇ ಸರಿ. ಇದು ಕೇವಲ ಆಹಾರ ಪದ್ಧತಿಯ ಭಿನ್ನತೆಗಷ್ಟೇ ನಿಲ್ಲುವುದಿಲ್ಲ, ಮುಂದುವರಿದು ಜಾತಿಯೊಳಗಿನ ಕ್ರೌರ್ಯತೆಯನ್ನೂ ಎತ್ತಿ ತೋರಿಸುತ್ತದೆ. ಈ ಕ್ರೌರ್ಯದ ಮನಸ್ಸುಗಳು ಎಲ್ಲಿಯವರೆಗೆ ಚಾಚಿಕೊಂಡಿವೆಯೆಂದರೆ ಬಡವರಿಗೆ 30 ಕೆಜಿ ಅಕ್ಕಿ ಕೊಡುವುದನ್ನೂ ವಿರೋಧಿಸುತ್ತವೆ. ಕೂಲಿ ಹೆಚ್ಚಳಕ್ಕೆ ತಗಾದೆ ತೆಗೆಯುತ್ತವೆ. ಜಾತಿ ಎನ್ನುವುದು ಇಲ್ಲವೇ ಇಲ್ಲ ಎಂದು ವಾದಿಸುತ್ತವೆ. ವಚನಗಳಲ್ಲಿ ಜಾತಿ ವಿರೋಧಿ ಅಂಶಗಳೇ ಇಲ್ಲ ಎನ್ನುವಂತೆ ಬಿಂಬಿಸುತ್ತವೆ. ಇವೆಲ್ಲವುಗಳ ಮೂಲ ಉದ್ದೇಶ ಒಂದೇ: ಈ ದೇಶ ಈಗ ಹೇಗಿದೆಯೋ ಹಾಗೇ ಇರಬೇಕು. ಅದು ಯಾವ ಕಾರಣಕ್ಕೂ ಬದಲಾಗಬಾರದು. ಬದಲಾದರೆ ಈ ದೇಶದ ಜಾತಿವಾದಿಗಳ, ಬಂಡವಾಳಶಾಹಿಗಳ, ಬ್ರಾಹ್ಮಣಶಾಹಿಗಳ, ಭೂಮಾಲೀಕರ ಬಣ್ಣ ಬಯಲಾಗುತ್ತದೆಂಬುದೇ ಅವರೆಲ್ಲರಿಗಿರುವ ದೊಡ್ಡ ಭಯ. ಇದರ ಮುಂದುವರಿದ ಭಾಗವೇ ಪೇಜಾವರ ಶ್ರೀಗಳ ಹೇಳಿಕೆಯಲ್ಲೂ ಅಡಗಿ ಕುಳಿತಿದೆ.

ಅಷ್ಟಕ್ಕೂ ಪೇಜಾವರರು ಬದಲಾಗಬೇಕೆ? ಅವರೂ ಎಂದಿಗೂ ಬದಲಾಗುವುದಿಲ್ಲ, ಅವರಿಗೆ ಶ್ರೀಕೃಷ್ಣ ಮಠ, ಧರ್ಮಸ್ಥಳ, ಕುಕ್ಕೆ ಮುಂತಾದ ಕಡೆಗಳಲ್ಲಿ ಇರುವ ಸಾಂಪ್ರದಾಯಿಕ ಪದ್ಧತಿಗಳು ಹಾಗೇ ಇರುವುದು ಬಹಳ ಮುಖ್ಯ. ಅದು ಪಂಕ್ತಿ ಭೋಜನದ ವಿಷಯವಾಗಿರಬಹುದು, ಮಡೆಸ್ನಾನದ ವಿಷಯವಾಗಿರಬಹುದು. ಹಾಗಾದರೆ ಮಾಂಸಾಹಾರಿಗಳು ಉಡುಪಿಗೆ ಹೋಗುವುದನ್ನು ಬಿಡಬೇಕೆ ಅಥವಾ ಹೋದರೂ ಅಲ್ಲಿನ ಊಟದ ಪದ್ಧತಿಯನ್ನು ಧಿಕ್ಕರಿ[ಸಿ] ಬರಬೇಕೆ? ಇದು ಸಾಧ್ಯವಾದರೆ ಬಹುಶಃ ಒಂದು ಸ[ಣ್ಣ] ಬದಲಾವಣೆಯನ್ನು ನಿರೀಕ್ಷಿಸಬಹುದೇನೋ.... ಏಕೆಂದರೆ ಮಾಂಸಾಹಾರ ಶೂದ್ರಾರಾದಿಯಾಗಿ ಬ್ರಾಹ್ಮಣರವರೆಗು[ೂ] ತಲುಪಿದೆ. ಇವರೆಲ್ಲರೂ ಕೃಷ್ಣಮಠಕ್ಕೆ ಬರುವುದನ್ನು ನಿಲ್ಲಿಸಿದ[ರೆ] ಉಡುಪಿ ಬೆಳಕಿನ ಆಗರವಾಗಿರಲು ಸಾಧ್ಯವೇ? ಇದನ್ನು ಮಾಂಸಾಹಾರಿಗಳೇ ಹೇಳಬೇಕು. ಇದೂ ಬಹುಶಃ ಕ[ಷ್ಟ] ಸಾಧ್ಯ. ಆದರೆ ಇಂತಹುಗಳ ಒಳಗಿರುವ ಮೇಲುಕೀಳ[ು] ಭಾವನೆಗಳನ್ನಾದರೂ ಹೋಗಲಾಡಿಸಲು ಎಲ್ಲ ಪ್ರಗತಿಪ[ರ] ಮನಸ್ಸುಗಳು ಧ್ವನಿ ಎತ್ತಬೇಕು. ಇದು ಬಹುಶಃ ಹೊ[ಸ] ಹಾದಿ ತೋರಬಲ್ಲದು.

- ಉಮಾಶಂಕರ್ ಹೆಚ್.ದಿ. ಕೆ.ಆರ್. ಪೇ[ಟೆ]

## ಮಜಾ ನೀಡಿದ 'ಕಡ್ಡೀಪುಡಿ'

16.6.13 ರ ಬೆಳಗ್ಗೆ 'ಗೌರಿ ಲಂಕೇಶ್' ಓದಿದೆವು ಅದೇ ಸಂಜೆ ಫಸ್ಟ್ ಶೋನಲ್ಲಿ 'ಕಡ್ಡೀಪುಡಿ' ಸಿನಿಮಾ ನೋಡಿದೆವು. ತಮ್ಮ ಪತ್ರಿಕೆಯಲ್ಲಿ 'ಕಡ್ಡೀಪುಡಿ' ಪ್ರೇಕ್ಷಕ[ರ] ಮತ್ತು ಶಿವಣ್ಣನ ಅಭಿಮಾನಿಗಳಲ್ಲಿ ನಿರಾಶೆ ಮೂಡಿಸಿ[ದೆ] ಎಂದು ಬರೆದಿರುವುದು ಸತ್ಯಕ್ಕೆ ದೂರವಾದ ಮಾತಾಗಿದೆ. 'ಜೋಗಿ' ಚಿತ್ರದ ನಂತರ ಶಿವಣ್ಣನ ಅಭಿಮಾನಿಗಳಿಗೆ ಅತ್ಯಂತ ಖುಷಿ ನೀಡಿದ ಚಿತ್ರ 'ಕಡ್ಡೀಪುಡಿ'. ಸೂರಿ ಅವರು ಈ ಚಿತ್ರವನ್ನು ಉತ್ತಮವಾಗಿ ನಿರ್ದೇಶಿಸಿದ್ದಾರೆ. ರೌಡಿಸ[ಂ] ಕಥೆಯನ್ನು ನವಿರಾದ ಪ್ರೇಮಕಥೆಯೊಂದರ ಮೂಲ[ಕ] ಹೊಸ ರೀತಿ ತೆರೆಯ ಮೇಲೆ ಮೂಡಿಸಿದ್ದಾರೆ. ಚಿ[ತ್ರ] ಕಮರ್ಷಿಯಲ್ ಆಗಿಯೂ ಗೆದ್ದಿದೆ. ಚಿತ್ರ ಬಿಡುಗಡೆಯಾ[ದ]

# ...ನಿಮಾ ಬಿಟ್ಟು...ಅಧ್ಯಕ್ಷ ಗಾದಿಯೆಡೆ...



...ರಾಜಕೀಯ ಕ್ಷೇತ್ರಕ್ಕಿಂತಲೂ ಸಿನಿಮಾ ...ಲ್ಲಿ ಬಿರುಸಾಗಿ ರಾಜಕೀಯ ನಡೆಯುತ್ತಿದೆ. ...ಪದಮುಕ್ತರಾದ ಚಲನಚಿತ್ರ ಅಕಾಡೆಮಿಯ ... ಸ್ಥಾನವನ್ನು ಅಲಂಕರಿಸಲು ಅನೇಕ ...ರು ಅನೇಕ ರೀತಿಯ ರಾಜಕೀಯಗಳನ್ನು ...ಉತ್ತಿದ್ದಾರೆ. ಸದ್ಯಕ್ಕೆ ಎಲ್ಲರೂ ಸಿನಿಮಾ ...ವುದನ್ನು ಮರೆತು ಅಕಾಡೆಮಿಯ ...ಗಿರಿ ಕುರ್ಚಿ ಮೇಲೆ ಕಣ್ಣಿಟ್ಟಿದ್ದಾರೆ.

...ತ್ರರಂಗದ ಒಂದು ಗುಂಪು ಯಾವುದೇ ...ಕ್ಕೂ ಜಯಮಾಲಾ ಅಧ್ಯಕ್ಷೆಯಾಗಬಾರದು ... ಅವಿರತವಾಗಿ ಕೆಲಸ ಮಾಡುತ್ತಿದೆ. ಅದೇ ...ಯಲ್ಲಿ ಮತ್ತೊಂದು ಗುಂಪು ಅಧ್ಯಕ್ಷಗಿರಿಯ ...ೀಟಿಯಲ್ಲಿ ಮುಂದಿರುವ ಕೆ.ಸಿ.ಎನ್. ...ಶೇಖರ್ ಆ ಸ್ಥಾನವನ್ನ ಅಲಂಕರಿಸಿರ ...ು ಎಂದು ಇನ್ನೊಂದು ಗುಂಪು ಶ್ರಮಿಸು... ಈ ಹಿಂದೆ ಈ ಸ್ಥಾನಕ್ಕೆ ನಂಜುಂಡೇಗೌಡ, ...ಂದ್ರಸಿಂಗ್ ಬಾಬು ಮೊದಲಾದವರ ...ಗಳು ಕೇಳಿಬಂದಿದ್ದರೂ ಅವರ್ಯಾರೂ ಈಗ ...ಲ್ಲಿಲ್ಲ.

...ಶ್ಚರ್ಯವೆಂದರೆ ಜಯಮಾಲ ಮತ್ತು ...ನ್ ಚಂದ್ರು ಇವರಿಬ್ಬರೂ ಅಧ್ಯಕ್ಷರಾಗಲೇ ...ು ಎಂದು ಮತ್ತೊಂದು ಗುಂಪು ...ಂಡಿದಿದೆ. ಇವರಿಬ್ಬರ ಬದಲಿಗೆ ಕ್ರೇಜಿಸ್ಟಾರ್ ...ಂದ್ರನ್ ಅವರ ಹೆಸರನ್ನು ಈ ತೃತೀಯ ... ಪ್ರಸ್ತಾಪಿಸಿದೆ. ರವಿಚಂದ್ರನ್ ಅವರಿಗೆ ...ರೆಯಿಂದ ನಿರ್ಮಾಪಕರ ಸಂಘದ ...ರೂ ಮತ್ತೀಗ ಶಾಸಕರೂ ಆಗಿರುವ ...ರತ್ನಂ ನಾಯ್ಡು ಮಾತ್ರವಲ್ಲದೆ ರವಿಚಂದ್ರನ್ ...ಅಚ್ಚುಮೆಚ್ಚಿನ ನಟಿ 'ಪುಟ್ನಂಜ' ಖ್ಯಾತಿಯ ...ಸಚಿವೆಯಾಗಿರುವ ಉಮಾಶ್ರೀ ಬೆಂಬಲ ...ದ್ದಾರೆ ಎಂಬ ಸುದ್ದಿ ಕೇಳಿಬಂದಿದೆ. ಮತ್ತೊಬ್ಬ ... ಮಂಡ್ಯದ ಗಂಡು ಅಂಬರೀಷ್ ...ಂತನಕ ಯಾರ ಪರವೂ ಬಹಿರಂಗವಾಗಿ ...ನ್ನು ವ್ಯಕ್ತಪಡಿಸದಿರುವುದರಿಂದ ಗೊಂದಲ ...ಮೇ ಮುಂದುವರೆದಿದೆ.

...ಹಿನ್ನೆಯ ಚುನಾವಣೆಯಲ್ಲಿ ರವಿಚಂದ್ರನ್ ಕಾಂಗ್ರೆ... ಮತ್ತು ಜನತಾದಳ ಹೀಗೆ ಮೂರೂ ಪಕ್ಷಗಳ ...ಬ್ಬ ಅಭ್ಯರ್ಥಿಯ ಪರವಾಗಿ ಚುನಾವಣಾ ಪ್ರಚಾರ ...ದ್ದರು. ಅವರು ಸಕ್ರಿಯವಾಗಿ ಯಾವುದೇ ಪಕ್ಷಕ್ಕೆ ...ದಿದ್ದರೂ ಅಂಬರೀಷ್, ಮುನಿರತ್ನಂ ನಾಯ್ಡು ಮತ್ತು ...ಾಶ್ರೀ ಜೊತೆಗೂಡಿ ರವಿಚಂದ್ರನ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ಹೊರಟಂತಿದೆ. ಇವರ ಉತ್ಸಾಹಕ್ಕೆ ಮಣಿದ ರವಿಚಂದ್ರನ್ ಕೆಲವು ಆತ್ಮೀಯರಲ್ಲಿ ತಾನು ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗುವ ಸಾಧ್ಯತೆ ಬಗ್ಗೆ ಖಾಸಗಿಯಾಗಿ ಮಾತನಾಡಿದ್ದಾರೆ.

ರವಿಚಂದ್ರನ್ ಹೆಸರು ಅಧ್ಯಕ್ಷರ ಪಟ್ಟಿಯಲ್ಲಿ ಕಾಣಿಸಿಕೊಂಡಾಕ್ಷಣ ಗಾಂಧಿನಗರದಲ್ಲಿ ಒಂದು ರೀತಿಯ ವಿದ್ಯುತ್ ಸಂಚಾರವಾಗಿದೆ. ಆದರೆ ರವಿಚಂದ್ರನ್ ಅವರ ಅಭಿಮಾನಿಗಳು ಇವರ ಈ ಹೊಸ ಹುದ್ದೆಯನ್ನು ಅಲಂಕರಿಸುವ ಬಗ್ಗೆ ಅಸಮಾಧಾನದಿಂದಿದ್ದಾರೆ. ಕಳೆದ ಎಂಟು ವರ್ಷಗಳಿಂದ ಅವರ 'ಮಂಜಿನ ಹನಿ' ಚಿತ್ರದ ಚಿತ್ರೀಕರಣ ನಡೆಯುತ್ತಲೇ ಇದೆ. ಈಗ ಅವರ 'ಕ್ರೇಜಿಲೋಕ' ಚಿತ್ರ ಬಿಡುಗಡೆಯಾಗಬೇಕಾಗಿದೆ. ಇದರ ಬೆನ್ನಲ್ಲೇ ಅವರ ಹೊಸ ಚಿತ್ರ 'ಅಪೂರ್ವ' ಆರಂಭವಾಗಲಿದೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಅವರ ಹಿರಿಯ ಮಗ ಮನೋರಂಜನ್‌ನನ್ನು ಚಿತ್ರರಂಗಕ್ಕೆ ಪರಿಚಯಿಸುವ ಉತ್ಸಾಹದಲ್ಲಿದ್ದಾರೆ ರವಿಚಂದ್ರನ್. ಇದೆಲ್ಲದರ ಮಧ್ಯೆ ಅವರಿಗೆ ಅಕಾಡೆಮಿ ಕೆಲಸ ಮಾಡಲು ಸಮಯವಾದರೂ ಎಲ್ಲಿ ಸಿಗುತ್ತದೆ ಎಂಬುದೇ ಅವರ ಹಿತೈಷಿಗಳ ಅಭಿಪ್ರಾಯ.

ಅಕಾಡೆಮಿಯ ಅಧ್ಯಕ್ಷ ಸ್ಥಾನವನ್ನು ವಿಶ್ರಾಂತಿ ಜೀವನದತ್ತ ಸಾಗುತ್ತಿರುವವರು ನಿರ್ವಹಿಸಿದರೆ ಒಳ್ಳೆಯದು. ಆದರೆ ಈಗಲೂ ದಿನದ 24 ಗಂಟೆ ಸಿನಿಮಾದ ಬಗ್ಗೆಯೇ ಯೋಚಿಸುವ ರವಿಚಂದ್ರನ್ ತರಹದ ವ್ಯಕ್ತಿ ಈ ಸ್ಥಾನಕ್ಕೆ ಎಷ್ಟು ಸೂಕ್ತ? ಈಗಲೂ ಚಿತ್ರರಂಗದಲ್ಲಿ ಸಕ್ರಿಯವಾಗಿರುವ ರವಿಚಂದ್ರನ್ ಅಕಾಡೆಮಿಗೆ ಹೋದರೆ ಅದು ಚಿತ್ರರಂಗಕ್ಕೆ ದೊಡ್ಡ ನಷ್ಟ ಎಂಬುದು ಹಲವರ ಅಭಿಪ್ರಾಯ.

ಇವೆಲ್ಲದರ ಮಧ್ಯೆ ಈಗಾಗಲೇ ಪದಮುಕ್ತರಾಗಿರುವ ತಾರಾ ಕೂಡ ತನ್ನದೇ ಆದ ರೀತಿಯಲ್ಲಿ ರಾಜಕೀಯ ನಡೆಸುತ್ತಾ ಉರಿಯುವ ಬೆಂಕಿಗೆ ತುಪ್ಪ ಹಾಕುತ್ತಿದ್ದಾರೆ. ಇವೆಲ್ಲವನ್ನೂ ಗಮನಿಸಿದರೆ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕಾಗಿ ಮುಂಬರುವ ದಿನಗಳಲ್ಲಿ ಚಿತ್ರೋದ್ಯಮದಲ್ಲಿ ಇನ್ನಷ್ಟು ಗುಂಪುಗಾರಿಕೆ ಕಂಡುಬಂದರೆ ಆಶ್ಚರ್ಯವಿಲ್ಲ.


# ಸಾಹಸದ ದರ್ಶನ್ ಗೆಲುವು



ದರ್ಶನ್ ನಾಯಕನಾಗಿ ನಟಿಸಿರುವ 'ಬುಲ್ ಬುಲ್' ಚಿತ್ರ 50 ದಿನ ಪೂರೈಸಿ 100ರತ್ತ ಸಾಗುತ್ತಿದೆ. ಆ ಮೂಲಕ ದರ್ಶನ್ 'ಸುಲ್ತಾನ್ ಆಫ್ ಬಾಕ್ಸ್ ಆಫೀಸ್' ಎಂದು ಗಾಂಧಿನಗರದವರು ನೀಡಿದ ಹೆಗ್ಗಳಿಕೆಯನ್ನು ಉಳಿಸಿಕೊಂಡಂತಾಗಿದೆ. 'ಸಾರಥಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಭಾರಿಸಿದ ನಂತರ ದರ್ಶನ್ ಸಿನಿಮಾಗಳು ಬಾಕ್ಸ್ ಆಫೀಸ್ ನಾಗಾಲೋಟ ಯಶಸ್ವಿಯಾಗಿ ಸಾಗಿವೆ. 'ಸಾರಥಿ' ನಂತರ ಬಂದ 'ಚಿಂಗಾರಿ' ನಿರ್ಮಾಪಕರಿಗೆ ನಿರೀಕ್ಷಿಸಿದಷ್ಟು ಲಾಭ ತಂದುಕೊಡಲಿಲ್ಲವಾದರೂ ಅದರಿಂದ ಅವರಿಗೆ ನಷ್ಟವೂ ಆಗಲಿಲ್ಲ. ಆನಂತರ ಬಂದ 'ಸಂಗೊಳ್ಳಿ ರಾಯಣ್ಣ' ಬಾಕ್ಸ್ ಆಫೀಸ್‌ನಲ್ಲಿ ಕುಂಟುತ್ತ ಸಾಗಿದರೂ ನಿರ್ಮಾಪಕ ಆನಂದ್ ಅಪ್ಪುಗೋಳ್ ಹಾಕಿದ ಭಾರೀ ಮೊತ್ತದ ಬಂಡವಾಳವನ್ನು ವಾಪಾಸ್ ತಂದುಕೊಟ್ಟಿತು. ಗಾಂಧಿನಗರದವರ ಪ್ರಕಾರ 'ಸಂಗೊಳ್ಳಿ ರಾಯಣ್ಣ' ದಂತಹ ಅದ್ದೂರಿ ಬಜೆಟ್‌ನ ಚಿತ್ರಕ್ಕೆ ಹಾಕಿದ್ದ ಬಂಡವಾಳವನ್ನು ವಾಪಸ್ ತಂದುಕೊಟ್ಟಿದ್ದೇ ದೊಡ್ಡ ಸಾಹಸ. ಇದೀಗ 'ಸಂಗೊಳ್ಳಿ ರಾಯಣ್ಣ'ನ ನಂತರ 'ಬುಲ್ ಬುಲ್' ಗೆದ್ದಿದೆ. ಅಲ್ಲಿಗೆ ದರ್ಶನ್ ಬಾಕ್ಸ್ ಆಫೀಸ್‌ನಲ್ಲಿ ಒಂದು ರೀತಿಯಲ್ಲಿ ಹ್ಯಾಟ್ರಿಕ್ ಭಾರಿಸಿದಂತೆ ಆಗಿದೆ.

● ಶೆಣೈ

# ಸೌಂದರ್ಯ ಔಟ್... ರಚಿತಾ ಇನ್...



ಜಯಮಾಲ ಅವರ ಪುತ್ರಿ ಸೌಂದರ್ಯ ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಪುತ್ರನ ಜೊತೆ ನಾಯಕಿಯಾಗಿ ನಟಿಸಲಿದ್ದಾರೆ ಎಂದು ಭಾರೀ ಪ್ರಚಾರ ಆಗಿತ್ತು. ಸ್ವತಃ ರವಿಚಂದ್ರನ್ ಕೂಡ ಈ ಸುದ್ದಿಯನ್ನು ನಿರಾಕರಿಸಿರಲಿಲ್ಲ.

ಆದರೆ ಈಗ ರವಿಚಂದ್ರನ್ ಪುತ್ರ ಮನೋರಂಜನ್ ನಾಯಕನಾಗಿ ನಟಿಸಲಿರುವ 'ಅಂದು' ಚಿತ್ರದ ನಾಯಕಿಯಾಗಿ ಸೌಂದರ್ಯ ಬದಲಾಗಿ 'ಬುಲ್‌ಬುಲ್' ಖ್ಯಾತಿಯ ರಚಿತಾ ರಾಂ ಆಯ್ಕೆಯಾಗಿದ್ದಾರೆ.



ಈಗಾಗಲೇ ಕ್ರೇಜಿಸ್ಟಾರ್ ಈ ಇಬ್ಬರು ಯುವ ನಟರ ಫೋಟೋ ಶೂಟ್ ಸೆಶನ್‌ಅನ್ನು ಮುಗಿಸಿದ್ದಾರೆ. ಮಾತ್ರವಲ್ಲ ರಚಿತಾಗೆ ಉಡುಪುಗಳನ್ನು ಖರೀದಿಸಲು ಸ್ವತಃ ರವಿಚಂದ್ರನ್ ಆಕೆಯೊಂದಿಗೆ ಓರಿಯನ್ ಮಾಲ್ ಪೂರ್ತಿ ಸುತ್ತಾಡಿದ್ದಾರೆ.

ಒಬ್ಬ ಕನ್ನಡದ ನಾಯಕಿಯ ಸ್ಥಾನಕ್ಕೆ ಮತ್ತೊಬ್ಬ ಕನ್ನಡದ ಹುಡುಗಿ ಆಯ್ಕೆಯಾಗಿದ್ದಾಳೆಂದರೆ ಕನ್ನಡ ಚಿತ್ರರಂಗದಲ್ಲಿ ಕನ್ನಡದ ಹುಡುಗಿಯರ ನಡುವೆಯೇ ಎಂತಹ ಪೈಪೋಟಿ ಇದೆ ಎಂಬುದನ್ನು ತೋರಿಸುತ್ತದಲ್ಲವೇ? ●

...ನೇ ಭಾನುವಾರ ಸಂಜೆ ನಾವೆಲ್ಲ ಟಿಕೆಟ್‌ಅನ್ನು ...ನಲ್ಲಿ ಕೊಂಡು ಚಿತ್ರ ನೋಡಿದೆವು. ಕನ್ನಡ ಪ್ರೇಕ್ಷಕ ...ಇಷ್ಟ ಪಟ್ಟಿದ್ದಾನೆ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ...!

...ವರಾಜ್‌ಕುಮಾರ್‌ಗೆ ಪುನರ್‌ಜನ್ಮ ನೀಡಿದ ಚಿತ್ರವನ್ನು ...ಶಿಸಿರುವ ಸೂರಿಗೆ hundreds of thanks!

-ಮಹೇಂದ್ರ ಮತ್ತು ಸ್ನೇಹಿತರು, ಚಿತ್ರದುರ್ಗ

## ...ಯದ್ದು ಸ್ವಯಂಕೃತ ಅಪರಾಧ

...ೂನ್ 19, 2013ರ ಸಂಚಿಕೆಯ ಮುಖಪುಟದಲ್ಲಿ ...ಗ-ಲಫಂಗ!' ಎಂಬ ಹೆಡ್ಡಿಂಗ್ ಸಕತ್ತಾಗಿತ್ತು. ಕನ್ನಡದ ... ಪ್ರೇಕ್ಷಕರು, ನಟಿ ಶೃತಿ ನಟಿಸಿರುವ ಚಿತ್ರ ನೋಡಿದ ...ಯರು, ಶೃತಿ ತರಹ ಬದುಕಬೇಕೆಂದು ಆದರ್ಶ ...ಕೊಂಡಿದ್ದರು. ಆದರೆ ಇವತ್ತು ಆಗಿರುವುದೇನು? ... ಲಫಂಗ, ನಕಲಿ ಪತ್ರಕರ್ತ, ಪಡಪೋಸಿ ...ಯೊಡನೆಂಥ ಕಾಮುಕನ ಕೈಹಿಡಿದಿರುವ ಶೃತಿ ನಿಜಕ್ಕೂ ...ಕೃತ ಅಪರಾಧವನ್ನೇ ಮಾಡಿಕೊಂಡಿದ್ದಾರೆ. ಶೃತಿ ...ರ ಹೆಚ್ಚೆ ಎಷ್ಟು ದಿನ ನಡೆಯುತ್ತೋ ಕಾದು ...ಬೇಕು.

-ಆರ್.ಕೆ. ಕೋಟ್ರೆ, ಬಾದಾಮಿ

## ...ಮಾನವತಾವಾದಿ ಹೆಚ್.ಎಲ್.ಕೆ

...ೂನ್ 19, 2013 ರ ಸಂಚಿಕೆಯಲ್ಲಿ ಖ್ಯಾತ ಸಾಹಿತಿ ...ಎಲ್. ಕೇಶವಮೂರ್ತಿಯವರ ಬಗ್ಗೆ ಮೆಚ್ಚುಗೆ ...ಗಳನ್ನು ಬರೆದಿದ್ದೀರಿ. ತುಂಬಾ ಸಂತೋಷವಾಯಿತು. ... ನಾನು ಮತ್ತು ನನ್ನ ಸ್ನೇಹಿತ ಅವರ ಮನೆಗೆ ... [illegible] ... ಶುಭ ಹೇಳಿದರು. ಖಂಡಿತಾವಾದಿಯಾದರೂ ಮಹಾ ಮಾನವತಾವಾದಿ, ಸೃಜನಶೀಲ ವಿಚಾರಗಳ ಆಗರ ಅವರಾಗಿದ್ದಾರೆ. ನೆನಪು ಬಂದಿದ್ದರಿಂದ ಇದನ್ನು ಬರೆದಿದ್ದೇನೆ.

ನಾನು ನಿವೃತ್ತ ಪ್ರಾಚಾರ್ಯನಾಗಿದ್ದು ಈಗ ನನ್ನ ಊರಿನಲ್ಲಿ ಒಂದು ಗ್ರಂಥಾಲಯವನ್ನು ತೆರೆದು ನಿವೃತ್ತಿ ದಿನಗಳನ್ನು ಕಳೆಯುತ್ತಿದ್ದೇನೆ. ಸಮಾಜ ಸೇವೆ ನನ್ನ ಹವ್ಯಾಸ.

- ಕೆ.ಸಿದ್ದನಗೌಡ, ಉಜ್ಜಯಿನಿ, ಬಳ್ಳಾರಿ

## ನಿಸರ್ಗದಲ್ಲಿ ಸ್ತ್ರೀ ಪ್ರಾತಿನಿಧ್ಯಕ್ಕೇ ಹೆಚ್ಚು ಮಹತ್ವ

ಮಾನವನ ಜೈವಿಕ ಹಾಗು ಸಾಮಾಜಿಕ ವಿಕಾಸದಲ್ಲಿ ಸ್ತ್ರೀಯ ಪಾತ್ರದ ಬಗ್ಗೆ ಗೌರಿಯವರು ಚೆನ್ನಾಗಿ ವಿಶ್ಲೇಷಿಸಿದ್ದಾರೆ (ಜುಲೈ 2, 2013ರ 'ಕಂಡಹಾಗೆ' ಅಂಕಣ). ಇತ್ತೀಚೆಗೆ ಪ್ರವೀಣ್ ಎಸ್ ಶೆಟ್ಟಿಯವರ ಬಳಿ ಮಾತಾಡುತ್ತಿರುವಾಗ ಅವರು ಜೆನ್ನಾ ಲೇಖನದಲ್ಲಿ ಉಲ್ಲೇಖಿಸಿದ ಪೂಂಜಾ ಸರ್ ನೇಮ್ ಕುರಿತು ಚರ್ಚಿಸುತ್ತಾ ಬಂಟರ ಪೂಂಜಾ (ಶುಭಾ ಪೂಂಜಾ) ಬಹುಶಃ 'ಹುಂಜ' (ಕೋಳಿ)ದ ಹಿನ್ನೆಲೆಯಲ್ಲಿ ಬಂದಿರಬೇಕೇನೋ ಎಂದಿದ್ದೆ. ಯಾಕೆಂದರೆ ವೃಷಭ, ಹುಂಜ, ಕೇಸರಿ ಇವೆಲ್ಲ ಧೈರ್ಯ ಗತ್ತುಗಾರಿಕೆಯ ಸಂಕೇತಗಳಾಗಿ ಬಳಕೆಯಾಗುವಂತವುಗಳು. ಆದರೆ ತಮಾಷೆಯೆಂದರೆ ಧೈರ್ಯ ಸಾಹಸಗಳಿಗಾಗಿ ಸಾರ್ವತ್ರಿಕವಾಗಿ ಬಳಸಲ್ಪಡುವ 'ಪುರುಷ ಸಿಂಹ' 'ಪುರುಷ ಕೇಸರಿ' ಎನ್ನುವ ಪದಗಳ ಮೂಲ ತಡಕಾಡಹೋದರೆ ಇದು ಯಾವುದೋ ಅಚಾತುರ್ಯದಿಂದ ಬಳಕೆಗೆ ಬಂದ ಪದಗಳಾಗಿ ತೋರುತ್ತವೆ. ಯಾಕೆಂದರೆ ಸಿಂಹ ಕುಟುಂಬದಲ್ಲಿ ಮೂಲತಃ ಧೈರ್ಯ-ಸಾಹಸ ತೋರುವಂತಾದ್ದು ಸಿಂಹವಲ್ಲ ಬದಲಾಗಿ ಸಿಂಹಿಣಿ ಎಂಬುದು ವಾಸ್ತವಿಕ ಸತ್ಯ.



ಬೇಟೆಯಾಡುವುದು, ಮರಿಗಳ ಪಾಲನೆ, ಶಿಕ್ಷಣ (ಬೇಟೆ ಇತ್ಯಾದಿ) ಎಲ್ಲದರ ಹೆಚ್ಚಿನ ಹೊಣೆ ಸಿಂಹಿಣಿಯದ್ದೇ. ಆದರೆ ಸಿಂಹಕ್ಕೆ ಸಿಕ್ಕಿದ ಹೊಗಳಿಕೆ ಸಿಂಹಿಣಿಗಿಲ್ಲವೇ ಇಲ್ಲ. ಅದಿರಲಿ, ಹಿಂದೂಗಳ ಶಕ್ತಿ ದೇವತೆ ಶಿವೆಯ ವಾಹನವೂ ಕೂಡ ಸಿಂಹವೇ ಹೊರತು ಸಿಂಹಿಣಿಯಲ್ಲ.

-ರವಿ ಪುತ್ತೂರ, ದಕ




## ಮರು ಚುನಾವಣೆ ಖರ್ಚನ್ನು ಶಾಸಕರೇ ಭರಿಸಲಿ

ಮೇ ತಿಂಗಳಲ್ಲಿ ವಿಧಾನಸಭೆಗೆ ಚುನಾವಣೆ ನಡೆದಿದ್ದು ಸರಿಯಷ್ಟೆ. ಆಗ ಕೆಲವು ಲೋಕಸಭಾ ಸದಸ್ಯರುಗಳು ವಿಧಾನಸಭೆಗೆ ಸ್ಪರ್ಧಿಸಿ, ಗೆದ್ದು, ವಿಧಾನಸಭಾ ಸದಸ್ಯರಾದರು. ಆಗ ಆ ಲೋಕಸಭಾ ಸದಸ್ಯರ ಸ್ಥಾನಗಳು ಖಾಲಿಯಾದವು. ಈಗ ಆ ಸ್ಥಾನಗಳಿಗೆ ಮರುಚುನಾವಣೆಯಾಗಬೇಕು. ಚುನಾವಣೆಗೆ ಅಪಾರವಾದ ಖರ್ಚು ತಗಲುತ್ತದೆ..... ಅಲ್ಲವೇ? ಆ ಖರ್ಚನ್ನು ಯಾರು ಕೊಡುತ್ತಾರೆ? ಜನರು ಇವರಲ್ಲಿ ವಿಶ್ವಾಸವಿಟ್ಟು ಲೋಕಸಭಾ ಸದಸ್ಯರನ್ನಾಗಿ ಆರಿಸಿದ್ದು ಆ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಲೆಂದೋ? ಇಲ್ಲಾ ಚೆಲ್ಲಾಟ ಆಡಲಿಕ್ಕೋ? ಹೋಗಲಿ, ಆ ಕ್ಷೇತ್ರದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಸಾಧಿಸಿ, ಅಲ್ಲಿ ಕೆಲಸ ಮಾಡಲು ಏನೂ ಉಳಿದಿಲ್ಲ ಎನ್ನುವಂತಿದೆಯಾ? ಅದೂ ಇಲ್ಲ. ಆದ್ದರಿಂದ ಮರು ಚುನಾವಣೆಗೆ ತಗಲುವ ಖರ್ಚನ್ನೆಲ್ಲಾ ಇವರೇ ಕೊಡಬೇಕು. (ಸರ್ಕಾರಕ್ಕೆ ತಗಲುವ ಖರ್ಚನ್ನು ಮಾತ್ರ ಅಲ್ಲ, ಮರುಚುನಾವಣೆಗೆ ಸ್ಪರ್ಧಿಸುವ ಎಲ್ಲಾ ಅಭ್ಯರ್ಥಿಗಳ ಖರ್ಚನ್ನೂ ಸೇರಿಸಿ ಕೊಡಬೇಕು). ಜೊತೆಗೆ 10 ಕೋಟಿ ರೂ. ದಂಡವನ್ನು ಕೊಡಬೇಕು. ಈ ಪ್ರಶ್ನೆಗೆ ಸಂಬಂಧಿಸಿದವರೆಲ್ಲಾ ಉತ್ತರಿಸಬೇಕು. ಅದರಲ್ಲೂ ಎಚ್.ಡಿ.ಕುಮಾರಸ್ವಾಮಿಯವರು ತಪ್ಪದೆ ಉತ್ತರಿಸಲಿ. ಏಕೆಂದರೆ, ಒಂದು ಪಕ್ಷದ ಮುಖ್ಯಸ್ಥರೂ, ಮಾಜಿ ಮುಖ್ಯಮಂತ್ರಿಗಳೂ ಆದ ಇವರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದು ಜನಸಾಮಾನ್ಯರು ನಿರೀಕ್ಷಿಸುತ್ತಾರೆ.

ಹಾಗೆಯೇ ಕೆಲವು BBMP ಸದಸ್ಯರು ಸಹ ವಿಧಾನಸಭೆಗೆ ಸ್ಪರ್ಧಿಸಿ MLAಗಳಾಗಿದ್ದಾರೆ. ಇವರುಗಳ ಬದಲು BBMPಗೆ ಹೊಸ ಸದಸ್ಯರನ್ನು ಆಯ್ಕೆ ಮಾಡಲು ಬೇಕಾದ ಖರ್ಚನ್ನೆಲ್ಲಾ ಇವರು ಭರಿಸಲಿ. ಜೊತೆಗೆ 5 ಕೋಟಿ ರೂ. ದಂಡವನ್ನೂ ಕೊಡಲಿ.

ಪ್ರಜಾಪ್ರತಿನಿಧಿಗಳೇ ಹೀಗೆ ಬೇಜವಾಬ್ದಾರಿಯಿಂದ ನಡೆದುಕೊಂಡರೆ ಪ್ರಜಾಪ್ರಭುತ್ವ ಯಶಸ್ವಿಯಾಗಲು ಸಾಧ್ಯವಿದೆಯೇ?

- ವೀರಬ್ಬಿನಯ್ಯ, ಬೆಂಗಳೂರು

ಪ್ರಿಯ ... ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ... 9980331427 ... [illegible]

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 10-07-2013 RNI No. KARKAN2005/1464



# 'ಬಿಗ್‌ಬಾಸ್-2' ಯಾರು?

ಇನ್ನು ಕೆಲವೇ ದಿನಗಳಲ್ಲಿ ಕನ್ನಡ ಟಿವಿ ಲೋಕದ ಅತ್ಯಂತ ಅದ್ದೂರಿ ನಿರ್ಮಾಣದ ರಿಯಾಲಿಟಿ ಶೋ 'ಬಿಗ್ ಬಾಸ್' ಕೊನೆಗೊಳ್ಳಲಿದೆ. ಜೂನ್ 28 ರಂದು 'ಬಿಗ್ ಬಾಸ್'ನ ವಿಜೇತ ಅಭ್ಯರ್ಥಿ ಯಾರೆಂದು ಬಹಿರಂಗವಾಗಲಿದೆ. ಅದಕ್ಕಿಂತ ಮುಖ್ಯ ಸುದ್ದಿಯೆಂದರೆ 'ಈ ಟಿವಿ' ಚಾನೆಲ್ ಪ್ರಸಾರ ಮಾಡಲು ಉದ್ದೇಶಿಸಿರುವ 'ಬಿಗ್‌ಬಾಸ್-2' ಕಾರ್ಯಕ್ರಮವನ್ನು ನಡೆಸಿಕೊಡಲು ಸುದೀಪ್ ನಿರಾಕರಿಸಿದ್ದಾರೆಂಬುದು. ಇದರಿಂದಾಗಿ ಸಹಜವಾಗಿಯೇ ಮುಂದಿನ 'ಬಿಗ್‌ಬಾಸ್' ಕಾರ್ಯಕ್ರಮವನ್ನು ಯಾರು ನಡೆಸಿಕೊಡುತ್ತಾರೆ? ಸುದೀಪ್ ಸ್ಥಾನವನ್ನು ಯಾರು ಅಲಂಕರಿಸುತ್ತಾರೆ? ಎಂಬ ಬಗ್ಗೆ ಅಲ್ಲಲ್ಲಿ ಚರ್ಚೆ ಆರಂಭವಾಗಿದೆ. ಸದ್ಯದ ಮಟ್ಟಿಗೆ ಸುದೀಪ್ ಸ್ಥಾನವನ್ನು ಸಮರ್ಥವಾಗಿ ತುಂಬಲು ಕನ್ನಡ ಚಿತ್ರರಂಗದಲ್ಲಿ ಮತ್ತೊಬ್ಬ ನಟ ಸಿಗುವುದಿಲ್ಲ ಎಂಬುದೇ ಹೆಚ್ಚಿನವರ ಅಭಿಪ್ರಾಯ. ಏಕೆಂದರೆ, ಬಿಗ್‌ಬಾಸ್‌ನ ನಿರೂಪಣಾ ಶೈಲಿಯಿಂದಾಗಿ ಸುದೀಪ್ ಕರ್ನಾಟಕದ ಮನೆಮಾತಾಗಿದ್ದಾರೆ. ಆತನ ಗಡುಸಾದ ಧ್ವನಿ, ಮಾತನಾಡುವ ಶೈಲಿ, ನಿರೂಪಣೆಯಲ್ಲಿನ ವಿಡಂಬನೆ, ತಮಾಷೆ, ವ್ಯಂಗ್ಯ ಕೃತಕ ಸಿಟ್ಟು ಇವೆಲ್ಲವೂ ಸುದೀಪ್ ಪ್ರತಿಭೆಯನ್ನು ಅನಾವರಣಗೊಳಿಸಿವೆ. ಹೀಗಾಗಿ 'ಬಿಗ್‌ಬಾಸ್-2'ನೇ ಕಂತನ್ನೂ ಸುದೀಪ್ ನೆರವೇರಿಸಿಕೊಡಬೇಕೆಂದು ಆತನ ಅಭಿಮಾನಿಗಳು ಒತ್ತಾಯಿಸುತ್ತಿದ್ದಾರೆ. ಆದರೆ ಸುದೀಪ್ ಮಾತ್ರ ತಾನು ಯಾವುದೇ ಕಾರಣಕ್ಕೂ ಮತ್ತೊಮ್ಮೆ ಈ ಕಾರ್ಯಕ್ರಮವನ್ನು ನಡೆಸುವುದಿಲ್ಲ ಎಂದು ಟ್ವೀಟ್ ಮಾಡಿದ್ದಾರೆ. 'ನಾನು ಈ ಹಂತಕ್ಕೆ ತಲುಪಿರುವುದು ಸಿನಿಮಾದಿಂದ ಮತ್ತು ಪ್ರೇಕ್ಷಕರ ಹಾಗು ಅಭಿಮಾನಿಗಳ ಬೆಂಬಲದಿಂದ. ಹೀಗಾಗಿ ನಾನು ಮತ್ತೆ ಸಿನಿಮಾ ಮಾಡಬೇಕಾಗಿದೆ. ಪ್ರೇಕ್ಷಕರನ್ನು ರಂಜಿಸಬೇಕಾಗಿದೆ. ಹೀಗಾಗಿ 'ಬಿಗ್‌ಬಾಸ್-2'ನ್ನು ಬಹುಶಃ ನನಗಿಂತ ಉತ್ತಮವಾಗಿ ನಿರೂಪಿಸುವ ವ್ಯಕ್ತಿ ಯಾರಾದರೂ ಸಿಗಬಹುದು' ಎಂದು ಬಹಳ ಜಾಣ್ಮೆಯಿಂದ ಹೇಳಿಕೊಂಡಿದ್ದಾರೆ.

ಅಂದಹಾಗೆ, ಉಪೇಂದ್ರ ಮತ್ತು ರಮೇಶ್ ಅರವಿಂದ್ ಈ ಕಾರ್ಯಕ್ರಮವನ್ನು ನಡೆಸಿಕೊಡಲು ಬೇಕಾದ ಎಲ್ಲ ಅರ್ಹತೆಯನ್ನು ಹೊಂದಿದ್ದಾರೆ ಎಂಬುದು ಹಲವರ ಅಭಿಪ್ರಾಯವಾಗಿದೆ. ಇನ್ನೂ ಕೆಲವರು ಜಗ್ಗೇಶ್ ಹೆಸರನ್ನೂ ಸೂಚಿಸುತ್ತಿದ್ದಾರೆ.







# ಒಡೆದಾಳಲು ಸಂಚು

ಹಲವು ಸಮಯದಿಂದ ಸಿನಿಮಾ ಲೋಕದ ನೃತ್ಯಗಾರರ ಸಂಘ ಮತ್ತು ಕಾರ್ಮಿಕ ಒಕ್ಕೂಟದ ನಡುವೆ ಇದ್ದ ಅಸಮಾಧಾನ ಮೊನ್ನೆ ಭುಗಿಲೆದ್ದಿದೆ. ನೃತ್ಯಗಾರರ ಸಂಘದ ಅಧ್ಯಕ್ಷ ರಾಜೇಶ್ ಬ್ರಹ್ಮಾವರ್ ಮತ್ತು ಕಾರ್ಮಿಕ ಒಕ್ಕೂಟದ ಅಧ್ಯಕ್ಷ ಅಶೋಕ್ ನಡುವಿನ ಬಲಪ್ರದರ್ಶನದ ಮೊದಲ ಕಂತು ಮೊನ್ನೆ ನಡೆದುಹೋಗಿದೆ. ಇವರಿಬ್ಬರ ವೈಯಕ್ತಿಕ ಪ್ರತಿಷ್ಠೆ ಮತ್ತು ಅಹಂಕಾರದಿಂದಾಗಿ ಚಿತ್ರರಂಗದ ಇಮೇಜ್‌ಗೆ ಭಾರೀ ಧಕ್ಕೆಯಾಗಿದೆ ಎಂಬುದು ಮಾತ್ರ ಸತ್ಯ.



ಈ ಬಾರಿಯ ಬೀದಿಜಗಳದ ಕೇಂದ್ರ ಬಿಂದು ರಾಜೇಶ್ ಬ್ರಹ್ಮಾವರ್. ಕನ್ನಡ ಚಿತ್ರರಂಗದ ಕೆಲವು ನಿರ್ಮಾಪಕರು ನೃತ್ಯಗಾರರಿಗೆ ನಿಗದಿಪಡಿಸಿದಷ್ಟು ಸಂಭಾವನೆ ನೀಡಿಲ್ಲ ಎಂದು ರಾಜೇಶ್ ಮೊದಲಿಗೆ ನಿರ್ಮಾಪಕರ ವಿರುದ್ಧ ಖ್ಯಾತೆ ತೆಗೆದರು. ಆನಂತರ ಇಂತಹ ನಿರ್ಮಾಪಕರ ವರ್ತನೆಯನ್ನು ಛೇಂಬರ್ ಅಧ್ಯಕ್ಷರಿಗೆ ಲಿಖಿತ ಪತ್ರದ ಮುಖಾಂತರ ತಿಳಿಸಿ ನ್ಯಾಯ ದೊರಕಿಸಿಕೊಡುವಂತೆ ಕೇಳಿಕೊಂಡರು. ಆದರೆ ಛೇಂಬರ್ ಈ ವಿಷಯವನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳದೇ ಸುಮ್ಮನಿತ್ತು.

ಆಗ ರಾಜೇಶ್ ತಮ್ಮ ಸಂಘದ ಕೆಲವು ಸದಸ್ಯರ ಜೊತೆಗೆ ಬಾಕಿ ಹಣ ಕೊಡಬೇಕಿದ್ದ ನಿರ್ಮಾಪಕರ ಮನೆಗೇ ಹೋದರು. ಯಾವಾಗ ನೃತ್ಯಗಾರರು ಮನೆಗೆ ಬಂದರೋ, ಆಗ ಚೇಂಬರ್ ಅಧ್ಯಕ್ಷರಾದ ವಿಜಯ್‌ಕುಮಾರ್ ಮತ್ತು ಒಕ್ಕೂಟದ ಅಧ್ಯಕ್ಷರಾದ ಅಶೋಕ್ ಎಚ್ಚೆತ್ತರು. "ಈ ರೀತಿ ನೇರ ಮನೆಗೆ ಹೋಗಿ ಹಣ ಕೇಳುವುದು ಸರಿಯಲ್ಲ, ನಿರ್ಮಾಪಕರು ನಮ್ಮ ಅನ್ನದಾತರು. ಅವರಿಗೆ ನಾವು ಗೌರವ ನೀಡಬೇಕು" ಎಂದೆಲ್ಲ ಅಶೋಕ್ ಮತ್ತು ವಿಜಯ್‌ಕುಮಾರ್ ಭಾಷಣ ಹೊಡೆದರು.

"ಕೆಲಸ ಮಾಡಿದವರಿಗೆ ನಿರ್ಮಾಪಕರು ಸಂಭಾವನೆ ನೀಡುವುದಿಲ್ಲ, ನ್ಯಾಯ ಕೇಳಿದರೆ ಛೇಂಬರ್‌ನವರು ನ್ಯಾಯ ಒದಗಿಸಿಕೊಟ್ಟಿಲ್ಲ, ಹೀಗಾಗಿ ನಮಗೆ ನಿರ್ಮಾಪಕರ ಮನೆಗೆ ಹೋಗದೆ ಬೇರೆ ಉಪಾಯ ವಿರಲಿಲ್ಲ" ಎಂದು ರಾಜೇಶ್ ತಮ್ಮ ಸಂಘದವರ ವರ್ತನೆಯನ್ನು ಸಮರ್ಥಿಸಿಕೊಂಡರು.

ಮೇಲ್ನೋಟಕ್ಕೇ ನೃತ್ಯಗಾರರ ಸಂಘದವರ ಅವವಾಲ... ಅರ್ಥವಿದೆ. ಕೆಲಸ ಮಾಡಿದವರಿಗೆ ಸಂಭಾವನೆ ನೀಡಬೇಕಾ... ಧರ್ಮ. ಆದರೆ ರಾಜೇಶ್ ಬ್ರಹ್ಮಾವರ... ಒಕ್ಕೂಟದ ಅಧ್ಯಕ್ಷ ಅಶೋಕ್‌ಗೂ ಬ... ವರ್ಷಗಳಿಂದ ಸಂಬಂಧ ಕೆಟ್ಟುಹೋ... ಅಶೋಕ್ ಅವರ ಅನೇಕ ನಿರ್ಧಾರಗ... ವಿರೋಧಿಸಿದ ರಾಜೇಶ್ ನೃತ್ಯಗಾರರ ಸಂಘ... ಗಟ್ಟಿಯಾದ ಸ್ಥಾನವನ್ನು ಗಳಿಸಿಕೊಂಡಿದ್ದ... ಇದೇ ಸಂದರ್ಭದಲ್ಲಿ ನೃತ್ಯಗಾರರ ಸಂಘ... ಎರಡು ಹೋಳು ಮಾಡಿದರೆ ತ... ಲಾಭವಾಗಬಹುದೆಂದು ಅಶೋಕ್ ಲೆಕ್ಕಾ... ಹಾಕಿ ಹೊಸ ಸಂಘವೊಂದನ್ನು ಸ್ಥಾಪಿಸಲು ಮುಂದಾದರು. ನೃತ್ಯಗಾ... ಸಂಘದಲ್ಲಿ ಅತ್ಯಂತ ಸಕ್ರಿಯವಾಗಿರುವ ಮದನ್ ಹರಿಣಿಯ... ನೇತೃತ್ವದಲ್ಲಿ ಒಂದು ಸಂಘವನ್ನು ಸ್ಥಾಪಿಸಿ ಅಶೋಕ್ ಒಂದು ... ಮುಂದೆ ಹೋದರು. ಆದರೆ ನೃತ್ಯಗಾರರ ಸಂಘದಲ್ಲಿರುವ ಇಮ್ರಾ... ಹರ್ಷ ಮೊದಲಾದ ಜನಪ್ರಿಯ ನೃತ್ಯ ನಿರ್ದೇಶಕರ ಸಮೇತ ಬಹು... ಎಲ್ಲರೂ ರಾಜೇಶ್ ಪರವಾಗಿ ಈಗ ಗಟ್ಟಿಯಾಗಿ ನಿಂತಿದ್ದಾರೆ.

ಈಗ ನೃತ್ಯಗಾರರ ಸಂಘವು ಸಿನಿಮಾ ನಿರ್ಮಾಪಕ... ಮುಂಗಡವಾಗಿ ಹಣ ನೀಡಿದರೆ ಮಾತ್ರ ಕೆಲಸ ಮಾಡುತ್ತ... ಎಂದು ಹೇಳುತ್ತಿದ್ದಾರೆ. ಆದರೆ ಛೇಂಬರ್ ಮತ್ತು ಒಕ್ಕೂಟ "ಹಣ... ಮೊದಲೇ ಪಡೆಯುವುದು ಸರಿಯಲ್ಲ" ಎಂದು ವಾದಿಸು... ಜೊತೆಗೆ ಒಕ್ಕೂಟದ ಅಧ್ಯಕ್ಷ ಅಶೋಕ್ "ನೀವು ನಿಮ್ಮ ಸಂ... ಅಧ್ಯಕ್ಷ ರಾಜೇಶ್ ಬ್ರಹ್ಮಾವರ್ ಅವರನ್ನು ಹೊರತುಪಡಿಸಿ ಬಂ... ನಿಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸಲು ನಾವು ಸಿದ್ಧ" ಎಂ... ಆಮಿಷ ಒಡ್ಡುತ್ತಿದ್ದಾರೆ.

ಇದೆಲ್ಲದರಿಂದಾಗಿ ಈಗ ನೃತ್ಯಗಾರರ ಸಂಘದಲ್ಲಿ ಒಡ... ಉಂಟಾಗಿದೆ. ಬರುವ ದಿನಗಳಲ್ಲಿ ರಾಜೇಶ್ ಬ್ರಹ್ಮಾವರ್ ಮ... ಮದನ್ ಹರಿಣಿ ಗುಂಪುಗಳ ನಡುವೆ ಎಂತಹ ಕದನಗ... ನಡೆಯುತ್ತವೋ ಬಲ್ಲವರಿಲ್ಲ.

# 'ಕದನ'ಕ್ಕೆ ಶೈಲು ಆಜ್ಯ!

ಮೊನ್ನೆ 'ದಿಲ್‌ವಾಲಾ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಅದರ ನಿರ್ಮಾಪಕ ಶೈಲೇಂದ್ರಬಾಬು ಒಂದು ಹೇಳಿಕೆಯನ್ನು ನೀಡಿದರು. ಅದೇನೆಂದರೆ "ಕನ್ನಡ ಚಿತ್ರರಂಗದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ರಾಧಿಕಾ ಪಂಡಿತ್ ನಂಬರ್ ಒನ್ ನಾಯಕಿ" ಎಂಬುದು.

"ರಾಧಿಕಾ ಮೂರು ಬಾರಿ ಫಿಲ್ಮ್ ಫೇರ್ ಪ್ರಶಸ್ತಿ ಗೆದ್ದಿದ್ದಾರೆ. ರಾಜ್ಯ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಅವರು ನಟಿಸಿದ ಚಿತ್ರಗಳೆಲ್ಲವೂ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತಿವೆ. ಇದರ ಜೊತೆಜೊತೆಗೆ ಈಕೆ ಹೊಸ ನಾಯಕ ನಟರೊಂದಿಗೂ ನಟಿಸುತ್ತಿದ್ದಾರೆ. ಇವೆಲ್ಲವನ್ನು ಗಮನಕ್ಕೆ ತೆಗೆದುಕೊಂಡರೆ ರಾಧಿಕಾ ಪಂಡಿತ್ ಕನ್ನಡ ಚಿತ್ರರಂಗದ ನಂಬರ್ ಒನ್ ನಾಯಕಿ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ" ಎಂದು ಶೈಲೇಂದ್ರಬಾಬು ಹೇಳಿದರು. ವಿಷಯ ಏನೆಂದರೆ ಶೈಲೇಂದ್ರಬಾಬು ಅವರ ಮಗ ಈ ಚಿತ್ರದ ನಾಯಕ. ಆ ಕಾರಣಕ್ಕೆ ರಾಧಿಕಾ ಪಂಡಿತಳನ್ನು ಶೈಲೇಂದ್ರಬಾಬು ಇಷ್ಟು ಹೊಗಳಿ ಅಟ್ಟಕ್ಕೇರಿಸಿದ್ದಾರೋ? ಅಥವಾ ಇವರ ಮಗನ ಜೊತೆಗೆ ನಟಿಸಲು ನಿರಾಕರಿಸಿದ ನಾಯಕಿಯರನ್ನು ಮನಸ್ಸಿನಲ್ಲಿಟ್ಟುಕೊಂಡು ಪರೋಕ್ಷವಾಗಿ ಹೀಗೆ ಹೇಳಿದ್ದಾರೋ? ಗೊತ್ತಿಲ್ಲ.

ಆದರೆ ಸಮಸ್ಯೆ ಅದಲ್ಲ, ಶೈಲೇಂದ್ರಬಾಬುರವರ ಹೇಳಿಕೆಯಿಂದಾಗಿ ಮುಂದಿನ ದಿನಗಳಲ್ಲಿ ರಾಧಿಕಾ ಪಂಡಿತ್ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೋ ಏನೊ? ಇತ್ತೀಚೆಗೆ ಆಂಗ್ಲ ಪತ್ರಿಕೆಯೊಂದು 'ಮೋಸ್ಟ್ ಡಿಸಾಯ ರೆಬಲ್ ಫೇಸ್' ಎಂಬ ಸಮೀಕ್ಷೆಯಲ್ಲಿ ರಮ್ಯಳಿಗೆ ಮೊದಲ ಸ್ಥಾನವನ್ನು ನೀಡಿತ್ತು, ಅದನ್ನು ಟೀಕಿಸಿ ಮುಂಬೈಯಿಂದ ನಿಧಿ ಸುಬ್ಬಯ್ಯ ಏನೇನೋ ಟ್ವೀಟ್ ಮಾಡಿದ್ದಳು. ಆಮೇಲೆ ಅದಕ್ಕೆ ರಮ್ಯ ಕೂಡ ಟ್ವಿಟ್ಟರ್ ಮೂಲಕ ಉತ್ತರಿಸಿದ್ದಳು. ಈ ಮಧ್ಯೆ ರಾಗಿಣಿ ಕೂಡ ಟ್ವಿಟ್ಟರ್‌ನಲ್ಲಿ ಒಂದೆರಡು ಬಾರಿ ತನ್ನನ್ನು ಟೀಕಿಸಿದವರಿಗೆ ಉತ್ತರ ನೀಡಿದ್ದಳು.




ಹೀಗೆ ಕನ್ನಡ ಚಿತ್ರರಂಗದ ಹಲವು ನಾಯಕಿಯರ ನಡುವೆ 'ಟ್ವಿಟ್ಟರ್ ಕದನ' ನಡೆಯಿತು. ಆದರೆ ರಾಧಿಕಾ ಪಂಡಿತ್ ಮಾತ್ರ ಈ ಟ್ವಿಟ್ಟರ್ ಕದನದಲ್ಲಿ ತಲೆ ಹಾಕಲಿಲ್ಲ. ಈಗ ಆಕೆಯನ್ನು ಉದ್ಯಮದ ಓರ್ವ ಪ್ರತಿಷ್ಠಿತ ನಿರ್ಮಾಪಕ 'ನಂಬರ್ ಒನ್ ನಾಯಕಿ' ಎಂದು ಬಹಿರಂಗವಾಗಿ ಘೋಷಿಸಿರುವುದರಿಂದ ಮುಂದಿನ ದಿನಗಳಲ್ಲಿ ಈ 'ಟ್ವಿಟ್ಟರ್ ನಾಯಕಿಯರು' ಏನು ಮಾಡುತ್ತಾರೆ ನೋಡಬೇಕು.




# 1980-2012 ಅಸಂಬದ್ಧ ಹೋಲಿಕೆ

ಗಣೇಶ್ ನಟಿಸಿದ 'ಆಟೋರಾಜ' ಚಿತ್ರ ಕಳೆದ ವಾರ ಭಾರೀ ನಿರೀಕ್ಷೆ... ನಡುವೆ ಬಿಡುಗಡೆಯಾಯಿತು. ಈ ಚಿತ್ರ ಗಣೇಶ್‌ಗೆ ಹೊಸ ವರ್ಚಸ್ಸು, ಹೊ... ತಾರಾಮೌಲ್ಯ ತಂದುಕೊಡುತ್ತದೆ ಎಂದು ಅವರ ಅಭಿಮಾನಿಗಳು ನಂಬಿದ್ದರು. ಚಿತ್ರ... ನಿರ್ಮಾಪಕರೂ ಭಾರೀ ಪಬ್ಲಿಸಿಟಿ ಮಾಡಿ ಚಿತ್ರದ ಬಗ್ಗೆ ಹೆಚ್ಚಿನ ಕಾತುರವ... ಹುಟ್ಟುಹಾಕಿದ್ದರು.

ಅದರಲ್ಲೂ ಚಿತ್ರದ ಪ್ರಚಾರ ಸಾಮಗ್ರಿಯಲ್ಲಿ ಶಂಕರನಾಗ್ ಅವರ ಹೆಸರು ಮ... ಫೋಟೋಗಳನ್ನು ಯಥೇಚ್ಛವಾಗಿ ಬಳಸಿದ್ದರು. ಸಾಲದ್ದಕ್ಕೆ ಚಿತ್ರರಂಗದ ಇನ್ನೂ ಏಳೆಂ... ನಾಯಕನಟರ ಫೋಟೋಗಳನ್ನೂ ಜಾಹೀರಾತುಗಳಲ್ಲಿ ಬಳಸಿದ್ದರು. ಈ ಪ್ರಚಾರದ ಅಬ್... ನೋಡಿದರೆ ದಿ|| ಶಂಕರ ನಾಗ್ ಮತ್ತೆ ಬೆಳ್ಳಿತೆರೆಯ ಮೇಲೆ ಗಣೇಶ್ ಮುಖಾಂತರ ಕನ್ನಡಿಗರನ್ನು ರಂಜಿಸಲು ಬರುತ್ತಿದ್ದಾರೇನೋ ಎನ್ನುವಂತಿತ್ತು.




ಆದರೆ ಚಿತ್ರ ನೋಡಿದ ನಂತರ ಶಂಕರನಾಗ್ ಅಭಿಮಾನಿಗಳಿಗೆ ಮಾತ್ರವಲ್ಲ, ಸ್ವ... ಗಣೇಶ್ ಅಭಿಮಾನಿಗಳಿಗೂ ಭಾರೀ ನಿರಾಶೆಯಾಗಿದೆ. ಈ ಸಿನಿಮಾದ ಪ್ರಚಾರ... ಅಬ್ಬರಕ್ಕೂ, ಸಿನಿಮಾದ ಕಥೆಗೂ ಸಂಬಂಧವೇ ಇಲ್ಲ.

ಈ ಹಿಂದೆ ಉಪೇಂದ್ರ ಕೂಡ ಶಂಕರನಾಗ್ ಅವರ ಜನಪ್ರಿಯತೆಯನ... ಬಳಸಿ 'ಆಟೋ ಶಂಕರ್' ಎಂಬ ಚಿತ್ರದಲ್ಲಿ ನಟಿಸಿದ್ದರು. ರಾಮು ನಿರ್ಮಾಣ... ಆ ಚಿತ್ರಕ್ಕೂ ಪ್ರೇಕ್ಷಕರು ಅಂದು ಸಪ್ಪೆಯಾಗಿ ಪ್ರತಿಕ್ರಿಯಿಸಿದ್ದರು. ಈ ಬಾ... ಅದೇ ಸಪ್ಪನೆಯ ಪ್ರತಿಕ್ರಿಯೆ ಗಣೇಶ್‌ಗೂ ದೊರೆತಿದೆ. ಅಂದರೆ, ಯಾವುದ... ಕಾರಣಕ್ಕೂ ಕನ್ನಡ ಚಿತ್ರರಂಗದಲ್ಲಿ ಮತ್ತೊಬ್ಬ ಶಂಕರ್ ನಾಗ್ ಹುಟ್ಟಿಬರಲ... ಸಾಧ್ಯವಿಲ್ಲ ಎಂಬ ತೀರ್ಪನ್ನು ಪ್ರೇಕ್ಷಕರು ನೀಡಿದಂತಿದೆ.

ಉದಯ ಪ್ರಕಾಶ್ ನಿರ್ದೇಶನದ 'ಆಟೋ ರಾಜ' ಪ್ರಚಾರದಲ್ಲಿ ಮಾ... ಗೆದ್ದಿತೇ ವಿನಃ ಬಾಕ್ಸ್ ಆಫೀಸ್‌ನಲ್ಲಲ್ಲ ಎಂಬುದು ಈಗ ಸ್ಪಷ್ಟವಾಗಿದೆ.

● ಶೆ...




ಚಾರು ಪ್ರಕಾಶನದ
ಜಾಬ್ ನ್ಯೂಸ್
ಹೊಸ ಸಂಚಿಕೆ

ಲಂಕೇಶ್ ಬಳಗದ
ಹೊಸ ಸಂಚಿಕೆಗಳು
ಈಗ ಎಲ್ಲೆಡೆ ಲಭ್ಯ
ಪ್ರತಿಗಳಿಗಾಗಿ
080-26676427
9880302817

ಗೈಡ್ ಪ್ರಕಾಶನದ
ಗೈಡ್
ಜುಲೈ 2013ರ
ಹೊಸ ಸಂಚಿಕೆ




PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536 E-mail :lankesh70@rediffmail...